ನಮ್ಮ ಲೇಖಕಿಯರು

ಸಂಪಾದಕರು :

ಕುಲಶೇಖರಿ

ಮತ್ತು

ವೈ. ಕೆ. ಸಂಧ್ಯಾಶರ್ಮ

ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜಪೇಟೆ : : ಬೆಂಗಳೂರು-೧೮

೧೯೮೩

Namma Lekhakiyaru Edited by Kulashekhari and
Y. K. Sandhya Sharma, Published by Kannada Sahitya
Parishat, Chamarajpet, Bangalore-18, Size Demy Octavo.
Pages 284+16

ಪ್ರಥಮ ಮುದ್ರಣ : ೧೯೮೨

ಬೆಲೆ : ಹತ್ತು ರೂಪಾಯಿಗಳು

ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು–೧೮

ಮುದ್ರಕರು :

ಅಶ್ವಥ್ ಪ್ರಿಂಟರ್ಸ್
೪೪೩, ಮೊದಲನೇ ಮುಖ್ಯ ರಸ್ತೆ,
೪೪ನೇ ಅಡ್ಡ ರಸ್ತೆ, ೮ನೇ ಘಟ್ಟ
ಜಯನಗರ, ಬೆಂಗಳೂರು-೮೨

"ನಮ್ಮ ಲೇಖಕಿಯರು" ಕುರಿತು

ಕನ್ನಡ ಸಾಹಿತ್ಯದ ಎರಡು ಸಾವಿರ ವರ್ಷಗಳ ಚರಿತ್ರೆಯಲ್ಲಿ ಸಾವಿರಾರು ಜನ ಲೇಖಕರು ಕೃತಿ ರಚನೆ ಮಾಡಿದ್ದಾರೆ. ಇವರಲ್ಲಿ ವೈವಿಧ್ಯವಿದೆ, ವಿಸ್ತಾರವಿದೆ. ರಾಜರು, ಮಂತ್ರಿಗಳು ವರ್ತಕರು–ಹೀಗೆ ಹಲವು ವೃತ್ತಿಯ ಅಧಿಕಾರದ ಮನೋಧರ್ಮದ ಲೇಖಕರು ಸಾಹಿತ್ಯ ರಚಿಸಿದ್ದಾರೆ. ಕನ್ನಡ ಸಾಹಿತ್ಯದ ಮತ್ತು ಲೇಖಕರ ಒಂದು ಸಂಕ್ಷಿಪ್ತ ಹಾಗೂ ವ್ಯವಸ್ಥಿತ ಪರಿಚಯವನ್ನು ಮೊತ್ತಮೊದಲು ಮಾಡಿಕೊಟ್ಟವರು ರಾ. ನರಸಿಂಹಾಚಾರ್ಯರು. ಅಲ್ಲಲ್ಲಿ ವಿದ್ವತ್‌ಪೂರ್ಣವಾದ ಪತ್ರಿಕೆಗಳಲ್ಲಿ ಬಿಡಿಬಿಡಿ ಕೃತಿಗಳನ್ನು, ಕವಿಗಳನ್ನು, ಕಾಲವನ್ನು ಪರಿಚಯಿಸಲಾಗಿತ್ತು. ಆದರೆ ಅದುವರೆಗೆ ಆ ಪ್ರಮಾಣದ ಆ ವ್ಯಾಪ್ತಿಯ ಪ್ರಯತ್ನವಾಗಿರಲಿಲ್ಲ. ಮೂರು ಸಂಪುಟಗಳಲ್ಲಿ ಪ್ರಕಟವಾದ (ಕರ್ನಾಟಕ) ಕವಿಚರಿತೆ ಇಂದಿಗೂ ವಿಶ್ವಾಸಾರ್ಹವಾದ ಮಾಹಿತಿಗಳನ್ನು ಒದಗಿಸುವ ಆಕರ ಗ್ರಂಥವಾಗಿದೆ. ಅಲ್ಲಿಂದೀಚೆಗೆ ನಡೆದ ಹೊಸ ಸಂಶೋಧನೆಯ ಫಲವಾಗಿ ಬೆಳಕಿಗೆ ಬಂದ ಹೆಚ್ಚಿನ ಅಧಿಕೃತ ಮಾಹಿತಿಗಳನ್ನು ಅಳವಡಿಸಿಕೊಂಡು ಕವಿಚರಿತೆಯ ಪರಿಷ್ಕೃತ ಮುದ್ರಣ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿದೆ.

ಕವಿಚರಿತೆಯ ಮೂರು ಸಂಪುಟಗಳು ಆರಂಭದಿಂದ ೧೯ನೆಯ ಶತಮಾನದವರೆಗಿನ ಲೇಖಕರ ಪರಿಚಯ ಕೊಡುತ್ತದೆ. ಅದರ ಮೂರನೆಯ ಸಂಪುಟ ನಿಂತಲ್ಲಿಂದ ಕಳೆದ ದಶಕದವರೆಗಿನ ಇತರ ನೂರಾರು ಜನ ಲೇಖಕರನ್ನು ಅತಿ ಸಂಗ್ರಹವಾಗಿ ಪರಿಚಯಿಸುವ ಪ್ರಯತ್ನವನ್ನು ಮಿತ್ರರಾದ ವೆಂಕಟೇಶ ಸಾಂಗಲಿಯವರು ಸಿರಿಗನ್ನಡ ಗ್ರಂಥಕರ್ತ ಕೋಶದಲ್ಲಿ ಮುಂದುವರಿಸಿದ್ದಾರೆ. ಇದೀಗ ಅದರ ತಿದ್ದಿದ ಆವೃತ್ತಿಯನ್ನು ಮುದ್ರಿಸಲು ಸಾಹಿತ್ಯ ಪರಿಷತ್ತು ತೊಡಗಿದೆಯೆಂದು ತಿಳಿಸಲು ಸಂತೋಷವೆನಿಸುತ್ತದೆ. ಇದಲ್ಲದೆ ಹೊಸಗನ್ನಡ ಲೇಖಕರನ್ನು

ಅಕಾರಾದಿಯಾದ ವರ್ಗೀಕರಣದಿಂದ ಪರಿಚಯಿಸುವ ಪುಸ್ತಕಗಳೂ, ಲೇಖನಗಳೂ ಪ್ರಕಟವಾಗಿವೆ. ಜಿಲ್ಲಾ ಸಾಹಿತ್ಯ ಸಮ್ಮೇಳನಗಳನ್ನು ನಡೆಸುವ ಕಾಲದಲ್ಲಿ ಆಯಾ ಜಿಲ್ಲೆಯ ಲೇಖಕರ ಪಟ್ಟಿಯನ್ನು ಕೂಡ ಸಿದ್ಧಪಡಿಸಿ ಕೊಟ್ಟಿದ್ದಾರೆ. ಇವು ಆಯಾ ಸಾಂದರ್ಭಿಕ ಸ್ಮರಣ ಸಂಚಿಕೆಗಳಲ್ಲೂ, ಪ್ರತ್ಯೇಕವಾಗಿಯೂ ಪ್ರಕಟವಾಗಿವೆ. ಮಿತ್ರರಾದ ಸೂರ್ಯನಾರಾಯಣ ಚಡಗರು ದಕ್ಷಿಣ ಕನ್ನಡ ಜಿಲ್ಲೆಯ ಲೇಖಕರ ವಾಹಿತಿ ಕೊಡುವ ಹೊತ್ತಗೆಯನ್ನು ಹೊರತಂದಿದ್ದಾರೆ. ಇಂಗ್ಲಿಷಿನಲ್ಲೂ who is who ಎಂಬ ಗ್ರಂಥಗಳು ಹಲವಾರಿವೆ. ಆ ಮಾದರಿಯ ಪ್ರಯತ್ನಗಳು ಕನ್ನಡದಲ್ಲೂ, ಇತರ ಕೆಲವು ಭಾರತೀಯ ಭಾಷೆಗಳಲ್ಲೂ ಸಾಕಷ್ಟು ನಡೆದಿವೆ. ಭಾರತೀಯ ಲೇಖಕರನ್ನು ಪರಿಚಯಿಸುವ ಪುಸ್ತಕವನ್ನು ಇಂಗ್ಲಿಷಿನಲ್ಲಿ ಹೊರತರುವ ಪ್ರಯತ್ನಗಳೂ ನಡೆಯುತ್ತಿವೆ. ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್ತು ಜನಪದ ಕಲಾವಿದರ ಸೂಚಿಯನ್ನು ಪ್ರಕಟಿಸಿತು.

ಇಂಥ ಪ್ರಯತ್ನಗಳಿಗೆ ಇತಿಮಿತಿಗಳಿರುವುದು ಸಹಜ. ಒಬ್ಬ ಅಥವಾ ಕೆಲವು ವ್ಯಕ್ತಿಗಳು ಸೇರಿ ಕೆಲಸ ಮಾಡಿದಾಗಲೂ ಕೊರತೆಗಳು ಉಳಿದುಬಿಡುತ್ತವೆ. ಅದಕ್ಕೆ ಕಾರಣಗಳು ಹಲವು. ಎಲ್ಲ ಹೊಣೆ ಕೇವಲ ಸಂಪಾದಕರ ಮೇಲೇ ಇರುವುದಿಲ್ಲ. ಲೇಖಕರ ಸಹಕಾರ ಮತ್ತಿತರ ನೆರವನ್ನೂ ಅವಲಂಬಿಸಿ ಈ ಕೆಲಸ ಆಗಬೇಕಾಗುತ್ತದೆ. ಇದೊಂದು ಸಾಮೂಹಿಕ ಸಹಕಾರದಿಂದ ಸಾಧ್ಯವಾಗಬೇಕಾದ ಶ್ರಮದ ಕೆಲಸ, ಪ್ರೀತಿಯ ಕಾರ್ಯ. ಆವೃತ್ತಿಯಿಂದ ಆವೃತ್ತಿಗೆ ಸೇರ್ಪಡೆ, ತಿದ್ದುಪಡಿ ಆಗುತ್ತಿರಬೇಕಾಗುತ್ತದೆ. ಈ ಬಗೆಯ ಪುಸ್ತಕಗಳಿಗೆ ಅದು ಅನಿವಾರ್ಯ. ಇವೆಲ್ಲ ಅರೆಕೊರೆಗಳು ಏನಿದ್ದರೂ ಈ ರೀತಿಯ ಗ್ರಂಥಗಳ ಉಪಯುಕ್ತತೆ ಇದ್ದೇ ಇರುತ್ತದೆ. ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೇ ಅಲ್ಲದೆ ಸಾಹಿತ್ಯಾಸಕ್ತರಾದ ಸಾಮಾನ್ಯ ಓದುಗರಿಗೂ ಇವು ನೆರವು ನೀಡುತ್ತವೆ. ಇನ್ನು ಕನ್ನಡವನ್ನೇ ವಿಶೇಷವಾಗಿ ಅಧ್ಯಯನ ಮಾಡುವವರಿಗೆ ಇವು ಸಹಾಯಕ ಆಕರ ಗ್ರಂಥಗಳಾಗಿರುತ್ತವೆ.

ಕನ್ನಡದಲ್ಲಿ ಲೇಖಕಿಯರು ಬಹಳ ಜನರಿದ್ದಾರೆ. ಅಂಥ ಲೇಖಕಿಯರ ಬಳಗ ಖಚಿತವಾಗಿ ಎಷ್ಟಿದೆ, ಯಾರ್ಯಾರು ಎಲ್ಲೆಲ್ಲಿ

ಇದ್ದಾರೆ, ಏನೇನು ಬರೆದಿದ್ದಾರೆ, ಎಲ್ಲಿಯವರು, ಮದುವೆ ಯಾಗಿದ್ದಾರೆಯೆ, ಕೆಲಸದಲ್ಲಿದ್ದಾರೆಯೆ–ಮುಂತಾದ ಕುತೂಹಲ ವನ್ನು ತಣಿಸುವ ಮಾಹಿತಿಗಳನ್ನು ಕೊಡಬಲ್ಲ ಪುಸ್ತಕ ಇದು ವರೆಗೂ ಪ್ರಕಟವಾಗಿರಲಿಲ್ಲ. ಕನ್ನಡ ಸಾಹಿತ್ಯ ಪರಿಷತ್ತು ೧೯೮೦ರಲ್ಲಿ ಅಖಿಲ ಕರ್ನಾಟಕ ಲೇಖಕಿಯರ ಮೊದಲನೆಯ ಸಮ್ಮೇಳನವನ್ನು ಬೆಂಗಳೂರಿನಲ್ಲಿ ಏರ್ಪಡಿಸಿತ್ತು. ಅದು ತುಂಬ ಯಶಸ್ವಿಯಾಗಿ, ನಿರೀಕ್ಷೆಗೂ ಮೀರಿ ಚೆನ್ನಾಗಿ ನಡೆಯಿತಲ್ಲದೆ, ಆ ಸಂದರ್ಭದಲ್ಲಿ ನಮ್ಮ ಲೇಖಕಿಯರ ಸಂಪತ್ತು ಎಷ್ಟು ವಿಪುಲ ವಾಗಿದೆಯೆಂಬುದರ ಕಲ್ಪನೆಯಾಯಿತು. ಅದೇ ಸಮಯದಲ್ಲಿ ಪರಿಷತ್ತಿನ ಲೇಖಕಿಯರ ಸಲಹಾ ಸಮಿತಿ ಸದಸ್ಯರೆಲ್ಲ ನನ್ನನ್ನು ಸಮಗ್ರ ಕನ್ನಡ ಲೇಖಕಿಯರ ಕಿರು ಪರಿಚಯ ಮಾಡಿಕೊಡುವ ಪುಸ್ತಕವೊಂದನ್ನು ಪ್ರಕಟಿಸಲು ಕೇಳಿಕೊಂಡರು. ಅವರ ಅಪೇಕ್ಷೆಯನ್ನು ತಟ್ಟನೆ ಒಪ್ಪಿಕೊಂಡ ಮೇಲೆ ಇದರ ಅಗಾಧತೆ ಅರಿವಿಗೆ ಬಂತು.

ಇದು ದೊಡ್ಡ ಕೆಲಸ, ಕಷ್ಟದ ಕೆಲಸ. ಇದರ ಸಂಪಾದಕ ರಾಗಿದ್ದು ಈ ಕಾರ್ಯವನ್ನು ಆಗುಮಾಡಿಕೊಡಲು ನಮ್ಮ ಮನವಿಯಂತೆ ಶ್ರೀಮತಿ ಕುಲಶೇಖರಿ ಮತ್ತು ಶ್ರೀಮತಿ ಸಂಧ್ಯಾಶರ್ಮ ಒಪ್ಪಿಕೊಂಡು ಬಹಳ ಶ್ರಮ ಪಟ್ಟಿದ್ದಾರೆ. ಶ್ರದ್ಧೆಯಿಂದ ಇದನ್ನು ಒಂದು ರೂಪಕ್ಕೆ ಅಣಿಗೊಳಿಸಿ ನಮ್ಮ ಅಭಿನಂದನೆಗೆ ಪಾತ್ರರಾಗಿದ್ದಾರೆ. ಮೊದಲಿನಿಂದ ಕಡೆಯವರೆಗೆ ಸಮಿತಿಯಲ್ಲಿ ಸದಸ್ಯರಾಗಿದ್ದು ಸೂಚನೆಗಳನ್ನು ನೀಡಿ ಸಹಕರಿ ಸಿದವರು ಶ್ರೀಮತಿಯರಾದ ಟಿ. ಸುನಂದಮ್ಮ, ಎಚ್. ಎಸ್. ಪಾರ್ವತಿ, ಎ. ಪಂಕಜ, ನಿರುಪಮ, ಪದ್ಮಾವತಿ ಬಾಯಿ (ಮಾತಂಗಿ), ಹೇಮಲತಾ ಮಹಿಷಿ, ಎಂ. ಎಸ್. ಬೃಂದಾ, ಗೌರವ ಕಾರ್ಯದರ್ಶಿಗಳಾದ ಲಕ್ಷ್ಮಣ್ ತೆಲಗಾವಿ, ಹೊ. ವೆ. ನಾರಾಯಣ ಸ್ವಾಮಿ, ಕೋಶಾಧಿಕಾರಿಗಳಾದ ಎಂ. ಪಿ. ದೇವ ರಾಜು, ಶೀಘ್ರಲಿಪಿ ಮತ್ತು ಬೆರಳಚ್ಚುಗಾರ್ತಿಯಾದ ಕುಮಾರಿ ಟಿ. ಎ. ಸೀತಾಲಕ್ಷ್ಮಿ ಇವರೆಲ್ಲ ಕೃತಜ್ಞತೆಗೆ ಪಾತ್ರರು. ಕೇವಲ ಹತ್ತು ದಿನಗಳಲ್ಲಿ ಇಡೀ ಪುಸ್ತಕ ಮುದ್ರಿಸಿ, ರಕ್ಷಾಪುಟ ಬರೆಸಿ, ಬ್ಲಾಕು ಮಾಡಿಸಿ ಮುದ್ರಿಸಿ ಸಮಗೆ ಸಕಾಲದಲ್ಲಿ ಹೊರತರಲು ನೆರವಾದ ಅಶ್ವಥ್ ಮುದ್ರಣಾಲಯದ ದಿವಾಕರನಿಗೂ ಪ್ರತ್ಯೇಕ ನೆನಕೆ ಸಲ್ಲುತ್ತದೆ.

ಈ ಪುಸ್ತಕ ಗುಣದೋಷಗಳಿಂದ ಮುಕ್ತವಾಗಿದೆಯೆಂಬ ಭ್ರಮೆಗಳಿಲ್ಲ. ಸಂಪಾದಕರು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ತಮಗೆ ದೊರೆತಷ್ಟು ಮಾಹಿತಿ ಕೊಟ್ಟಿದ್ದಾರೆ. ಎಲ್ಲೊ ಸಾಲ್ಕೈದು ಜನ ಲೇಖಕಿಯರು ವಿವರಗಳನ್ನು ಒದಗಿಸಲಿಲ್ಲವೇ ಹೊರತು ಬಹು ಜನರು ವಿಶ್ವಾಸತೋರಿ ಬಯಸಿದ ದಾಖಲೆಗಳನ್ನಿತ್ತು ಉಪಕರಿಸಿದ್ದಾರೆ. ಆಯಾ ಲೇಖಕಿಯರ ಪರಿಚಯದ ಪುಟದಲ್ಲೇ ಸಾಧ್ಯವಾದಷ್ಟೂ ಅವರವರ ಭಾವ ಚಿತ್ರವನ್ನೂ ಹಾಕಲಾಗಿದೆ. ಇದೊಂದು ವಿಶೇಷವೇನೋ ಹೌದು. ಆದರೆ ಎಷ್ಟೇ ಎಚ್ಚರವಹಿಸಿ ಮುತುವರ್ಜಿ ತೆಗೆದುಕೊಂಡಿದ್ದರೂ, ಆರೇಳು ಹಂತಗಳಲ್ಲಿ ಚಿತ್ರಗಳ ಪಡಿಯಚ್ಚು ಅದಲು ಬದಲುಗೊಂಡು ಬರಬೇಕಾದ ಸ್ಥಳದಲ್ಲಿ ಬರದೆ, ಒಬ್ಬ ಲೇಖಕಿಯ ಹೆಸರು ಇರುವ ಕಡೆ ಇನ್ನೊಬ್ಬ ಲೇಖಕಿಯ ಚಿತ್ರ ಬಂದು ಏನಾದರೂ ಪ್ರಮಾದವಾಗಿದೆಯೊ ಎಂಬ ಭೀತಿ ಕಾಡುತ್ತಲಿದೆ. ಅಂಥ ಅಚಾತುರ್ಯ ಸಂಭವಿಸಿದ್ದರೆ ದಯವಿಟ್ಟು ಲೇಖಕಿಯರೂ, ಓದುಗರೂ ನಮ್ಮ ಗಮನಕ್ಕೆ ತಂದು ಮುಂದೆ ತಿದ್ದಿಕೊಳ್ಳಲು ನೆರವಾಗಬೇಕೆಂದು ವಿಜ್ಞಾಪಿಸುತ್ತೇನೆ. ಲೇಖಕಿಯರ ಜೀವನ ಹಾಗೂ ಕೃತಿ ವಿವರಗಳಲ್ಲೂ ಹೆಚ್ಚು ಕಡಿಮೆಗಳಿದ್ದರೆ ಮರೆಯದೆ ತಿಳಿಸಿದರೆ ಸಹಾಯ ಮಾಡಿದಂತಾಗುತ್ತದೆ.

ಗುಲ್ಬರ್ಗದಲ್ಲಿ ನವೆಂಬರ್ ೨೦, ೨೧ರಂದು ನಡೆಯುತ್ತಿರುವ ಅಖಿಲ ಕರ್ನಾಟಕ ಲೇಖಕಿಯರ ಎರಡನೆಯ ಸಮ್ಮೇಳನದಲ್ಲಿ ಈ ಪುಸ್ತಕವನ್ನು ಬಿಡುಗಡೆ ಮಾಡುತ್ತಿದ್ದೇವೆ. ಕನ್ನಡ ಲೇಖಕಿಯರ ಸಂಖ್ಯೆ, ಸಂಪತ್ತು ಎಷ್ಟು ದೊಡ್ಡದೆಂಬುದು ಈ ಗ್ರಂಥದಿಂದ ಮೊದಲ ಬಾರಿಗೆ ಬೆಳಕಿಗೆ ಬಂದಂತಾಗಿದೆ. ನಮ್ಮ ಲೇಖಕಿಯರ ಕಥೆ, ಕಾದಂಬರಿ, ಕವಿತೆ ಓದಿ ಆನಂದಿಸುವ ಕನ್ನಡ ಜನತೆ ಬಹುಮಟ್ಟಿಗೆ ಎಲ್ಲ ಲೇಖಕಿಯರ ಕಿರು ಪರಿಚಯ ಮಾಡಿಕೊಡುವ ಈ ಪುಸ್ತಕವನ್ನೂ ಪ್ರೀತಿಯಿಂದ ಬರಮಾಡಿಕೊಳ್ಳುವರೆಂದು ನಿರೀಕ್ಷಿಸುತ್ತೇನೆ.

ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಹಂಪ. ನಾಗರಾಜಯ್ಯ

ಎರಡು ಮಾತು

ಸರಸ್ವತಿಯ ದೇಗುಲವಾದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡು - ನುಡಿ, ಸಾಹಿತ್ಯ - ಸಂಸ್ಕೃತಿಗಳಿಗಾಗಿ ಅನೇಕ ವಿಧಗಳಲ್ಲಿ ಸೇವೆ ಸಲ್ಲಿಸುತ್ತಿದೆ. ಆ ಪರಂಪರೆಗೊಂದು ನಿದರ್ಶನವಾಗಿ "ನಮ್ಮ ಲೇಖಕಿಯರು" ಕನ್ನಡದಲ್ಲಿ ಬರೆಯುತ್ತಿರುವ ಮಹಿಳಾ ಸಾಹಿತಿಗಳ ಪರಿಚಯವನ್ನು ಮಾಡಿಕೊಡುವ ಪುಸ್ತಕವಾಗಿದೆ. ಕರ್ನಾಟಕದಲ್ಲಿರುವ ಹಾಗೂ ಹೊರನಾಡಿನಲ್ಲಿ ನೆಲೆಸಿ ಕನ್ನಡದಲ್ಲಿ ಬರೆಯುತ್ತಿರುವ ಲೇಖಕಿಯರ ಕಿರು ಪರಿಚಯ ಮಾಡಿಕೊಡುವ ಉದ್ದೇಶವಿಲ್ಲಿದೆ. ಹೊಸ ಬಗೆಯ ಸಾಹಿತ್ಯ ಸಂಬಂಧವನ್ನು ಸೃಷ್ಟಿಸುವ ದಾಖಲೆಯಾಗಿದೆ.

೧೯೮೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನವನ್ನು ಬೆಂಗಳೂರಿನಲ್ಲಿ ನಡೆಸಿದಾಗ ಮೂಡಿಬಂದ ಅನಿಸಿಕೆ ಪರಸ್ಪರ ಪರಿಚಯದ ಅವಶ್ಯಕತೆ. ಅಂಥ ಒಂದು ಅಗತ್ಯವನ್ನು ಪೂರೈಸಲು ಲೇಖಕಿಯರ ಪರಿಚಯದ ಪುಸ್ತಕ ತರುವ ಯೋಜನೆ ಮಹಿಳೆಯರ ಈ ಮನವಿಯನ್ನು ಮನ್ನಿಸಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಹಂಪನಾರವರು "ನಮ್ಮ ಲೇಖಕಿಯರ"ನ್ನು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಪರಿಚಯಿಸಲು ಕಾರಣಕರ್ತರಾಗಿದ್ದಾರೆ. ಯೋಜನೆ ಯೋಜನೆಯಾಗಿ ಕಾರ್ಯರೂಪಕ್ಕಿಳಿದಾಗ ಎದುರಾದ ಸಮಸ್ಯೆಗಳು ಹಲವಾರು. ಏನೇ ಆದರೂ ೧೯೮೨ರ ಅಖಿಲ ಕರ್ನಾಟಕ ಲೇಖಕಿಯರ ದ್ವಿತೀಯ ಸಮ್ಮೇಳನದ ಸಮಯಕ್ಕೆ ಪುಸ್ತಕ ಬಿಡುಗಡೆಯಾಗುತ್ತಿರುವುದು ಸಮಾಧಾನಕರವಾದ ಸಂಗತಿಯಾಗಿದೆ.

"ನಮ್ಮ ಲೇಖಕಿಯರು" ಒಂದು ಪ್ರಾರಂಭದ ಪ್ರಯತ್ನವಾಗಿದೆ. ಸಮಗ್ರತೆಯಿಂದ ಕೂಡಿದ ಪುಸ್ತಕ ಎನ್ನುವುದಿಲ್ಲ.

ದಿನದಿನಕ್ಕೆ ಹೊಸ ಹೊಸ ಲೇಖಕಿಯರ ಪರಿಚಯವನ್ನು ತಿಳಿಸುವ, ಬೆಳೆಯುತ್ತ ಹೋಗುವ ಪುಸ್ತಕವಾಗಿದೆ.


ಈ ಪುಸ್ತಕದಲ್ಲಿ ೨೨೪ ಜನ ಕನ್ನಡ ಲೇಖಕಿಯರ ಪರಿಚಯವಿದೆ. ಅದಕ್ಕೆ ಮೆರಗು ಕೊಡಲು ಅವರ ಛಾಯಾ ಚಿತ್ರಗಳು ಸಹಕಾರಿಯಾಗಿವೆ. ಲೇಖಕಿಯರ ಸಾಹಿತ್ಯ ಕೃತಿಗಳಿಗೆ ಒತ್ತು ಕೊಡಲಾಗಿದೆ. ಸುಮಾರು ಒಂದು ವರ್ಷದ ದೀರ್ಘಾವಧಿಯಲ್ಲಿ ಸಂಗ್ರಹಿಸಿದ ಇವರುಗಳಷ್ಟೇ "ನಮ್ಮ ಲೇಖಕಿಯರು" ಎಂದು ಹೇಳುವಂತಿಲ್ಲ. ಕಾರಣ ಅನೇಕ. ಮೊದಲನೆಯದಾಗಿ ಉಳಿದವರ ಪರಿಚಯ ನಮಗೆ ದೊರೆತಿಲ್ಲ. ನಾಡಿನ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಿ ಲೇಖಕಿಯರಿಗೆ ಪರಿಚಯ ಕಳಿಸಲು ಕೇಳಿದಾಗ ಬಹಳ ಉತ್ಸಾಹಕರವಾದ ಪ್ರತಿಕ್ರಿಯೆ ದೊರೆಯಿತು. ಎಷ್ಟೋ ಜನ ತಾವೇ ಬರೆದು ಕಳಿಸಿದರು. ಮತ್ತೆ ಕೆಲವು ಲೇಖಕಿಯರ ವಿಳಾಸಗಳನ್ನು ಸಂಗ್ರಹಿಸಿ ಅವರಿಗೆ ಪತ್ರ ಬರೆದೆವು. ಕೆಲವರಿಗೆ ಮತ್ತೆ ಮತ್ತೆ ಬರೆದರೂ ಉತ್ತರವಿಲ್ಲ. ಕೆಲವರ ವಿಳಾಸ ದೊರೆಯಲಿಲ್ಲ. ಹಾಗಾಗಿ ಈ ಪುಸ್ತಕದಲ್ಲಿ ಅವರ ಬಗೆಗೆ ಯಾವ ವಿಷಯವೂ ಇಲ್ಲವಾಗಿದೆ. ಅವರ ಮೌನಕ್ಕೆ ಕಾರಣ ಹೇಳಬರುವಂತಿಲ್ಲ. ಇದುವರೆಗಿನ ೨೨೪ ಜನ ಲೇಖಕಿಯರ ಪರಿಚಯ ಪಟ್ಟಿ ಇಲ್ಲಿದೆ.

"ನಮ್ಮ ಲೇಖಕಿಯರು" ಬೆಳಕು ಕಾಣಲು ಒತ್ತಾಸೆ ನೀಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹಂಪನಾ, ಮಾರ್ಗದರ್ಶನ ಮಾಡಿದ ಎಚ್.ಎಸ್. ಪಾರ್ವತಿ, ಹೇಮಲತಾ ಮಹಿಷಿ, ಸಹಕಾರ ನೀಡಿದ ಪರಿಷತ್ತಿನ ಸಿಬ್ಬಂದಿ ವರ್ಗ ಹಾಗೂ ಅಮೂಲ್ಯ ಪರಿಚಯ ಕಳಿಸಿ ಪುಸ್ತಕದ ಯಶಸ್ಸಿಗೆ ಕಾರಣರಾದ ಸೋದರಿ ಸಾಹಿತಿಗಳಿಗೆಲ್ಲ ಧನ್ಯವಾದಗಳು.

ಕುಲಶೇಖರಿ
ಸಂಪಾದಕಿ

ಅನುಸೂಚಿ

ಕೀರ್ತಿಶೇಷರು



ಅಂಜನಾ ಗೋವಿಂದರಾಜು

ಅಂಜನಾರವರ ಜನ್ಮಸ್ಥಳ ಶಿರಾಳಕೊಪ್ಪ. ಶಿವಮೊಗ್ಗೆಯಲ್ಲಿ ಬಾಲಕರ ಪ್ರೌಢಶಾಲೆಯಲ್ಲಿ ಕನ್ನಡ ಉಪಾಧ್ಯಾಯಿನಿಯಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಎಂ.ಎ., ಬಿ.ಎಡ್. ಪದವೀಧರೆ. ಸಾಮಾಜಿಕ ಸಮಸ್ಯೆಗಳ ಬಗೆಗೆ ಅನೇಕ ಲೇಖನ ಬರೆದಿದ್ದಾರೆ.

ಪ್ರಕಟಿತ ಕೃತಿ :

ಅನಾಥ ಮಹಿಳೆಯರು

ಸಂಗೀತ, ನೃತ್ಯಗಳಲ್ಲಿ ಅಭಿರುಚಿ ಇದೆ. ಭಾವಗೀತೆ ಹಾಡುವ ಆಸಕ್ತಿಯನ್ನಿರಿಸಿ ಕೊಂಡಿದ್ದಾರೆ.

ಶಿವಮೊಗ್ಗೆಯ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಮಿತಿ ಅಧ್ಯಕ್ಷರಾಗಿದ್ದ ದಿವಂಗತ ಗೋವಿಂದರಾಜುರವರ ಪತ್ನಿ.



ಅನಸೂಯ ರಾಮರೆಡ್ಡಿ

ಅನಸೂಯ ರಾಮರೆಡ್ಡಿಯವರು ಎಂ.ಎ., ಬಿ.ಎಡ್., ಆರ್.ಬಿ.ಪಿ. ಪದವೀಧರರು. ಚಿತ್ರದುರ್ಗದ ಕಾಲೇಜೊಂದರಲ್ಲಿ ಅಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರಕಟಿತ ಕೃತಿಗಳು :

ಕಾದಂಬರಿಗಳು

೧ ದೇವಿಯ ದರ್ಶನ
೨ ಮೂರು ದಾರಿ
೩ ಒಡೆದ ಹಾಲು
೪ ಕುಲದೀಪಕ
೫ ಮಮತೆಯ ಮಡಿಲು
೬ ಮಂದಾನಿಲ
೭ ಬಲೆ
೮ ಇದಿರುಗಾಳಿ
೯ ಗುರುಗೋವಿಂದಸಿಂಹ-ಜೀವನ ಚರಿತ್ರೆ
೧೦ ಬಂದಿಯ ಬಿಡುಗಡೆ_ಕಥಾ ಸಂಕಲನ
೧೧ ದಾರಿ ತೋರಿದ ದೇವಿಯರು ,,
೧೨ ಮನೆಗೊಂದು ಮಾಣಿಕ್ಯ-ನಾಟಕ



ಅನಸೂಯ ರಾವ್

ಅನಸೂಯ ಶ್ರೀನಿವಾಸರಾವ್ ಬೆಂಗಳೂರು ನಿವಾಸಿಗಳು. ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ ನಡೆಸಿ, ಗೃಹಿಣಿಯಾಗಿದ್ದಾರೆ.

ಇವರ ಪ್ರಕಟಿತ ಕೃತಿ :

ಸುಂದರ ಕರ್ನಾಟಕ : ಪ್ರವಾಸ ಸಾಹಿತ್ಯ

ಸಾಹಿತಿ ರಾಮರಾವ್ ಅವರ ಪತ್ನಿ.

ಪಾಕಶಾಸ್ತ್ರ, ಕಸೂತಿ ಕಲೆಗಳಲ್ಲಿ ನೈಪುಣ್ಯತೆ ಪಡೆದಿದ್ದಾರೆ.



ಅನುಪಮಾ ಚಿಪಳೂಣಕರ್

ಕಿರಿಯ ವಯಸ್ಸಿನ ಅನುಪಮಾ ಚಿಪಳೂಣಕರ್ ಕನ್ನಡದ ಉದಯೋನ್ಮುಖ ಬರಹಗಾರ್ತಿ. ಹಿಂದೀ ಭಾಷೆಯನ್ನು ಕಲಿಸುವ ಉಪಾಧ್ಯಾಯಿನಿಯಾಗಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಶಿರಾಡಿಪಾಲದವರಾದ ಇವರಿಗೆ ಮೊದಲಿನಿಂದಲೂ ಪತ್ರಿಕೆಗಳಲ್ಲಿ ಲೇಖನ-ಪ್ರಬಂಧವನ್ನು ಬರೆಯುವುದರಲ್ಲಿ ಒಲವು. ಶಾಸ್ತ್ರೀಯ ಸಂಗೀತದಲ್ಲೂ ಸಮಾನ ಅಕ್ಕರೆ. ದಿನದ ಹೆಚ್ಚು ಭಾಗವನ್ನು ವಿದ್ಯಾರ್ಥಿಗಳೊಡನೆ ಕಳೆಯುವ ಇವರು ಸ್ವಾನುಭವದಿಂದ ಮಹಿಳೆ ಮತ್ತು ಮಕ್ಕಳ ಮನೋಭಾವವನ್ನು ಕುರಿತು ಬರೆದಂಥ ಪ್ರಕಟಿತ ಪುಸ್ತಕ :

ಮಹಿಳೆ ಮತ್ತು ಮಕ್ಕಳು



ಅನುಪಮಾ ನಿರಂಜನ

ಹುಟ್ಟು ಹೆಸರು ಡಾ। ವೆಂಕಟಲಕ್ಷ್ಮಿ ಮರೆತುಹೋಗಿ ಅನುಪಮಾ ನಿರಂಜನ ಎಂದೇ ಸುಪರಿಚಿತರಾಗಿದ್ದಾರೆ. ತೀರ್ಥಹಳ್ಳಿಯಲ್ಲಿ ಜನಿಸಿದ ಇವರು ಮೈಸೂರು ವಿಶ್ವವಿದ್ಯಾನಿಲಯದ ಎಂ. ಬಿ. ಬಿ. ಎಸ್. ಪದವೀಧರೆ. ವೃತ್ತಿಯಿಂದ ವೈದ್ಯೆ. ಪ್ರವೃತ್ತಿಯಿಂದ ಸಾಹಿತಿಯಾಗಿದ್ದಾರೆ.

ಪ್ರಕಟಿತ ಕೃತಿಗಳು :

ಕಾದಂಬರಿ :

೧ ಅನಂತಗೀತ, ೨ ಸಂಕೋಲೆಯೊಳಗಿಂದ, ೩ ಶ್ವೇತಾಂಬರಿ, ೪ ನೂಲು ನೆಯ್ದ ಚಿತ್ರ, ೫ ಹಿಮದ ಹೂ, ೬ ಸ್ನೇಹ ಪಲ್ಲವಿ, ೭ ಹೃದಯವಲ್ಲಭ, ೮ ಆಕಾಶ ಗಂಗೆ, ೯ ಸಸ್ಯಶ್ಯಾಮಲಾ, ೧೦ ಋಣ, ೧೧ ಮೂಡಲ ಪಡುವಣ, ೧೨ ಚಿತ್ತಮೋಹನ, ೧೩ ಕಣವೆಗೆ ಬಂತು ಬೇಸಗೆ, ೧೪ ಪರೀಕ್ಷೆ, ೧೫ ನಟಿ ೧೬ ಮಾಧವಿ, ೧೭ ಎಳೆ, ೧೮ ಸೇಪೆ, ೧೯ ಕೊಳಚೆ ಕೊಂಪೆಯ ದಾನಿಗಳು.
ಕಥಾಸಂಕಲನ : ೨೦ ಕಣ್ಮನಿ, ೨೧ ರೂಪಾಯಿಯ ಲಕ್ಷ್ಮಿ, ೨೨ ನೀರಿಗೆ ನೈದಿಲೆ ಶೃಂಗಾರ, ೨೩ ಏಳು ಸುತ್ತಿನ ಮಲ್ಲಿಗೆ, ೨೪ ಗಿರಿಧಾಮ ೨೫ ಒಡಲು, ೨೬ ಪುಷ್ಪಕ, ೨೭ ಕಲ್ಲೋಲ (ನಾಟಕ), ೨೮ ದಿನಕ್ಕೊಂದು ಕಥೆ, (ಶಿಶು ಸಾಹಿತ್ಯ)
ವೈದ್ಯಕೀಯ: ೨೯ ಕೆಂಪಮ್ಮನ ಮಗು, ೩೦ ಆರೋಗ್ಯ ದರ್ಶನ, ೩೧ ತಾಯಿ–ಮಗು, ೩೨ ಕೇಳು ಕಿಶೋರಿ, ೩೩ ಸ್ತ್ರೀ ಸ್ವಾತಂತ್ರ್ಯ ಸಂಹಿತೆ, ೩೪ ಆರೋಗ್ಯ ಭಾಗ್ಯಕ್ಕೆ ವ್ಯಾಯಾಮ, ೩೫ ಸ್ನೇಹಯಾತ್ರೆ (ಪ್ರವಾಸ ಕಥನ), ೩೬ ಶುಭಕಾಮನೆ (ವನಿತಾ ವಾಣಿ), ೩೭ ದಾಂಪತ್ಯ ದೀಪಿಕೆ (ವಿಜ್ಞಾನ), ೩೮ ವಧುವಿಗೆ ಕಿವಿಮಾತು (ವಿಜ್ಞಾನ).

೧೯೬೦ರಲ್ಲಿ "ರೂಪಾಯಿಯ ಲಕ್ಷ್ಮಿ" ಕಥಾ ಸಂಕಲನಕ್ಕೆ ಹಾಗೂ ೧೯೭೧ರಲ್ಲಿ "ಆರೋಗ್ಯ ದರ್ಶನ" ವೈದ್ಯಕೀಯ ಪುಸ್ತಕಕ್ಕೆ ರಾಜ್ಯ ಸರ್ಕಾರದ ಬಹುಮಾನ ಬಂದಿದೆ. ೧೯೭೮ರಲ್ಲಿ ಸಾಹಿತ್ಯ ಅಕಾಡೆಮಿ ಬಹುಮಾನ ಹಾಗೂ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ ದೊರೆತಿದೆ.

ಇವರ ಅನೇಕ ಕಾದಂಬರಿಗಳು ಇಂಗ್ಲಿಷ್, ಉರ್ದು, ಜರ್ಮನಿ, ತಮಿಳು, ತೆಲುಗು, ಮಲೆಯಾಳ ಮತ್ತು ಹಿಂದೀ ಭಾಷೆಗಳಲ್ಲಿ ಅನುವಾದಗೊಂಡಿದೆ.

ಅನುಪಮಾರವರ ಪತಿ ಸಾಹಿತಿ ನಿರಂಜನ ಅವರು. ಮಗಳು ತೇಜಸ್ವಿನಿ ನಿರಂಜನ ಸಹಾ ಲೇಖಕಿಯಾಗಿದ್ದಾರೆ.



“ಅಶ್ವಿನಿ”
(ಕನಕಮ್ಮ ಎಂ. ವಿ.)

“ಅಶ್ವಿನಿ” ಎಂದು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಪರಿಚಿತರಾಗಿರುವ ಕನಕಮ್ಮನ ನವರ ಜನ್ಮಸ್ಥಳ ಕೋಲಾರ. ಮೈಸೂರು ವಿಶ್ವವಿದ್ಯಾಲಯದ ಎಂ.ಎಸ್ಸಿ. (ಸ್ಟ್ಯಾಟಿಸ್ಟಿಕ್ಸ್) ಪದವೀಧರೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಗಿ ಕೆಲಸ ಮಾಡುತ್ತಿದ್ದಾರೆ.

ಸುಮಾರು ಒಂದು ದಶಕದ ಸಾಧನೆಯಾಗಿ ಹನ್ನೊಂದು ಕಾದಂಬರಿಗಳನ್ನು ಬರೆದಿದ್ದಾರೆ "ಬೆಸುಗೆ" (೧೯೭೪) ಕಾದಂಬರಿ ಜನಪ್ರಿಯ ಚಲನಚಿತ್ರವಾಗಿ, ಉತ್ತಮ ಚಿತ್ರಕಥೆ ಎಂದು ಚಲನಚಿತ್ರ ಸಂಘದವರಿಂದ ಪ್ರಥಮ ಬಹುಮಾನ ಪಡೆದಿದೆ. ಇವರ ಇನ್ನೊಂದು ಕಾದಂಬರಿ "ಕಪ್ಪು ಕೊಳ" ಚಲನಚಿತ್ರವಾಗಿ ಜನಪ್ರಿಯತೆ ಗಳಿಸಿದೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿಗಳು :

೧ ಬೆಸುಗೆ (೧೯೭೧)
೨ ನಿಲುಕದ ನಕ್ಷತ್ರ (೧೯೭೧)
೩ ಮೈತ್ರಿ (೧೯೭೪)
೪ ಕಪ್ಪು ಕೊಳ (೧೯೭೪)
೫ ಮೃಗತೃಷ್ಣಾ (೧೯೭೬)
೬ ವಿಜೇತ ,,
೭ ನಾನು ಲೇಖಕಿ ಅಲ್ಲ (೧೯೭೬)
೮ ಬಿಂದಿಯಾ (೧೯೭೭)
೯ ಹುತ್ತದ ಸುತ್ತ (೧೯೭೭)
೧೦ ಬಾಲ್ಯ ಸಖ (೧೯೮೦)
೧೧ ಪ್ರೇಮ ಸೋಪಾನ (೧೯೮೦)

ಓದುವ, ಬರೆಯುವ ಹವ್ಯಾಸ; ಸಂಗೀತದಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದಾರೆ.



ಆರ್ಯಾಂಬ ಪಟ್ಟಾಭಿ

ಮೈಸೂರಿನಲ್ಲಿರುವ ಇವರು ಬಿ.ಎ. ಪದವೀಧರೆ ಹಾಗೂ ಗೃಹಿಣಿ. ಅನೇಕ ಕಾದಂಬರಿಗಳು, ಸಣ್ಣ ಕತೆಗಳು, ಮಕ್ಕಳ ಕತೆಗಳನ್ನು ರಚಿಸಿದ್ದಾರೆ. ಅಂಚೆ ಚೀಟಿ ಸಂಗ್ರಹ ಇವರ ಒಂದು ಹವ್ಯಾಸ. ಚೆಸ್, ಟೇಬಲ್ ಟೆನ್ನಿಸ್‌ಗಳಲ್ಲಿ ಅಭಿರುಚಿ ಇದೆ, ನಾಟಕ ನಿರ್ದೇಶನವನ್ನು ಮಾಡಿದ್ದಾರೆ. ಭಾವಾತೀತ ಜ್ಞಾನ (Transdental Meditation) ಹೇಳಿಕೊಡುವ ಮಹಿಳಾ ಪೀಠದ ಅಧ್ಯಕ್ಷೆ. ಹೆಸರಾಂತ ಕಾದಂಬರಿಗಾರ್ತಿ. ದಿವಂಗತ ತ್ರಿವೇಣಿಯವರ ಕಿರಿಯ ಸೋದರಿ.

ಪ್ರಕಟಿತ ಕೃತಿಗಳು :

ಕಾದಂಬರಿ :

೧ ಹೊಂಗನಸು-೧೯೬೧, ೨ ಆರಾಧನೆ-೧೯೬೨, ೩ ಪ್ರಿಯಸಂಗಮ-೧೯೬೪ ೪ ಎರಡು ಮುಖ-೧೯೬೫, ೫ ಬೀಸಿದ ಬಲೆ-೧೯೬೬, ೬ ಸವತಿಯ ನೆರಳು-೧೯೬೭ ೭ ಬದುಕಿನ ಬವಣೆಯಲ್ಲಿ-೧೯೬೭, ೮ ಕಪ್ಪು-ಬಿಳುಪು-೧೯೬೮, ೯ ಆ ಹಾಡು-, ೯೬೮, ೧೦ ದೇವಮಾನವ-೧೯೭೨, ೧೧ ಅತ್ತು ನಗಿಸಿದಾಗ - ೧೯೭೨, ೧೨ ಮರಳಿ ಗೂಡಿಗೆ-೧೯೭೬, ೧೩ ಪರಂಪರೆ-೧೯೭೬, ೧೪ ಬೇವು-ಬೆಲ್ಲ - ೧೯೭೩, ೧೫ ಕಾಮನ ಬಿಲ್ಲು-೧೯೮೧, ೧೯ ಕಾಳಿ-೧೯೮೧, ೧೭ ಕಸ್ತೂರಿ-೧೯೭೭, ೧೮ ಪ್ರೇಮ ಕಥೆ-೧೯೭೨. ೧೯ ಸಾಕ್ಷಾತ್ಕಾರ-೧೯೭೫. ೨೦. ಕುಣಿಕೆ-೧೯೮೧

ಕಥಾಸಂಕಲನ : ೨೧ ಉದಯ-ರವಿ ೧೯೬೮, ೨೨ ಮರಳಿ ಬಂದ ಮಮತೆ-೧೯೬೮, ೨೩ ನನ್ನವಳು-೧೯೭೦, ಜೀವನ ಚರಿತ್ರೆ: ೨೪ ಭಾರತದ ಮಹಾಪುರುಷರು-೧೯೭೫ ಮಕ್ಕಳ ಪುಸ್ತಕ : ೨೫ ರಣಧೀರ ಕಂಠೀರವ ನರಸಿಂಹರಾಜ ಒಡಯರ್-೧೯೭೪ ೨೬ ನಾಲ್ವಡಿ ಕೃಷ್ಣರಾಜ ಒಡೆಯರ್-೧೯೭೫



ಆಶಾಶೇಖರ
(ಆಶಾಲತಾ ಯಾದವಾಡ)

ಉದಯೋನ್ಮುಖ ಲೇಖಕಿಯರಲ್ಲಿ ಆಶಾಲತಾ ಯಾದವಾಡ ಒಬ್ಬರು. 'ಆಶಾ ಶೇಖರ' ಎಂಬ ಹೆಸರಿನಿಂದ ಈಕೆ ಸಾಹಿತ್ಯ ರಚನೆಗೆ ತೊಡಗಿದ್ದಾರೆ.

ಧಾರವಾಡ ಜಿಲ್ಲೆಯ ಹಾವೇರಿಯಲ್ಲಿ ೧೯೫೪ರಲ್ಲಿ ಜನಿಸಿದ ಇವರು ಹಿಂದೀ ವಿಶಾರದೆ ಆಗಿ, ಸಧ್ಯಕ್ಕೆ ಉಡುಪಿಯ ಹೆಣ್ಣುಮಕ್ಕಳ ಸರಕಾರೀ ಮಾಧ್ಯಮಿಕ ಮತ್ತು ತರಬೇತಿ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರದು ಬಹುಮುಖ ಆಸಕ್ತಿ. ನಾಟಕಾಭಿನಯ, ಹೊಲಿಗೆ, ಗೃಹಾಲಂಕಾರ, ಕೈತೋಟ ಮಾಡುವುದಲ್ಲದೆ ಆಕಾಶವಾಣಿ ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಿದ್ದಾರೆ. ಅನೇಕ ಬರಹಗಳು ಬಹುಮಾನ ಗಳಿಸಿವೆ.

ಇವರ ಪ್ರಕಟಿತ ಕೃತಿ :

ನವವಿವಾಹ (ಕಾದಂಬರಿ)



ಇಂದಿರಾ ಎಂ.ಕೆ.

ಎಂ.ಕೆ. ಇಂದಿರಾ ಮಲೆನಾಡಿನ ಪ್ರಕೃತಿ ಸೌಂದರ್ಯದ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ರಚಿಸಿದ ಕಾದಂಬರಿಗಾರ್ತಿಯಾಗಿದ್ದಾರೆ.

ಮಲೆನಾಡಿನ ತೀರ್ಥಹಳ್ಳಿಯಲ್ಲಿ ೧೯೭೧ರಲ್ಲಿ ಜನಿಸಿದ ಇಂದಿರಾ ಅವರು ಹಾರ್ಮೋನಿಯಂ. ಕೊಳಲು, ಬುಲ್‌ತರಂಗ್ ನುಡಿಸುವುದನ್ನು ಬಲ್ಲರು. ಲಲಿತ ಕಲೆಗಳಲ್ಲೂ ಅಷ್ಟೇ ಆಸ್ಥೆ–ಆಸಕ್ತಿ,

ಮಿಡಲ್‌ಸ್ಕೂಲ್‌ವರೆಗಷ್ಟೇ ಓದಿರುವ ಇವರು ಬರೆಯಲು ಪ್ರಾರಂಭಿಸಿದ್ದು ತಮ್ಮ ೪೬ನೇ ವಯಸ್ಸಿನ ನಂತರ. 'ತುಂಗಭದ್ರ' ಅವರ ಚೊಚ್ಚಲ ಕೃತಿ.

ಇತರ ಪ್ರಕಟಿತ ಕೃತಿಗಳು :

ಕಾದಂಬರಿಗಳು :

೧ ಸದಾನಂದ, ೨ ಗಜ್ಜೆಪೂಜೆ ೩ ಮನತುಂಬಿದ ಮಡದಿ ೪ ಹೆಣ್ಣಿನ ಆಕಾಂಕ್ಷೆ ೫ ತಾಪದಿಂದ ತಂಪಿಗೆ, ೬ ಬ್ರಹ್ಮಚಾರಿ, ೭ ಕಲಾದರ್ಶಿ, ೮ ಶಾಂತಿಧಾಮ ೯ ನವರತ್ನ, ೧೦ ಅಂಬರದ ಅಪ್ಸರೆ, ೧೧ ನಗಬೇಕು, ೧೨ ನವಜೀವನ ೧೩ ಪವಾಡ ೧೪ ಕಲ್ಪನಾ ವಿಲಾಸ, ೧೫ ದಶಾವತಾರ, ೧೬ ಸುಸ್ವಾಗತ, ೧೭ ಗಿರಿಬಾಲೆ, ೧೮ "ಟು ಲೆಟ್", ೧೯ ಮನೆ ಕೊಟ್ಟು ನೋಡಿ, ೨೦ ರಸವಾಹಿನಿ, ೨೧ ಮೋಹನ ಮಾಲೆ, ೨೨ ಅಮರಾವತಿ, ೨೩ ನೂರೊಂದು ಬಾಗಿಲು, ೨೪ ಬಿದಿಗೆ ಚಂದ್ರಮ ಡೊಂಕು, ೨೫ ನಾಗವೀಣಾ, ೨೬ ಆತ್ಮಸಖಿ, ೨೭ ಡಾಕ್ಟರ್, ೨೮ ಮುಸುಕು, ೨೯ ಚಿದ್ವಿಲಾಸ, ೩೦ ಜಾತಿ ಕೆಟ್ಟವಳು, ೩೧ ಸುಖಾಂತ, ೩೨ ಯಾರು ಹಿತವರು, ೩೩ ಹೂ ಬಾಣ, ೩೪ ಕತೆಗಾರ, ೩೫ ವರ್ಣಲೀಲೆ, ೩೬ ಮಧುವನ, ೩೭ ಹಸಿವು, ೩೮ ಕೂಪ, ೩೯ ಕೂಚುಭಟ್ಟ. ೪೦ ಜಾಲ, ೪೧ ಗುಂಡ, ೪೨ ಪೂರ್ವಾಪರ, ೪೩ ತಗ್ಗಿನಮನೆ ಸೀತೆ, ೪೪ ಕಲಾಸಂಗಮ, ೪೫ ತಾಳಿದವರು, ೪೬ ಫಣಿಯಮ್ಮ, ೪೭ ತಪೋವನದಲ್ಲಿ.

ಅಲ್ಲದೆ ಇಂದಿರಾ ಅವರ ನೂರಾರು ಸಣ್ಣ ಕತೆ, ಲೇಖನ, ಜೀವನ ಚರಿತ್ರೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರು ರಚಿಸಿದ ಸದಾನಂದ, ನವರತ್ನ, ಫಣಿಯಮ್ಮ ಕೃತಿಗಳಿಗೆ ರಾಜ್ಯ ಪ್ರಶಸ್ತಿ ದೊರೆತಿದೆಯಲ್ಲದೆ, ೧೯೭೫ರ ಶ್ರೇಷ್ಠ ಲೇಖಕಿ ಎಂದು ಇವರಿಗೆ ರಾಜ್ಯ ಸಾಹಿತ್ಯ ಅಕಾಡಮಿಯಿಂದ ಮನ್ನಣೆ ದೊರೆತಿದೆ. ಈ ಜನಪ್ರಿಯ ಲೇಖಕಿಯನ್ನು ಲೆಕ್ಕವಿಲ್ಲದಷ್ಟು ಸಂಘ–ಸಂಸ್ಥೆಗಳು ಸನ್ಮಾನಿಸಿವೆ. ಗೆಜ್ಜೆಪೂಜೆ, ಫಣಿಯಮ್ಮ, ಹೂ ಬಾಣ(ಮುತ್ತು ಒಂದು ಮುತ್ತು ಹೆಸರಿನಲ್ಲಿ)ಚಲನಚಿತ್ರಗಳಾಗಿವೆ.



ಇಂದಿರಾ ಹಾಲಂಬಿ

"ಗಿರಿವಾಸಿನಿ" ಕಾವ್ಯನಾಮ ಇಂದಿರಾ ಹಾಲಂಬಿ ಅವರದು, ಉಡುಪಿಯಲ್ಲಿ ಹುಟ್ಟಿದ ಇವರು ಎಸ್.ಎಸ್.ಎಲ್.ಸಿ. ಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಹಿಂದಿ ಪ್ರವೇಶಿಕಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಅಧ್ಯಾಪಕರ ತರಬೇತಿ ಪಡೆದು ಹಿರಿಯಡ್ಕದ ಸರಕಾರಿ ಮಾದರಿ ಶಾಲೆಯಲ್ಲಿ ಅಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದಾರೆ.

ಅನೇಕ ಕಥಾ ಸಂಗ್ರಹಗಳಲ್ಲಿ ಇವರ ಕತೆಗಳು ಪ್ರಕಟಗೊಂಡಿವೆ.

ಇವರ ಪ್ರಕಟಿತ ಕೃತಿ :

ಪ್ರಾಣಿ ಪರ್ಯಾಯ : ನೀಳ್ಗತೆ

ವಿದ್ಯಾರ್ಥಿಗಳಿಗೆ ಅಭಿನಯಿಸಲು ಅನುಕೂಲವಾಗುವಂತೆ ಅನೇಕ ಏಕಾಂಕ ನಾಟಕಗಳನ್ನು ಬರೆದು ಅಭಿನಯಿಸಲು ತರಬೇತಿ ಕೊಟ್ಟಿದ್ದಾರೆ.



"ಇಂದಿರಾಣಿ"

ಇಂದಿರಾ ರಾಜಶೇಖರ್ ಅವರು "ಇಂದಿರಾಣಿ" ಕಾವ್ಯನಾಮದಲ್ಲಿ ಬರೆಯುತ್ತಾರೆ. ಇವರ ಜನ್ಮಸ್ಥಳ ಟಿ. ನರಸೀಪುರ. ಎಂ.ಎ. ಪದವೀಧರೆ. ಸಂಗೀತ, ಕಸೂತಿ. ಬೊಂಬೆ ತಯಾರಿಕೆ, ಹೂ ಜೋಡಣೆ ಇವರ ಹವ್ಯಾಸಗಳು. ಈಕೆ ಫ್ರೆಂಚ್ ಭಾಷೆಯನ್ನು ಅಭ್ಯಾಸ ಮಾಡಿದವರಾಗಿ. ಷಾರ್ಟ್‌ಹ್ಯಾಂಡ್, ವೀಣಾವಾದನ, ಕೇಶಾಲಂಕಾರವನ್ನೂ ಬಲ್ಲವರಾಗಿದ್ದಾರೆ.

ಪ್ರಕಟಿತ ಕೃತಿಗಳು :

೧	ರಶ್ಮಿ	:	ಸಣ್ಣಕಥಾ ಸಂಕಲನ
೨	ಪ್ರತಿಬಿಂಬ	:	ಲೇಖನಗಳ ಸಂಕಲನ
೩	ಬಲಿ	:	ಕಾದಂಬರಿ (೧೯೮೧)

ಇವರು ಬರೆದ ಅನೇಕ ಲೇಖನ, ಕತೆಗಳು ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಪುಸ್ತಕಗಳು ಮರು ಮುದ್ರಣ ಕಂಡಿವೆ.



ಡಾ|| ಉಮಾದೇವಿ ಎಂ.ಆರ್

ಬೆಂಗಳೂರಿನ ಉಮಾದೇವಿಯವರು ಎಂ.ಎ., ಹಾಗೂ ಡಿಪ್ಲೊಮಾ ಇನ್ ಲಿಂಗ್ವಿಸ್ಟಿಕ್ಸ್ ಪದವೀಧರೆಯಾಗಿದ್ದಾರೆ. ಪಿ.ಎಚ್.ಡಿ.ಯನ್ನೂ ಗಳಿಸಿದ್ದಾರೆ. ಅಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದಾರೆ.

ಇವರ ಪ್ರಕಟಿತ ಕೃತಿ :

ಕವಿ ಚಕ್ರವರ್ತಿ ಪೊನ್ನ ಮತ್ತು ಆತನ ಕೃತಿಗಳು (ಪಿ.ಎಚ್.ಡಿ. ಪ್ರಬಂಧ)

ಅಧ್ಯಯನ ಹಾಗೂ ಅಧ್ಯಾಪನಗಳಲ್ಲಿ ಅಭಿರುಚಿ ಬೆಳೆಸಿಕೊಂಡಿದ್ದಾರೆ.



ಉಮಾದೇವಿ ಶಂಕರರಾವ್

ಮೈಸೂರಿನವರಾದ ಉಮಾದೇವಿಯವರು ಮದ್ರಾಸಿನಲ್ಲಿ ನೆಲಸಿದ ಕನ್ನಡಿಗರಾಗಿದ್ದಾರೆ. ಕನ್ನಡದಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಸಣ್ಣಕತೆಗಳು
೨ ಸ್ತೋತ್ರ ರತ್ನಾಕರ
೩ ಕುಂಬಾರನ ಅದೃಷ್ಟ
೪ ಮಿಂಚು-ಗುಡುಗು
೫ ಸೂರ್ಯಕಾಂತಿ
೬ ಅದಲು-ಬದಲು
೭ ಸ್ತೋತ್ರ ಮಕರಂದ

ಭಕ್ತಿಭಾವದ ಕೃತಿಗಳನ್ನು ಹೆಚ್ಚಾಗಿ ರಚಿಸಿದ್ದಾರೆ.



ಉಷಾ ನವರತ್ನರಾಂ

ಉಷಾ ನವರತ್ನರಾಂ ಕಾದಂಬರಿಗಾರ್ತಿ ಹಾಗೂ ಪತ್ರಕರ್ತೆಯಾಗಿದ್ದಾರೆ. ಇವರ ಹಲವಾರು ಕಾದಂಬರಿಗಳು ಚಲನಚಿತ್ರಗಳೂ ಆಗಿವೆ.

ಪ್ರಾರಂಭದಲ್ಲಿ ಇವರು ಮಿಸ್‌ರಾವ್, ವಿಚಾರಪ್ರಿಯೆ, ಅನುರಾಧಾ ಎಂಬ ಕಾವ್ಯನಾಮಗಳಿಂದ ಅನೇಕ ಕತೆ-ಲೇಖನಗಳನ್ನು ಬರೆದಿದ್ದಾರೆ.

ಲಘು ಮತ್ತು ಶಾಸ್ತ್ರೀಯ ಸಂಗೀತ, ನೃತ್ಯ ನಾಟಕದಲ್ಲಿ ಆಸಕ್ತಿ, ತೋಟಗಾರಿಕೆ, ಕಸೂತಿ ಇವರ ಇನ್ನಿತರ ಹವ್ಯಾಸಗಳು. 'ಗೆಳತಿ' ಪಕ್ಷಪತ್ರಿಕೆಯ ಸಂಪಾದಕಿಯಾಗಿ ಇವರು ಕೆಲಸ ಮಾಡಿದ್ದಾರೆ. ಸ್ಥಳೀಯ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿದ್ದಾರೆ.

ಇವರ ಪ್ರಕಟಿತ ಕಾದಂಬರಿಗಳು :

೧ ಹೊಂಬಿಸಿಲು
೨ ಹ್ಯಾಪಿ ಬರ್ತ್‌ಡೇ
೩ ಬಲವಿನ ಬದುಕು
೪ ಆಂದೋಲನ
೫ ಆಶ್ವಾಸನೆ
೬ ಆಸರೆ
೭ ಬಂಧನ
೮ ಇಲ್ಲೇ ಸ್ವರ್ಗ
೯ ಹರಿದ ಹೊನಲು
೧೦ ಹೊಸರಾಗ
೧೧ ಹೃದಯ ಮಿಲನ
೧೨ ಮೂಡಿಬಂದ ಬೆಳಕು
೧೩ ನಾನೇ ವೀಣೆ ನೀನೇ ತಂತಿ
೧೪ ಪ್ರಗತಿಯ ಪಥದಲ್ಲಿ
೧೫ ದೋಣಿ ಸಾಗಲಿ
೧೬ ಎಲ್ಲಾದರೂ ಸುಖವಾಗಿರು
೧೭ ಪ್ರೀತಿಸಿ ನೋಡು
೧೮ ಸಮರ್ಪಣೆ
೧೯ ಹೂವನು ಮುಡಿಬೇಕು
೨೦ ಹಗಲುಗನಸು
೨೧ ಕೈ ಹಿಡಿದು ನಡೆಸೆನ್ನನು



ಉಷಾಬನವಾಸಿ
(ಉಷಾದೇವಿ ಎಂ. ಕೆ.)

'ಉಷಾ ಬನವಾಸಿ' ಎಂಬ ಹೆಸರಿನಲ್ಲಿ ಕವನ ಸಂಗ್ರಹ ಪ್ರಕಟಿಸಿರುವ ಉಷಾದೇವಿ ಯವರು ಶಾಲಾ ದಿನಗಳಿಂದಲೇ ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆ ದಿದ್ದಾರೆ. ನಾಡಿನ ಅನೇಕ ಪತ್ರಿಕೆಗಳಲ್ಲಿ ಅವರ ಲೇಖನ, ಕವನ, ಕತೆಗಳು ಪ್ರಕಟ ವಾಗಿವೆ. ಬಿ.ಎ. ಪದವೀಧರೆ. ಈಗ ಎಂ.ಎ. ಪದವಿಗಾಗಿ ಕನ್ನಡವನ್ನು ಅಭ್ಯಾಸ ಮಾಡುತ್ತಿದ್ದಾರೆ.

ಇವರ ಪ್ರಕಟಿತ ಕೃತಿ :

ಪ್ರಕೃತಿ (ಕವನ ಸಂಗ್ರಹ) : ೧೯೭೫

ಸಂಗೀತ, ನಾಟಕ, ಓದು, ಬರಹಗಳಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದಾರೆ. ಜಾನ ಪದ ಗೀತೆಗಳನ್ನು ಹಾಡುವ ಹವ್ಯಾಸವಿದೆ. ಇವರು ಸಾಹಿತಿ ಮತಿಘಟ್ಟ ಕೃಷ್ಣ ಮೂರ್ತಿಯವರ ಮಗಳು.



ಉಷಾ ಸ.

ಮೈಸೂರಿನ ಉಷಾರವರು ಕನ್ನಡ ಎಂ.ಎ. ಪದವೀಧರೆ. ಡಿ. ಎಲ್. ನರಸಿಂಹಾಚಾರ್ ಸ್ಮಾರಕ ಚಿನ್ನದ ಪದಕ ವಿಜೇತೆ. ಈಗ ಸಿರಿಗೆರೆಯ ಎಂ.ಬಿ.ಆರ್. ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಸಾಹಿತ್ಯ ಸಂಗೀತದಲ್ಲಿ ಆಸಕ್ತಿಯ ಫಲವಾಗಿ ಮೂಡಿದ ಅನೇಕ ಕವನಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಇವರ ಪ್ರಕಟಿತ ಕೃತಿ :

ತೊಗಲುಬೊಂಬೆಯ ಆತ್ಮಕಥೆ (ಕಾವ್ಯ) : ೧೯೮೧

ಉಷಾದೇವಿ

ಮದರಾಸಿನಲ್ಲಿ ನೆಲೆಸಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಸರಾಗಿದ್ದಾರೆ ಉಷಾದೇವಿ. ಅನೇಕ ಕತೆ, ಕಾದಂಬರಿಗಳನ್ನು ಬರೆದಿದ್ದಾರೆ. ಹಾಗೂ ಬೇರೆ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಕನ್ನಡ ಸಾಂಸ್ಕೃತಿಕ ಚಟುವಟಿಕೆಗಳನ್ನು ಮದ್ರಾಸಿನಲ್ಲಿ ನಡೆಸುವ ಯಶಸ್ವೀ ಕಾರ್ಯಕರ್ತೆಯಾಗಿದ್ದಾರೆ.

ಪ್ರಕಟಿತ ಕೃತಿಗಳು :

ಕಾದಂಬರಿಗಳು :

೧ ಧೂಮಕೇತು
೨ ಕನ್ಯಾಸೆರೆ
೩ ಧನಪಿಶಾಚಿ
೪ ಮೊಗ್ಗಿನ ಜಡೆ
೫ ನಾರೀಪುಣ್ಯ
೬ ಪಡೆದುಬಂದ ಭಾಗ್ಯ
೭ ಮುಡಿಯೇರಿದ ಹೂ
೮ ನೀರ ಮೇಲಣ ಗುಳ್ಳೆ
೯ ಮುರಿದ ಸರಪಳಿ
೧೦ ಮೂರು ಮತ್ತೊಂದು

ಕಥಾ ಸಂಕಲನ :

೧೧ ಕಾರಂಜಿ
೧೨ ಬೆಳದಿಂಗಳು ಬಿಸಿಲು
೧೩ ಪ್ರೇಮದ ಕರೆ
೧೪ ಬಿಸಿಲು ಮಳೆ
೧೫ ನೀತಿದೇವನ ಸನ್ನಿಧಿಯಲ್ಲಿ (ತಮಿಳಿನಿಂದ ಅನುವಾದ)
೧೬ ಭಾರತದ ಮಡಿಲಲ್ಲಿ (ಇಂಗ್ಲೀಷ್‌ನಿಂದ ಅನುವಾದ)
೧೭ ಪ್ರಥಮ ಸ್ಥಾನಗಳನ್ನು ಪಡೆದ ಅಮೆರಿಕದ ಮಹಿಳೆಯರು (ಅನುವಾದ)



ಕನ್ನಿಕಾ ಪ್ರಭಾಕರ ಹೆಗ್ಗ

ಬಿ. ಎ. ಪದವೀಧರೆಯಾಗಿ ಉದ್ಯೋಗಸ್ಥ ಮಹಿಳೆಯಾಗಿದ್ದಾರೆ ಕನ್ನಿಕ ಅವರು. ಹೊನ್ನಾವರದಲ್ಲಿ ಸಹ–ಅಂಚೆ ಅಧಿಕಾರಿಯಾಗಿರುವ ಇವರು ಕವನಗಳನ್ನು ಬರೆಯುವ ಹವ್ಯಾಸವನ್ನಿಟ್ಟುಕೊಂಡಿದ್ದಾರೆ,

ಇವರ ಪ್ರಕಟಿತ ಕೃತಿ :

“ಕನ್ನಿಕಾ ಹೆಗಡೆ ಕವಿತೆಗಳು” (ಕವನ ಸಂಕಲನ) : ೧೯೭೮



ಕಮಲ ಸಂಪಳ್ಳಿ

ತುಮಕೂರಿನಲ್ಲಿ ಜನಿಸಿದ ಕಮಲಾರವರು ಎಂ. ಎ. ಪದವೀಧರೆ. ಬಿ.ಎಡ್. ಅಭ್ಯಾಸ ಮಾಡಿ ಬೆಂಗಳೂರಿನ ಮಲ್ಲೇಶ್ವರದ ಜೂನಿಯರ್ ಕಾಲೇಜಿನಲ್ಲಿ ಅಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಸಮಾಜದ ಸಮಸ್ಯೆಗಳತ್ತ ಗಮನ ಹರಿಸಿ ಭಾರತೀಯ ಸಂಸ್ಕೃತಿ ಪರಂಪರೆಗಳ ಬಗೆಗೆ ಅನೇಕ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಮಹಿಳೆಯರು, ವಿದ್ಯಾರ್ಥಿಗಳ ಬಗೆಗೆ ಕಳಕಳಿ ಹೊಂದಿದ್ದಾರೆ. ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಬರೆಯಬಲ್ಲವರಾಗಿದ್ದಾರೆ.

ಇವರ ಪ್ರಕಟಿತ ಕೃತಿ :

"ಮೂರನೆಯ ಕೃಷ್ಣ" : ೧೯೭೯

ಅನೇಕ ಸಂಘ ಸಂಸ್ಥೆಗಳಿಂದ ಬಹುಮಾನ, ಸನ್ಮಾನ ಪಡೆದಿದ್ದಾರೆ. ಲೇಖಕಿ ಜಗ್ಗು ಪ್ರಿಯದರ್ಶಿನಿಯವರ ಕಿರಿಯ ಸೋದರಿಯಾಗಿದ್ದಾರೆ.

ಸಂಸ್ಕೃತ ವಿದ್ವಾಂಸ ಜಗ್ಗು ಶಿಂಗ್ರಯ್ಯಂಗಾರ್ಯರ ಪುತ್ರಿ.



ಕಮಲಾ ಹಂಪನಾ

ಕಮಲಾ ಹಂಪನಾ ಎಂದೇ ಸುಪರಿಚಿತರಾಗಿರುವ ಕಮಲಮ್ಮನವರು ಸಾಹಿತಿ ಉದ್ಯೋಗಸ್ಥ ಮಹಿಳೆ, ಜನಪ್ರಿಯ ಭಾಷಣಕಾರ್ತಿ ಎನಿಸಿದ್ದಾರೆ. ಬಿ. ಎ. ಆನರ್ಸ್ ಎಂ.ಎ., ಪದವೀಧರೆಯಾಗಿ ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಕನ್ನ ವಿಭಾಗದ ಮುಖ್ಯಸ್ಥೆಯಾಗಿದ್ದಾರೆ.

ಸಣ್ಣಕತೆಗಳು, ಶಿಶುಸಾಹಿತ್ಯ, ಅನುವಾದ, ಸಂಶೋಧನೆ, ವಿಮರ್ಶೆ ಇತ್ಯಾದಿ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ದುಡಿಮೆ ನಡೆಸಿದ್ದಾರೆ. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಸದಸ್ಯೆಯಾಗಿದ್ದಾರೆ.

ಪ್ರಕಟಿತ ಕೃತಿಗಳು :

ಕಥಾ ಸಂಗ್ರಹ :

೧ ನಕ್ಕಿತು ಹಾಲಿನ ಬಟ್ಟಲು, ೨ ಮುಳಬಾಗಿಲು, ೩ ಅಕ್ಕಮಹಾದೇವಿ, ೪ ಜನ್ನ, ೫ ವೀರವನಿತೆ ಓಬವ್ವ, ೬ ಚಿಕ್ಕವರಿಗೆ ಚಿತ್ರದುರ್ಗ, ೭ ಹೆಳವನಕಟ್ಟೆ ಗಿರಿಯಮ್ಮ, ೮ ಡಾ॥ ಬಿ. ಆರ್. ಅಂಬೇಡ್ಕರ್ (ಶಿಶು ಸಾಹಿತ್ಯ), ೯ ಬೀಜಾಕ್ಷರ ಮಾಲೆ (ಅನುವಾದ), ೧೦ ಸುಕುಮಾರ ಚರಿತ್ರೆಯ ಸಂಗ್ರಹ, ೧೧ ಭರತೇಶ ವೈಭವ, ೧೨ ಕೆ. ಎಸ್. ಧರಣೇಂದ್ರಯ್ಯನವರ ಸ್ಮೃತಿ ಗ್ರಂಥ, ೧೩ ಶ್ರೀ ಪಚ್ಚೆ (ಸ್ಮರಣ ಸಂಚಿಕೆ) (ಸಂಪಾದಿತ), ೧೪ ಸಹಸ್ರಾಭಿಷೇಕ (ಗೊಮ್ಮಟನ ಸಾವಿರ ವರ್ಷದ ಸ್ಮರಣ ಸಂಚಿಕೆ), ೧೫ ಶಾಂತಿನಾಥ (ಸಂಶೋಧನಾ ಗ್ರಂಥ), ೧೬ ಆದರ್ಶ ಜೈನ ಮಹಿಳೆಯರು (ಸಂಶೋಧನಾ ಗ್ರಂಥ)

ಆಕಾಶವಾಣಿಯಲ್ಲಿ ಇವರ ಕತೆ, ನಾಟಕ, ಶಬ್ದಚಿತ್ರಗಳು ಪ್ರಸಾರವಾಗಿವೆ. ನಾಡಿನ ಪತ್ರಿಕೆಗಳಲ್ಲಿ ಅನೇಕ ಲೇಖನಗಳು ಪ್ರಕಟವಾಗಿವೆ. ಸಂಗೀತ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅಭಿರುಚಿ ಬೆಳೆಸಿಕೊಂಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹಾಗೂ ಸಾಹಿತಿ ಹಂಪ. ನಾಗರಾಜಯ್ಯನವರ ಧರ್ಮಪತ್ನಿ ಯಾಗಿದ್ದಾರೆ.



ಕಮಲಾ ಹೆಮ್ಮಿಗೆ

ಹೆಮ್ಮಿಗೆಯಲ್ಲಿ ೧೯೫೨, ನವೆಂಬರ್‌ನಲ್ಲಿ ಜನಿಸಿದ ಕಮಲಾ, ಕನ್ನಡ ಎಂ. ಎ. ಪದವೀಧರೆ. ಭಾಷಾಂತರದಲ್ಲಿ ಡಿಪ್ಲೊಮಾವನ್ನೂ ಪಡೆದಿದ್ದಾರೆ. ಆಕಾಶವಾಣಿಯಲ್ಲಿ ಕರ್ತವ್ಯಾಧಿಕಾರಿಯಾಗಿ ಧಾರವಾಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕಮಲಾ ಅವರಿಗೆ ಪ್ರವಾಸ, ನಾಟಕ, ಸಂಗೀತವೆಂದರೆ ಆಸಕ್ತಿ.

ಪ್ರಕಟಿತ ಕೃತಿಗಳು :

ಪಲ್ಲವಿ : ಪ್ರಥಮ ಕವನ ಸಂಕಲನ (೧೯೮೦)

ಅಖ್ಯಾನ : ಪ್ರಥಮ ಕಾದಂಬರಿ (೧೯೮೧)

೧೯೮೧ರಲ್ಲಿ "ಪಲ್ಲವಿ"ಗೆ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿನಿಧಿ ಸ್ಪರ್ಧೆಯಲ್ಲಿ ಬಹುಮಾನ ಬಂದಿದೆ.



ಕವಿತಾ ಸಿದ್ದಪ್ಪ ಬಗಲಿ

ಇಪ್ಪತ್ತೆರಡರ ಹರೆಯದ ಕುಮಾರಿ ಕವಿತಾ ಸಿದ್ದಪ್ಪ ಬಗಲಿ ಉದಯೋನ್ಮುಖ ಕನ್ನಡ ಕವಯಿತ್ರಿ. ಮಿರಜ್ ಇವರ ಜನ್ಮಸ್ಥಳ. ಎಂ. ಎ. ಪ್ರಥಮ ವರ್ಷದಲ್ಲಿ ಓದುತ್ತಿದ್ದಾರೆ.

ಬಾಲ್ಯದಿಂದಲೂ ಇವರಿಗೆ ಸಾಹಿತ್ಯದಲ್ಲಿ ಅಪಾರ ಆಸಕ್ತಿ. ಪ್ರೌಢಶಾಲಾ ಹಂತದಲ್ಲೇ ಕಥೆ - ಕವನಗಳನ್ನು ಬರೆಯಲು ಪ್ರಾರಂಭಿಸಿದರು. ಈಕೆಯ ಹಲವಾರು ಬರಹಗಳು ಪತ್ರಿಕೆಗಳಲ್ಲಿ ಬೆಳಕು ಕಂಡಿವೆ.

ಇವರ ಪ್ರಕಟಿತ ಕೃತಿ :

ಜೋಡಿ ಜೀವ ; ಕವನ ಸಂಕಲನ

ಸೋದರಿ ಹೇಮಲತಾರೊಂದಿಗೆ ಸೇರಿ ಇದನ್ನು ಹೊರತಂದಿದ್ದಾರೆ,

ಸಾಹಿತ್ಯ ರಚನೆಯೊಂದಿಗೆ ಚಿತ್ರಕಲೆ, ಹೊಲಿಗೆ, ಬಾಡ್ಮಿಂಟನ್, ನಾಟಕಾಭಿನಯ ಇವರ ಇನ್ನಿತರ ಹವ್ಯಾಸಗಳು.



ಕಾತ್ಯಾಯಿನಿ ಹೆಚ್. ಎಸ್

ಕಾತ್ಯಾಯಿನಿ ಅವರು ಭೌತಶಾಸ್ತ್ರದ ನಿವೃತ್ತ ಪ್ರೊಫೆಸರರು. ೧೯೨೩ರಲ್ಲಿ ಎಳಸೂರಿನಲ್ಲಿ ಜನಿಸಿದ ಇವರು ಎಂ. ಎಸ್ಸಿ. ಪದವೀಧರರು. ಚಿತ್ರಕಲೆ, ಕಸೂತಿಯತ್ತ ಇವರ ಒಲವು. ಬಿಡುವಿನ ಕಾಲದಲ್ಲಿ ಬರವಣಿಗೆಯ ಹವ್ಯಾಸ. ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಪ್ರತಿಭಾನ್ವಿತ ವಿದ್ಯಾರ್ಥಿ ಬಹುಮಾನ ಪಡೆದಿದ್ದಾರೆ.


ಪ್ರಕಟಿತ ಕೃತಿಗಳು :

೧ ಮಾಲಾ ಮತ್ತು ಇತರ ಕಥೆಗಳು

೨ ಗೌರಿ ಮತ್ತು ಇತರ ಕಥೆಗಳು

೩ ವಿಜ್ಞಾನ ಪಠ್ಯ ಪುಸ್ತಕ (ಪಿ.ಯು. ಸಿ. ಮೊದಲ ಹಾಗೂ ಎರಡನೇ ತರಗತಿಗಾಗಿ)

೪ ರಾಮನ್ ಪರಿಣಾಮ (ವಿಜ್ಞಾನ)



ಕಾಮಾಕ್ಷಮ್ಮ ಬಿ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೇರವಾಗಿ ಪಾಲ್ಗೊಂಡು ಗಾಂಧೀಜಿಯವರ ಮಾರ್ಗದಲ್ಲಿ ನಡೆದು, ಖಾದಿಧಾರಿಗಳಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಸುಪರಿಚಿತರಾಗಿದ್ದಾರೆ. ಕಾಮಾಕ್ಷಮ್ಮನವರು ಕನ್ನಡ ಪಂಡಿತೆ. ಹಿಂದಿ ರಾಷ್ಟ್ರಭಾಷಾ ಪ್ರವೀಣ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಶಾಲಾ ಶಿಕ್ಷಕಿಯಾಗಿ ಕೆಲಸ ಮಾಡಿದ್ದಾರೆ. ತೆಲುಗು, ತಮಿಳುಗಳಲ್ಲಿ ಪರಿಶ್ರಮವಿದೆ. ದೇಶಾಭಿಮಾನ, ದೇಶಸೇವೆಯಿಂದ ಪ್ರಭಾವಿತರಾಗಿ ರಾಜಕೀಯ ವ್ಯಕ್ತಿಗಳ, ಸಂಗತಿಗಳ ವಿಷಯವನ್ನೇ ಆಯ್ಕೆ ಮಾಡಿಕೊಂಡು ಅನೇಕ ಬರಹಗಳನ್ನು ರಚಿಸಿದ್ದಾರೆ.

ಪ್ರಕಟಿತ ಕೃತಿಗಳು :

೧ ಸರೋಜಿನಿ ನಾಯ್ಡು : ಜೀವನ ಚರಿತ್ರೆ
೨ ಗಡಿನಾಡ ಪ್ರಹರಿ : ನಾಟಕ
೩ ಸರ್ವೋದಯ ಕಥೆಗಳು : ಕಥೆ
೪ ಲಾಹೋರಿನಿಂದ ಭಾರತಕ್ಕೆ : ಕಥೆ
೫ ಯಶೋಧರಾ-ದಾಸಪ್ಪ : ಜೀವನ ಚರಿತ್ರೆ
೬ ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿ : ಅನುವಾದ
೭ ಸರ್ವೋದಯ ಸಾಹಿತ್ಯ : ಅನುವಾದ
೮ ಆಶ್ರಮದ ಸೋದರಿಯರಿಗೆ ಬಾಪೂಜಿ ಪತ್ರಗಳು
೯ ವಿನೋಬಾ ಪಾದಯಾತ್ರೆಯ ಹಾಸ್ಯ ಪ್ರಸಂಗ

ಪತ್ರಿಕೆ, ಆಕಾಶವಾಣಿಯ ಮೂಲಕ ತಮ್ಮ ಲೇಖನ, ಭಾಷಣಗಳಿಂದ ಪರಿಚಿತರಾಗಿದ್ದಾರೆ.



ಕುಲಶೇಖರಿ

"ಕುಲಶೇಖರಿ" ಕಾವ್ಯನಾಮದಲ್ಲಿ ಉಷಾದೇವಿಯವರು ಬರೆಯುತ್ತಾರೆ. ದಾವಣಗೆರೆ ಇವರ ಜನ್ಮಸ್ಥಳ. ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಕನ್ನಡ ಎಂ.ಎ. ಪದವಿಧರೆ ಹಾಗೂ ಕನ್ನಡ ಪತ್ರಿಕೋದ್ಯಮ ಶಿಕ್ಷಣವನ್ನು ಪಡೆದಿದ್ದಾರೆ.

ಪ್ರಕಟಿತ ಕೃತಿಗಳು :

೧. ಕ್ಷಿತಿಜ : ಕವನ ಸಂಕಲನ (೧೯೭೫)
೨. ಸಂಕಲ್ಪ : ,, (೧೯೮೧)

ಅವರ ಅನೇಕ ಲೇಖನ, ವಿಮರ್ಶೆಗಳು ಪತ್ರಿಕೆಯಲ್ಲಿ ಪ್ರಕಟವಾಗಿವೆ. ಕೆಲವು ಲೇಖನಗಳಿಗೆ ಬಹುಮಾನ ಬಂದಿದೆ. 'ಸಂಕಲ್ಪ' ಕವನ ಸಂಕಲನಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ ೧೯೮೧ರ ಸಾಲಿಗೆ ಉತ್ತಮ ಪುಸ್ತಕದ ಬಹುಮಾನ ಬಂದಿದೆ.

'ಚಿನ್ಮಯಿ' ಪ್ರಕಾಶನವನ್ನು ನಡೆಸುತ್ತಿದ್ದಾರೆ. ಅನೇಕ ಸಂಘ, ಸಂಸ್ಥೆಗಳ ಸದಸ್ಯರಾಗಿ ಸಕ್ರಿಯ ಪಾತ್ರವಹಿಸಿದ್ದಾರೆ. ಕವಿಗೋಷ್ಠಿಗಳನ್ನು ನಡೆಸಿಕೊಟ್ಟಿದ್ದಾರೆ. ಬಾನುಲಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ಹೊಲಿಗೆ, ಹೆಣಿಗೆ, ಕಸೂತಿ, ಹೂ ಜೋಡಣೆ, ಬೇಕರಿ ಇತ್ಯಾದಿಗಳಲ್ಲಿ ಪ್ರಮಾಣ ಪತ್ರ ಹಾಗೂ ಪ್ರಶಸ್ತಿ ಪಡೆದಿದ್ದಾರೆ.

ಪ್ರವಾಸ ಹವ್ಯಾಸವಾಗಿರುವ ಇವರು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ದೇಶಪರ್ಯಟನ ಮಾಡಿದ್ದಾರೆ. ವೈಚಾರಿಕ, ವೈಜ್ಞಾನಿಕ, ನಾಟಕ ಹಾಗೂ ಚಿತ್ರಗಳನ್ನು ಮೆಚ್ಚುತ್ತಾರೆ.



ಗಿರಿಜಾ ಟಿ.

ಚಿತ್ರದುರ್ಗ ಜಿಲ್ಲೆಯ ದಾವಣಗೆರೆಯಲ್ಲಿ ಜನಿಸಿದ ಗಿರಿಜಾರವರು ಓದಿದ್ದು ಎಸ್.ಎಸ್.ಎಲ್.ಸಿ. ಯವರೆಗೆ ಮಾತ್ರ. ಜೀವನೋಪಾಯಕ್ಕಾಗಿ ಆಸ್ಪತ್ರೆಯ ವಾರ್ಡನ್ ಆಗಿ ದುಡಿಯುತ್ತಿದ್ದಾರೆ.

೧. 'ಮಹಿಳೆ ಮತ್ತು ದಾದಿವೃತ್ತಿ' ಅಂತರರಾಷ್ಟ್ರೀಯ ಮಹಿಳಾ ವರ್ಷದಲ್ಲಿ ಬಹುಮಾನ ಗಳಿಸಿದ ಪುಸ್ತಕವಾಗಿದೆ. ೨. 'ಭಿಕ್ಷುಕಿ' ಕಾದಂಬರಿ ಅ.ನ.ಕೃ. ಕಾದಂಬರಿ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದೆ.

ಪ್ರಕಟಿತ ಕೃತಿಗಳು :

೧. ಮಹಿಳೆ ಮತ್ತು ದಾದಿ ವೃತ್ತಿ - ೧೯೭೫
೨. ಭಿಕ್ಷುಕಿ - ೧೯೭೯ ಕಾದಂಬರಿ
೩. ಬಲಿ - ೧೯೭೯ ,,
೪. ಬೆಳ್ಳಕ್ಕಿಗಳು - ೧೯೭೭ ,,
೫. ಬಹಿಷ್ಕಾರ - ೧೯೮೦ ,,

ಅನೇಕ ಕಥಾ ಸಂಕಲನಗಳಲ್ಲಿ ಅವರ ಕಥೆಗಳು ಆಯ್ಕೆಯಾಗಿ ಪ್ರಕಟಿತವಾಗಿವೆ. ನಾಡಿನ ಅನೇಕ ಪತ್ರಿಕೆಗಳಲ್ಲಿ ಬಹುಮಾನಿತ ಬರಹಗಳು ಅಚ್ಚಾಗಿವೆ.

ನಾಟಕಾಭಿನಯದಲ್ಲಿ ಅಭಿರುಚಿ ಬೆಳೆಸಿಕೊಂಡಿದ್ದಾರೆ. ಚಿತ್ರಕಲೆ ಇವರ ಹವ್ಯಾಸವಾಗಿದೆ.



ಗೀತಾ ಅಕ್ಕಿ

ಧಾರವಾಡ ಜಿಲ್ಲೆಯಲ್ಲಿ ಹುಟ್ಟಿ, ವಿಜಾಪುರದಲ್ಲಿ ನೆಲೆಸಿರುವ ಗೀತಾ ಸಂಗನ ಬಸಪ್ಪ ಅಕ್ಕಿ ಅವರು ಸಾಹಿತ್ಯರಂಗಕ್ಕೆ ಹೊಸದಾಗಿ ಕಾಲಿಟ್ಟಿರುವ ಉದಯೋನ್ಮುಖ ಲೇಖಕಿ. ತತ್ವಜ್ಞಾನ ಪ್ರಚಾರ, ರಾಜಕೀಯ ರಂಗದಲ್ಲಿ ಆಸಕ್ತಿ, ಸಂಗೀತ, ಸಾಹಿತ್ಯ ದತ್ತ ವಿಶೇಷ ಒಲವು. ಸಮಾಜಸೇವೆ ಇವರ ಆಸಕ್ತಿಯ ಇನ್ನೊಂದು ರಂಗ. ಇವರ ಹಲವಾರು ನಿಬಂಧಗಳು ಬಹುಮಾನಗಳನ್ನು ಪಡೆದಿವೆ. 'ಕನ್ಯಾಕುಮಾರಿ' ಎಂಬುದು ಇವರ ಕಾವ್ಯನಾಮ.

ಗೀತಾ ಅವರು ಬಿ.ಎ. ಪದವೀಧರೆ. ಗೃಹಿಣಿ. ಪತ್ರಿಕೋದ್ಯಮದಲ್ಲಿ ಆಸಕ್ತಿಯಿದೆ.

ಇವರ ಪ್ರಕಟಿತ ಕೃತಿ :

“ಹೆಣ್ಣಲ್ಲವೇ ?” – ೪೧ ಕವನಗಳ ಸಂಕಲನ.



ಗೀತಾ ಕಬಾಡಿ

ಗದಗ-ಬೆಟಗೇರಿ ಅವಳಿ ನಗರಗಳ ಕೊಡುಗೆ ಗೀತಾರವರು. ವಿದ್ಯಾರ್ಥಿ ದೆಸೆಯಲ್ಲಿರುವ ಕಿರಿಯ ಸಾಹಿತಿಯಾಗಿದ್ದಾರೆ. ಅಂತಿಮ ಬಿ.ಎ. ವ್ಯಾಸಂಗ ಮಾಡು ತ್ತಲೇ ಪ್ರಥಮ ಕಾದಂಬರಿಯನ್ನು ಪ್ರಕಟಿಸಿದ್ದಾರೆ.

ಇವರ ಪ್ರಕಟಿತ ಕಾದಂಬರಿ :

"ಬೆಳಕು" - ೧೯೮೧



ಗೀತಾ ಕುಲಕರ್ಣಿ

ಮೂಲತಃ ದಕ್ಷಿಣ ಕನ್ನಡದವರಾದ ಇವರು ಹುಟ್ಟಿದ್ದು ೧೯೨೭ರಲ್ಲಿ ಮುಂಬಯಿಯಲ್ಲಿ. ಮಾತೃಭಾಷೆ ತುಳು. ಸಾಹಿತ್ಯ ರಚನೆಯ ಮಾಧ್ಯಮ ಕನ್ನಡ. ಬಾಲ್ಯದಿಂದಲೂ ಇವರಿಗೆ ಸಂಗೀತ, ನೃತ್ಯ, ನಾಟಕ, ಲಲಿತಕಲೆಗಳಲ್ಲಿ ಒಲವು. ಮೆಟ್ರಿಕ್ಯುಲೇಷನ್ ವರೆಗೂ ಇವರ ವಿದ್ಯಾಭ್ಯಾಸ. ೧೯೭೯ರಲ್ಲಿ ಇವರು ಕನ್ನಡ ಸಾಹಿತ್ಯಕ್ಕೆ ನೀಡಿರುವ ಕೊಡುಗೆಗಾಗಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನಿತ್ತು ಸನ್ಮಾನಿಸಿದೆ.

ಪ್ರಕಟಿತ ಕೃತಿಗಳು :

೧	ಕಂಬನಿ ಒರೆಸಿದ ಕೈ	: ಕಾದಂಬರಿ
೨	ಸ್ವಪ್ನಮಂದಿರ	,,
೩	ಶೋಭನಾ	,,
೪	ದೀಪ ಮಿಂಚಿತು	,,
೫	ಸಂಬಂಧ	,,
೬	ನೂಲವಿಣಿ	,,
೭	ತೇಲಿಹೋದ ಮೋಡ	,,
೮	ಮನಸಂಧಾನ	ಕಥಾ ಸಂಗ್ರಹ
೯	ಸುವರ್ಣೆಯ ಗ್ರೀನ್‌ರೂಂ	,,
೧೦	ಚಿಪ್ಪಿನೊಳಗಿದ್ದ ಮುತ್ತು	,,
೧೧	ಪಾತಾಳ	,,
೧೨	ತುಳು ಜಾನಪದ ಕಥೆಗಳು (ಭಾಗ ೧ ಮತ್ತು ೨)	ಕಥಾಸಂಗ್ರಹ
೧೩	ಮೂರು ನಾಟಕಗಳು	
೧೪	ಪತ್ಥರ	
೧೫	ಏಳು ಕನ್ನಿಕೆಯರು	ಬಾಲಸಾಹಿತ್ಯ
೧೬	ಹಾರುವ ಕಂಬಳಿ	,,
೧೭	ಅರವತ್ತನಾಲ್ಕು ವಿದ್ಯೆ	,,
೧೮	ಗುಬ್ಬಚ್ಚಿ	ಕಾದಂಬರಿ
೧೯	ಹೂಮನೆ	,,
೨೦	ಹುರಿಗಾಳು	ನಗೆಬರಹ
೨೧	ತಿಮ್ಮಪ್ಪನಾಯಕ	ಜೀವನಚರಿತ್ರೆ

ಇವರು ಅನೇಕ ಸಂಸ್ಥೆಗಳಿಂದ ಸನ್ಮಾನಿತರಾಗಿದ್ದಾರೆ. ಸರ್ಕಾರದ ಅನೇಕ ಸಲಹಾ ಸಮಿತಿಗಳಲ್ಲಿ ಇವರು ಸದಸ್ಯರಾಗಿದ್ದಾರೆ. ಕರ್ನಾಟಕ ರಾಜ್ಯ ಹಾಗೂ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿದ್ದಾರೆ. "ಕಂಬನಿ ಒರೆಸಿದ ಕೈ" (ಕಾದಂಬರಿ) ಬಿ.ಎಸ್ಸಿ., ಬಿ.ಕಾಂ., ತರಗತಿಗೆ, "ಸಂಬಂಧ" ಕಾದಂಬರಿ ಬಿ.ಎ. ತರಗತಿಗೆ, "ದೀಪ ಮಿಂಚಿತು" (ಕಾದಂಬರಿ) ಪಿ.ಯು.ಸಿ. ತರಗತಿಗೆ, "ಮೌನ ಸಂಧಾನ" (ಕಥಾ ಸಂಕಲನ) ಬಿ.ಎ. ತರಗತಿಗೆ ಪಠ್ಯಪುಸ್ತಕಗಳಾಗಿವೆ.



ಗೀತಾ ದೇಸಾಯಿ

ಕನ್ನಡ ಗಡಿನಾಡಾದ ಬೆಳಗಾವಿಯಲ್ಲಿ ಜನಿಸಿದ ಗೀತಾರವರು ಸದ್ಯದಲ್ಲಿ ಬೆಂಗಳೂರಿನಲ್ಲಿದ್ದಾರೆ. ಬಿ.ಎ. ಆನರ್ಸ್ ಓದು. ಗೃಹಿಣಿಯಾಗಿ ಮನೆಯಲ್ಲಿದ್ದುಕೊಂಡು ಸಾಹಿತ್ಯಾಸಕ್ತಿಯಿಂದ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ದುಡಿಮೆ ನಡೆಸಿದ್ದಾರೆ.

ಪ್ರಕಟಿತ ಕೃತಿಗಳು :

೧ ಕ್ರಾಂತಿವೀರ ಗೋವಿಂದರಾವ್ ಯಾಳಗಿ (ಜೀವನಚರಿತ್ರೆ) - ೧೯೭೬
೨ ಭರ್ತಾ ರಕ್ಷತಿ ಯೌವನೆ (ಕಥಾ ಸಂಕಲನ) - ೧೯೮೧

ನಾಡಿನ ಕನ್ನಡ ಪತ್ರಿಕೆಗಳಲ್ಲಿ ಅನೇಕ ಸಾಹಿತ್ಯಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ.

ಸಾಹಿತ್ಯ ಸಂಗೀತದಲ್ಲಿ ಸಮಾನ ಆಸಕ್ತಿಯಿದ್ದು ಅನೇಕ ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಬಾನುಲಿ ನಾಟಕಗಳನ್ನು ಬರೆದುದೂ ಅಲ್ಲದೆ ಭಾಗವಹಿಸಿಯೂ ಇದ್ದಾರೆ. ಕರ್ನಾಟಕ ಲೇಖಕಿಯರ ಸಂಘದ ಕಾರ್ಯದರ್ಶಿನಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಾಹಿತಿ ಗೋವಿಂದಮೂರ್ತಿ ದೇಸಾಯಿಯವರ ಪತ್ನಿಯಾಗಿದ್ದಾರೆ.



ಗೀತಾ ನಾಗಭೂಷಣ ಜಿ.

ಕಲಬುರ್ಗಿಯ ಸ್ಥಳೀಯ ಕನ್ಯಾ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾಗಿ ಸೇವೆ ಸಲ್ಲಿಸುತ್ತಿರುವ ಗೀತಾರವರ ಜನ್ಮಸ್ಥಳ - ಕಲಬುರ್ಗಿ. ನಲವತ್ತರ ಹರೆಯದ ಇವರು ಎಂ.ಎ., ಬಿ.ಇಡಿ. ಪದವೀಧರೆ. ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿದ್ದರು. ಸಾಹಿತ್ಯದಲ್ಲಿ ಅಪಾರವಾದ ಕೃಷಿ ನಡೆಸಿ ಅನೇಕ ಕಿರುಗತೆಗಳು, ಮತ್ತು ಕಾದಂಬರಿಗಳನ್ನು ಅನೇಕ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಆಕಾಶವಾಣಿಯಲ್ಲಿ ಪ್ರಸಾರವಾಗಿವೆ.

ಪ್ರಕಟಿತ ಕೃತಿಗಳು :

ಕಾದಂಬರಿ :

೧ ತಾವರೆಯ ಹೂವು

೨ ಚಂದನದ ಚಿಗುರು

೩ ಮಹಾಮನೆ

೪ ಮರಳಿನ ಮನೆ

೫ ಅಘಾತ

ಓದುವುದು ಇವರ ಹವ್ಯಾಸವಾಗಿದೆ.



ಗೀತಾ ಸಿ. ವಿ.

ಗೀತಾರವರು ಬೆಂಗಳೂರಿನ ಗೃಹವಿಜ್ಞಾನ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ, ಆಹಾರ ವಿಜ್ಞಾನ ವಿಭಾಗದ ಮುಖ್ಯಸ್ಥೆಯಾಗಿ ಕೆಲಸ ಮಾಡುತ್ತಿದ್ದಾರೆ. "ಮಹಿಳೆ ಮತ್ತು ಮಕ್ಕಳ ಪೋಷಣೆ" ಪುಸ್ತಕ ಮಹಿಳಾ ವರ್ಷದ ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನವನ್ನು ಪಡೆದಿದೆ.

ಪ್ರಕಟಿತ ಕೃತಿಗಳು :

೧ ಮನೆ ಮತ್ತು ಕುಟುಂಬ - ೧೯೭೭

೨ ಆಹಾರ ಮತ್ತು ಮಕ್ಕಳ ಬೆಳವಣಿಗೆ - ೧೯೮೧

೩ ಹೊಲಿಗೆ - ೧೯೮೧

೪ ಮಹಿಳೆ ಮತ್ತು ಮಕ್ಕಳ ಪೋಷಣೆ - ೧೯೭೫

ಈ ಪುಸ್ತಕಗಳನ್ನೂ, ಲೇಖನಗಳನ್ನೂ ಮಹಿಳೆ ಮತ್ತು ಮಕ್ಕಳ ವಿಷಯವಾಗಿ ವೈಜ್ಞಾನಿಕ ದೃಷ್ಟಿಕೋನದಿಂದ ಬರೆದಿದ್ದಾರೆ. ಸಂಗೀತ, ಸಾಹಿತ್ಯಾಭ್ಯಾಸ, ಕರಕುಶಲ ಕೈಗಾರಿಕೆಯಲ್ಲಿ ಆಸಕ್ತಿಬೆಳೆಸಿಕೊಂಡಿದ್ದಾರೆ.



ಗೋಪಿಕಾ ವೆಂಕಟರಾಂ

"ವನಸುಮ" ಕಾವ್ಯನಾಮದೊಂದಿಗೆ ಬರೆಯುತ್ತಿರುವ ಇವರು ಲೇಖಕಿಯಲ್ಲದೆ ಸಂಗೀತಗಾರರೂ ಆಗಿದ್ದಾರೆ. ಅನೇಕ ಸಂಗೀತ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನೂ ಪಡೆದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಬಿ.ಎಸ್ಸಿ. ಪದವೀಧರೆ. ರಾಷ್ಟ್ರಭಾಷಾ ವಿಶಾರದೆ, ಸಂಗೀತದಲ್ಲಿ ಸೀನಿಯರ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ.

ಪ್ರಕಟಿತ ಕೃತಿ :

ಪನ್ನಾಲಾಲ್ ಘೋಷ್

ಅವರ ಅನೇಕ ಕಥೆ, ಕವನಗಳಿಗೆ ಬಹುಮಾನ ದೊರೆತಿವೆ. ಲೇಖನಗಳೂ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಚಿಕ್ಕ ವಯಸ್ಸಿನಲ್ಲಿಯೇ ಪೋಲಿಯೋಪೀಡಿತೆಯಾದರೂ ಸ್ವಾವಲಂಬನೆಯ ಬದುಕು ಅವರದು. ಹೆಚ್.ಎ.ಎಲ್.ನಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಅಖಿಲ ಭಾರತ ಪ್ರತಿಭೆ ಹಾಗೂ ಕೈಚಳಕ ಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನ ಪಡೆದ ಪ್ರತಿಭಾಶಾಲಿಯಾಗಿದ್ದಾರೆ.



ಗೌರುಭಟ್

ಗೌರುಭಟ್ ಅವರ ಜನ್ಮಸ್ಥಳ ವೀರಾಜಪೇಟೆ. ೧೯೩೪ರಲ್ಲಿ ಜನನ. ಎಸ್.ಎಸ್.ಎಲ್.ಸಿ. ವರೆಗೆ ಕಾನ್ವೆಂಟಿನಲ್ಲಿ ಶಿಕ್ಷಣ. ಅಧ್ಯಾಪಕಿಯಾಗಿ ಕೆಲಕಾಲ ಉದ್ಯೋಗ. ತರುವಾಯ ಹೆಚ್ಚಿನ ವ್ಯಾಸಂಗ ಮುಂದುವರಿಯಿತು. ಹಿಂದೀ ಮತ್ತು ಸಮಾಜಶಾಸ್ತ್ರ ಎರಡೂ ವಿಷಯಗಳಲ್ಲಿ ಎಂ. ಎ. ಪದವೀಧರೆ. ಸದ್ಯಕ್ಕೆ ರಾಯಚೂರಿನ ಎಸ್.ಎಸ್.ಆರ್.ಜಿ. ಮಹಿಳೆಯರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕಿಯಾಗಿ ಉದ್ಯೋಗ ನಿರ್ವಹಣೆ.

ಕಳೆದ ೨೫ ವರ್ಷಗಳಿಂದ ಕಥೆ, ಕವನ, ಲೇಖನ, ಪ್ರಹಸನ ಇತ್ಯಾದಿಗಳನ್ನು ಬರೆಯುವ ಹವ್ಯಾಸದೊಡನೆ ಅಂಚೆ ಚೀಟಿ ಸಂಗ್ರಹ, ವಿವಿಧ ದೇಶಗಳ ನಾಣ್ಯ ಸಂಗ್ರಹಣವೂ ಇವರ ಇತರ ಹವ್ಯಾಸಗಳು.

ಇವರ ಪ್ರಕಟಿತ ಕೃತಿ :

೧ ನನ್ನ ಪತಿ ನನ್ನ ದೇವರು-(ಅನುವಾದ) ೧೯೭೧

ಈ ಪುಸ್ತಕವು ಹಿಂದೀ ಕಾದಂಬರಿಕಾರ ಶ್ರೀ ಉಮಾಶಂಕರ ಅವರ 'ಮೇರೆ ಪತಿ ಮೇರೆ ದೇವತಾ' (ಲಲಿತಾ ಲಾಲ್‌ಬಹದ್ದೂರ್ ಶಾಸ್ತ್ರಿ ಅವರ ಜೀವನ ಸ್ಮರಣೆಗಳು) ಕೃತಿಯ ಅನುವಾದ. ಈ ಕೃತಿ ಕೆಲಕಾಲ ಕರ್ನಾಟಕ ವಿಶ್ವವಿದ್ಯಾನಿಲಯದ ಬಿ.ಎ. ಪರೀಕ್ಷೆಗೆ ಪಠ್ಯಪುಸ್ತಕವಾಗಿ ನೇಮಕಗೊಂಡಿತ್ತು.

ಗೌರುಭಟ್‌ರಿಗೆ ಸಮಾಜಸೇವೆಯೂ ಇನ್ನೊಂದು ಆಸಕ್ತಿರಂಗ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಸಕ್ರಿಯ ಕಾರ್ಯಕರ್ತೆ. ಕರ್ನಾಟಕ ಪ್ರಾಂತ್ಯದ ವಿದ್ಯಾರ್ಥಿ ಪರಿಷತ್ತಿನ ಉಪಾಧ್ಯಕ್ಷೆಯೂ ಆಗಿದ್ದಾರೆ.



ಚಂದ್ರಕಲಾ ಬಿ. ಎಸ್.

ಬೆಂಗಳೂರು ನಗರದ ಪ್ರೌಢಶಾಲೆಯೊಂದರಲ್ಲಿ ಸಂಗೀತದ ಉಪಾಧ್ಯಾಯಿನಿಯಾಗಿದ್ದಾರೆ. "ಸಂಗೀತ ರತ್ನ" ಬಿರುದು ಪಡೆದಿದ್ದಾರೆ.

ಇಂಟರ್ ಮೀಡಿಯಟ್, ಹಿಂದೀ ವಿಶಾರದರಾಗಿ, ಸಂಗೀತದ ವಿದ್ವತ್ತಿನಲ್ಲಿ ಬಂಗಾರದ ಪದಕ ಪಡೆದಿದ್ದಾರೆ.

ಪಿಟೀಲುವಾದನ, ಭಾವಗೀತೆ, ಗಾಯನ, ಸಂಗೀತ ಕಛೇರಿ, ರಾಗಸಂಯೋಜನೆಯಲ್ಲಿ ಕೃಷಿ, ಸಾಹಿತ್ಯ ರಚನೆಯೊಡನೆ ಗೃಹಾಲಂಕಾರ, ತೋಟಗಾರಿಕೆಯನ್ನೂ ಇವರು ಮರೆತಿಲ್ಲ. ಜೊತೆಗೆ ಸಾಮಾಜಿಕ ಚಟುವಟಿಕೆಗಳೂ ಉಂಟು. ಕರ್ನಾಟಕ ಗಾನಕಲಾ ಪರಿಷತ್ತಿನ ಈ ಸಾಲಿನ ಜಂಟಿ ಕಾರ್ಯದರ್ಶಿ. ಅನೇಕ ಸಂಘ-ಸಂಸ್ಥೆಗಳಿಗೆ ಅಧ್ಯಕ್ಷರಾಗಿ, ಸದಸ್ಯರಾಗಿ, ಕಾರ್ಯದರ್ಶಿಯಾಗಿ ಸೇವೆ. ಈ ಬಾರಿ ಶಿಕ್ಷಕರ ದಿನಾಚರಣೆಯಂದು 'ಉತ್ತಮ ಶಿಕ್ಷಕಿ' ಪ್ರಶಸ್ತಿ ಪಡೆದ ಮಹಿಳೆ. (೧೯೮೧)

ಇವರ ಅನೇಕ ಕವನಗಳು ಬಾನುಲಿಯಲ್ಲಿ ಪ್ರಸಾರ ಗೊಂಡಿವೆ. ಲೇಖನ, ಕಥೆಗಳು, ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಇವರ ಪ್ರಕಟಿತ ಕೃತಿಗಳು :

೧ ಸಂಗೀತದ ಬಾಲಪಾಠಗಳು, ೨ ನಿಜಗುಣ ಸ್ವರಸರಿತಾ, ೩ ಝೇಂಕಾರ (ಕವನ ಸಂಕಲನ), ೪ ಕವಿತಾ ಕಿರಣ (ಕವನ ಸಂಕಲನ), ೫ ರಸರಾಗರಸಿಕೆ (ಕನವ ಸಂಕಲನ), ೬ ನಮೋ ಮಾತೃಭೂಮಿ (ಕವನ ಸಂಕಲನ), ೭ ಪ್ರಕೃತಿಯಾರಾಧನೆ (ಕವನ ಸಂಕಲನ), ೮ ಬಿಸಿಲು ನೆರಳು (ಕಾದಂಬರಿ), ೯ ಸಂಗೀತದ ಸುಳಿಯಲ್ಲಿ (ಕಾದಂಬರಿ), ೧೦ ಕಾಂಚನದ ಕಮರು (ನಾಟಕ)

ಸಂಗೀತ ವಿದುಷಿ ಶ್ರೀಮತಿ ಚೆನ್ನಮ್ಮ ಸನ್ಮಾನ ಸ್ಮರಣ ಸಂಚಿಕೆಯ ಸಂಪಾದಕಿಯಾಗಿಯೂ ಈಕೆ ಕೆಲಸ ಮಾಡಿದ್ದಾರೆ. ಚಂದ್ರಕಲಾರವರು ಶ್ರೀಮತಿ ಚೆನ್ನಮ್ಮನವರ ಮಗಳೂ ಕೂಡ.



ಚಂದ್ರಭಾಗಾದೇವಿ ಯು.ಕೆ.

ಪ್ರಸಿದ್ಧ ನೃತ್ಯಪಟು ಯು. ಎಸ್. ಕೃಷ್ಣರಾವ್ ಅವರ ಸಹಧರ್ಮಿಣಿಯಾದ ಇವರು ೧೯೨೧ರಲ್ಲಿ ಪುತ್ತೂರಿನಲ್ಲಿ ಜನಿಸಿದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಬಿ.ಎಸ್ಸಿ., ಪದವೀಧರೆಯೆನಿಸಿಕೊಂಡ ಇವರಿಗೆ ಬಾಲ್ಯದಿಂದಲೂ ನರ್ತನ ಕಲಿಯುವ ಹೆಬ್ಬಯಕೆ. ಅದರಂತೆ ಭರತನಾಟ್ಯ ಪ್ರವೀಣೆಯಾಗಿ, ವಿವಾಹಾನಂತರ ಇವರು ಸಾಧಿಸಿದ್ದು ಅಪಾರ. ೪೦ ವರ್ಷಗಳಲ್ಲಿ ಭಾರತದ ಎಲ್ಲೆಡೆ ಮತ್ತು ಯೂರೋಪ್, ಅಮೆರಿಕಾ, ಕೆನಡಾ, ಆಗ್ನೇಯ ಏಷ್ಯಾದಲ್ಲಿ ಪತಿಯೊಡನೆ ಸುಮಾರು ೨೦೦೦ ನೃತ್ಯ ಪ್ರದರ್ಶನಗಳನ್ನಿತ್ತಿದ್ದಾರೆ. ಸುಮಾರು ೩೦ ಟೆಲಿವಿಷನ್ ಕಾರ್ಯಕ್ರಮಗಳು ಪ್ರದರ್ಶಿತವಾಗಿವೆ. ಅನೇಕ ಪ್ರದರ್ಶನ ಭಾಷಣಗಳನ್ನು ಕೊಟ್ಟಿದ್ದಾರೆ. ಸಾವಿರಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಭರತನಾಟ್ಯ ಶಿಕ್ಷಣ ಕೊಟ್ಟು, ಪರದೇಶದಿಂದ ಬಂದ ವಿದ್ಯಾರ್ಥಿಗಳಿಗೂ ತರಬೇತಿಯನ್ನಿತ್ತಿರುವ ಖ್ಯಾತಿ ಇವರದು. ಸದ್ಯಕ್ಕೆ ಭಾರತೀಯ ವಿದ್ಯಾಭವನದ ನೃತ್ಯ ನಿರ್ದೇಶಕರಾಗಿ, ಅಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ತಮ್ಮ ಅನಿಸಿಕೆ - ಅನುಭವ - ಜ್ಞಾನವನ್ನು ಸಾಹಿತ್ಯ ಪ್ರಕಾರದಲ್ಲೂ ಹರಿಯಬಿಟ್ಟಿರುವ ಇವರ ಕೃತಿಗಳು :

೧ ಗೆಜ್ಜೆಯ ಹೆಜ್ಜೆ ನುಡಿ (ಪ್ರವಾಸ ಸಾಹಿತ್ಯ) ೧೯೭೧

೨ ಆಧುನಿಕ ಭಾರತದಲ್ಲಿ ನೃತ್ಯಕಲೆ-೧೯೫೯-೭೧

೩ ನೃತ್ಯ ಕಲೆ (ಪಠ್ಯಪುಸ್ತಕ)-೧೯೪೦

೪ ಲಾಸ್ಯ ರಂಜನ (ಭಾಷಾಂತರ)-೧೯೬೬

ನರ್ತನದ ವಿಷಯವನ್ನು ಕುರಿತು ನೂರಾರು ಲೇಖನಗಳನ್ನು ಬರೆದಿದ್ದಾರೆ. 'ಗೆಜ್ಜೆಯ ಹೆಜ್ಜೆ ನುಡಿ' ಕೃತಿಗೆ ಪ್ರವಾಸ ಸಾಹಿತ್ಯದ ಪ್ರಕಾರದಲ್ಲಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಎರಡನೆ ಬಹುಮಾನ ದೊರೆತಿದೆ. ಇವರು ಅನೇಕ ಸಂಘ - ಸಂಸ್ಥೆಗಳಿಂದ ಸನ್ಮಾನಿತರಾಗಿದ್ದಾರೆ.



ಚಂದ್ರಭಾಗಿ ಕೆ. ರೈ

ಏಳನೆಯ ತರಗತಿಯವರೆಗೆ ವಿದ್ಯಾಭ್ಯಾಸ ನಡೆಸಿರುವ ಏರ್ಯ ಚಂದ್ರಭಾಗಿ ಅವರು ರೈತ ಮಹಿಳೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನಿಸಿದ ಇವರು ಅರವತ್ತೈದು ವರ್ಷಗಳ ವಯೋವೃದ್ಧ ಲೇಖಕಿ. ಭೂ ಕೃಷಿಯಲ್ಲಿ ನಿಪುಣರಾದಂತೆ, ಸಾಹಿತ್ಯ ಕೃಷಿಯಲ್ಲೂ ಕೈಯಾಡಿಸಿದ್ದಾರೆ. ಸ್ತ್ರೀ ವಿದ್ಯಾಭ್ಯಾಸದಿಂದ ಹಿಡಿದು ಪಾತಿವ್ರತ್ಯ, ಸೌಂದರ್ಯ, ಸಂಗೀತ, ಸಮಾಜೋದ್ಧಾರ, ಭೂಸುಧಾರಣೆ ಮುಂತಾದ ಹತ್ತು ಹಲವು ವಿಷಯಗಳಲ್ಲಿ ವಿಚಾರಪೂರ್ಣ ಲೇಖನಗಳನ್ನು ನಾಡಿನ ಹಲವಾರು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ತಮ್ಮ ಕ್ಷೇತ್ರದ ರೈತ ಮಹಿಳೆಯರ ಸಮಸ್ಯೆಗಳನ್ನು ಚರ್ಚಿಸಿ ಜನರ ಮುಂದಿಟ್ಟಿದ್ದಾರೆ.

ಇವರ ಪ್ರಕಟಿತ ಕೃತಿ :

"ಮಂಗಲ ಅವಮಂಗಲ"



ಚಂಪಾವತಿ ಮಹಿಷಿ

ಅರವತ್ತರ ಅಂಚಿನಲ್ಲಿರುವ ಚಂಪಾವತಿಯವರು ಧಾರವಾಡದವರು. ಎಂ.ಎ. ಬಿ.ಟಿ., ಡಿ.ಪಿ.ಎಡ್., ಡಿ.ಬಿ.ಇ. ಪದವೀಧರೆ. ಪದವೀಧರರ ಮೂಲಶಿಕ್ಷಣ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲರು. ಸಮಾಜಸೇವಾಸಕ್ತರು. ಆಕಾಶವಾಣಿಯ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ಪ್ರಕಟಿತ ಕೃತಿಗಳು :

೧ ವನಸುಮ (ಕಥಾ ಸಂಕಲನ)

೨ ಮುದ್ದುಕುಮಾರ (ನೀಳ್ಗತೆ)

೩ ಗುರುದಕ್ಷಿಣೆ (ಕಥಾ ಸಂಕಲನ)

೪ ಹೊಸ ತಿರುವು (ಕಥಾ ಸಂಕಲನ)

ಹೊಲಿಗೆ, ಗಾಯನಗಳಲ್ಲಿ ಅಭಿರುಚಿ ಬೆಳೆಸಿಕೊಂಡಿದ್ದಾರೆ.



ಚಿತ್ರಲೇಖಾ ಎಸ್.

ಜನ್ಮತಃ ಪೂನಾದವರಾದ ಚಿತ್ರಲೇಖಾ ಅವರು ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ವೃತ್ತಿಯಿಂದ ಅಧ್ಯಾಪಕಿಯಾಗಿ, ಪ್ರವೃತ್ತಿಯಿಂದ ಲೇಖಕಿಯಾಗಿದ್ದಾರೆ. ಸಣ್ಣಕಥೆ, ಕಾದಂಬರಿಗಳನ್ನು ಬರೆಯುವುದು ಇವರ ಮೆಚ್ಚಿನ ಹವ್ಯಾಸ. ಕಳೆದ ದಶಕದಿಂದ ಇವರ ಸಾಹಿತ್ಯ ಕೃಷಿ ತಡೆಯಿಲ್ಲದೆ ನಡೆದುಕೊಂಡು ಬಂದಿದೆ.

ಇವರ ಪ್ರಕಟಿತ ಕೃತಿಗಳು :

೧ ಮುದುಡಿದ ತಾವರೆ ಅರಳಿತು
೨ ಚಂದ್ರಿಕಾ
೩ ಪ್ರೇಮಪಲ್ಲವಿ
೪ ಮಿಲನ
೫ ಅರ್ಚನಾ – ಚೇತನಾ
೬ ಅಳಿವು - ಉಳಿವು
೭ ಶೃತಿ
೮ ಪವಿತ್ರ
೯ ಸ್ವರ್ಗದ ನೆರಳು
೧೦ ಸಮಯದ ಗೊಂಬೆ
೧೧ ಪ್ರೇಮದ ಬೆಲೆ



ಛಾಯಾದೇವಿ ನಂಜಪ್ಪ

ತುಮಕೂರಿನ ಛಾಯಾದೇವಿ ನಂಜಪ್ಪ ಅವರು ಪ್ರಮುಖವಾಗಿ ಕಾದಂಬರಿ ಗಾರ್ತಿ, ಅನೇಕ ಸಣ್ಣ ಕಥೆ, ಹರಟೆಗಳನ್ನೂ ಸಹಬರೆದಿದ್ದಾರೆ.

ಇವರ ಪ್ರಕಟಿತ ಕಾದಂಬರಿಗಳು :

೧ ಹರ್ಷದ ಹೊನಲು
೨ ಮಾತೃ ಹೃದಯ
೩ ತೌರುಮನೆ
೪ ಸಂಗಮ

'ಸಂಗಮ' ಮತ್ತು 'ಶಾಂತಮಯಿ' ಕಾದಂಬರಿಗಳು ವಾರಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಹರಿದು ಬಂದಿವೆ. ಹಲವಾರು ಕಿರುಗತೆಗಳನ್ನೂ ಬರೆದು ಪ್ರಕಟಿಸಿದ್ದಾರೆ. ಅಲ್ಲದೆ ಇವರು ರಚಿಸಿದ ನಾಟಕಗಳು ಬೆಂಗಳೂರಿನ ಬಾನುಲಿಯಲ್ಲಿ ಬಿತ್ತರಗೊಂಡಿವೆ.

ಛಾಯಾದೇವಿಯವರಿಗೆ ಸಾಹಿತ್ಯದಷ್ಟೇ ಗಮಕವಾಚನವೂ ಇನ್ನೊಂದು ಪ್ರಿಯ ಹವ್ಯಾಸ. ಚಿಕ್ಕಂದಿನಿಂದಲೂ ಗಮಕಕಲೆಯಲ್ಲಿ ಅಭಿರುಚಿ.



ಜಗ್ಗು ಪ್ರಿಯದರ್ಶಿನಿ

'ಜಗ್ಗು ಪ್ರಿಯದರ್ಶಿನಿ' ಎಂಬ ಕಾವ್ಯನಾಮದಿಂದ ಬರೆಯುತ್ತಿದ್ದಾರೆ ಚಿನ್ನಮ್ಮನವರು. ಇವರ ಜನನ ೧೯೨೭ರಲ್ಲಿ, ಜನ್ಮಸ್ಥಳ ನಾಲಮಂಗಲ· ಎಸ್.ಎಸ್.ಎಲ್.ಸಿ., ಹಿಂದೀ ವಿಶಾರದರಾದ ಚಿನ್ನಮ್ಮನವರ ಹವ್ಯಾಸಗಳು ಹಲವಾರು—ಹೊಲಿಗೆ, ಕಸೂತಿ, - ಹಿಡಿದು ಸಾಹಿತ್ಯದವರೆಗೂ ಹಮ್ಮಿದೆ. ಚಿಕ್ಕಂದಿನಿಂದಲೇ ಇವರಿಗೆ ಬರೆಯುವ ಅಭ್ಯಾಸ, ತಂದೆ ಜಗ್ಗು ಶಿಂಗ್ರುರಂಯ್ಯಂಗ್ಯಾರ್, ಸಂಸ್ಕೃತ ಕವಿಗಳು.ಪಂಡಿತರು,

ಆಕಾಶವಾಣಿಯಲ್ಲಿ ಇವರು ರಚಿಸಿದ ಅನೇಕ ಮಕ್ಕಳ ಕತೆ,ನಾಟಕ,ಪ್ರಹಸನ ರೂಪಕಗಳು ಬಿತ್ತರಗೊಂಡಿವೆ. ಕತೆ, ಲೇಖನಗಳು ಪತ್ರಿಕೆಗಳಲ್ಲಿ ಬೆಳಕು ಕಂಡಿವೆ ; ಬಹುಮಾನ ಪಡೆದಿವೆ.

ಇವರ ಪ್ರಕಟಿತ ಕೃತಿಗಳು :

೧ ಲಂಬಾಣಿ ಲಕ್ಕಿ (ಕಾದಂಬರಿ)—೧೯೭೭
೨ ಪರಿವರ್ತನೆ (ನಾಟಕ)—೧೯೮೦
೩ ಸತ್ತವರ ಸಂಘ (ನಾಟಕ)—೧೯೮೦
೪ ನಾಗಸಾಕಿ (ಮಕ್ಕಳ ಸಾಹಿತ್ಯ)—೧೯೭೯
೫ ಮಕ್ಕಳಿಗೆ ಮಧು ,,

ಸಾಹಿತ್ಯಿಕ ಚರ್ಚೆ—ಗೋಷ್ಠಿ, ಸಮಾರಂಭಗಳಲ್ಲಿ ಭಾಗವಹಿಸುವ ಚಿನ್ನಮ್ಮ ತುಮಕೂರಿನ ಪ್ರಾಥಮಿಕ ಶಾಲಾ ಉಪಾಧ್ಯಾಯಿನಿ. ಶಾಲಾ ಮಕ್ಕಳಿಗೆ ತಾವೇ ರಚಿಸಿದ ಕವನಗಳನ್ನು ಹಾಡಿಸಿ, ನೃತ್ಯ, ನಾಟಕಗಳನ್ನು ಆಡಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುವುದು ತುಂಬಾ ಪ್ರಿಯ ಹವ್ಯಾಸ, ೧೯೮೦ರ ಸಾಲಿನ ಉತ್ತಮ ಶಿಕ್ಷಕಿ ಪ್ರಶಸ್ತಿ ಇವರಿಗೆ ಲಭಿಸಿದೆ.



ಜಯಂತಿಬಾಯಿ ಎಂ.

ದಕ್ಷಿಣ ಕನ್ನಡದ ಮುಲ್ಕಿಯಲ್ಲಿ ಜನಿಸಿದ ಜಯಂತಿಬಾಯಿಯವರು ಬಿ.ಎಸ್ಸಿ., ಎಂ.ಎ., ಎಂ.ಫಿಲ್. ಪದವೀಧರೆ. ಅಲ್ಲದೆ ಭಾಷಾಂತರ ಜೈನಾಲಜಿ ಹಾಗೂ ಪ್ರಾಕೃತಗಳಲ್ಲಿ ಡಿಪ್ಲೊಮಾಗಳಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹಾಯಕ ಅನುವಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವರ ಪ್ರಕಟಿತ ಕೃತಿಗಳು ;

೧ ಆಧುನಿಕ ರಾಜ್ಯಶಾಸ್ತ್ರ ಸಿದ್ಧಾಂತ ಪರಿಚಯ (ಅನುವಾದ)-೧೯೭೩
೨ ಕಾಲೇಜು ಸಸ್ಯ ವಿಜ್ಞಾನ (ಅನುವಾದ)
೩ ಬಿಸಿಲು (ಕಿರು ಕಾದಂಬರಿ) (ಅನುವಾದ)
೪ ಮಹಿಳೆ ಮತ್ತು ಕನ್ನಡ-೧೯೭೫
೫ ಕುಂಕುಮ ಕೇಸರಿ (ಮಕ್ಕಳ ಸಾಹಿತ್ಯ)-೧೯೭೯

೧೯೭೯ರಲ್ಲಿ ಗುಲ್ಬರ್ಗಾದ ಅನಕೃ ಸ್ಮಾರಕ ಸಮಿತಿಯ "ಅನಕೃ ಮತ್ತು ಪ್ರಗತಿಶೀಲ ಸಾಹಿತ್ಯ ಲೇಖನ" ಹಾಗೂ ೧೯೭೪ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ "೧೯೬೩ ರಿಂದ ೭೩ರ ವರೆಗಿನ ಸಣ್ಣಕತೆಗಳು" ಪ್ರಬಂಧಕ್ಕೆ ಬಹುಮಾನಗಳು ದೊರೆತಿವೆ. ೧೯೭೮ರಲ್ಲಿ ಬೆಂಗಳೂರು ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯದ ಕನ್ನಡ ಸಾಂಸ್ಕೃತಿಕ ಸಂಘದ ವಿಜ್ಞಾನ ಪ್ರಬಂಧ ಸ್ಪರ್ಧೆಗಳಲ್ಲಿ ದ್ವಿತೀಯ ಬಹುಮಾನ, ೧೯೭೯ರಲ್ಲಿ ಧರ್ಮಸ್ಥಳದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವರದಿ ಸ್ಪರ್ಧೆಯಲ್ಲಿ ಪ್ರಥಮ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ವಿಮರ್ಶಾ ಸ್ಪರ್ಧೆಯಲ್ಲಿ ಬಹುಮಾನಗಳು ದೊರೆತಿವೆ.

ತೋಟಗಾರಿಕೆ ಹಾಗೂ ಪ್ರವಾಸಗಳಲ್ಲಿ ಆಸಕ್ತಿಯನ್ನಿರಿಸಿಕೊಂಡಿದ್ದಾರೆ.



ಜಯದೇವಿತಾಯಿ ಲಿಗಾಡೆ

ಕನ್ನಡ ಗಡಿನಾಡಿನ ಶರಣ ಸಾಹಿತಿ ಜಯದೇವಿತಾಯಿ ಲಿಗಾಡೆಯವರು ಸೊಲ್ಲಾಪುರದವರು. ೧೯೧೨ರಲ್ಲಿ ಜನಿಸಿದ್ದಾರೆ. ನಾಡು ನುಡಿಯ ಸೇವಕಿಯಾಗಿ ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಕನ್ನಡದಂತೆ ಮರಾಠಿಯಲ್ಲಿಯೂ ಸಿದ್ಧಹಸ್ತರಾಗಿದ್ದಾರೆ.

ಪ್ರಕಟಿತ ಕೃತಿಗಳು :

ಕನ್ನಡ ಕೃತಿಗಳು :

೧ ಜಯಗೀತ-೧೯೫೨
೨ ತಾಯಿಯ ಪದಗಳು-೧೯೫೯
೩ ಸಿದ್ಧರಾಮ ಪುರಾಣ-೧೯೬೫-೭೧
೪ ತಾರಕ ತಂಬೂರಿ-೧೯೬೮


ಮರಾಠಿ ಕೃತಿಗಳು :

೧ ಸಿದ್ಧವಾಣಿ
೨ ಬಸವದರ್ಶನ
೩ ಮಹಾಯೋಗಿನಿ
೪ ಸಿದ್ಧರಾಮಾಂಚಿ ತ್ರಿಪದಿ
೫ ಸಮೃದ್ಧ ಕರ್ನಾಟಕಾಂಚೆ ರೂಪಲೇಖಾ
೬ ಬಸವ ವಚನಾಮೃತ

ಭಕ್ತಿಭಾವದ ಅವರ ಗೀತೆಗಳು ಜನಪ್ರಿಯತೆ ಗಳಿಸಿವೆ. ಸಿದ್ಧರಾಮ ಪುರಾಣ ತ್ರಿಪದಿಯಲ್ಲಿ ರಚಿಸಿದ ಮಹಾಕಾವ್ಯ ಎನಿಸಿದೆ. ಕನ್ನಡ ಸಾಹಿತ್ಯ ಅಕಾಡೆಮಿಯ ಗೌರವಕ್ಕೆ ಪಾತ್ರವಾಗಿದೆ. ರಾಜ್ಯ ಸರ್ಕಾರದ ದೇವರಾಜ ಬಹದ್ದೂರ್ ಬಹುಮಾನ,

ಮಂಡ್ಯದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಇವರಿಗೆ ಸಂದಿದೆ.

"ಜಯದೇವಿತಾಯಿ ಲಿಗಾಡೆ" ೧೯೭೨ರಲ್ಲಿ ಅವರಿಗೆ ಅರ್ಪಿಸಿದ ಸಂಭಾವನಾ ಗ್ರಂಥವಾಗಿದೆ. ಕನ್ನಡದ ಕಾರ್ಯಕರ್ತೆ, ಗಡಿನಾಡಿನ ಹೋರಾಟಗಾರ್ತಿಯಾಗಿ ಸಮಾಜ ಸೇವಕಿಯಾಗಿ ಮರೆಯಲಾಗದ ಹೆಸರಾಗಿ ಉಳಿದಿದ್ದಾರೆ.



ಜಯಲಕ್ಷ್ಮಮ್ಮ ಸಿ.ಆರ್.

ಸಮಾಜ ಸೇವೆಯನ್ನೇ ಜೀವನದ ಧ್ಯೇಯವನ್ನಾಗಿರಿಸಿಕೊಂಡ ಜಯಲಕ್ಷ್ಮಮ್ಮ ನವರು ಹಾಸನದಲ್ಲಿ ಜನಿಸಿ ಬೆಂಗಳೂರಿನ ನಿವಾಸಿಗಳಾಗಿದ್ದಾರೆ. ದೀನ ದಲಿತರ ಸೇವೆಯೊಂದಿಗೆ ಸಾಹಿತ್ಯ ಸೇವಕರೂ ಆಗಿದ್ದಾರೆ. ಪತ್ರಿಕಾ ಲೇಖನಗಳಿಂದ, ಆಕಾಶವಾಣಿಯ ಭಾಷಣಗಳಿಂದ ಕನ್ನಡ ನಾಡಿನಲ್ಲಿ ಸುಪರಿಚಿತರಾಗಿದ್ದಾರೆ.

ಪ್ರಕಟಿತ ಕೃತಿ :

“ಬದರಿಯಾತ್ರೆ”–೧೯೫೭

ಅನೇಕ ವಿದ್ಯಾಸಂಸ್ಥೆ, ಸಂಗೀತ ಸಾಹಿತ್ಯ - ಸಮಾಜ ಸೇವೆಯ ಸಂಸ್ಥೆಗಳಲ್ಲಿ ಪದಾಧಿಕಾರಿ ಹಾಗೂ ಸದಸ್ಯರಾಗಿ ಶ್ರಮಿಸುತ್ತಿದ್ದಾರೆ. ಬೆಂಗಳೂರಿನ ಉಪಮೇಯರ್ ಆಗಿದ್ದರು.

೧೯೭೩ರಲ್ಲಿ ಸಮಾಜಸೇವೆಗಾಗಿ ಇವರಿಗೆ ರಾಜ್ಯಪ್ರಶಸ್ತಿ ದೊರೆತಿದೆ.



ಜಯಲಕ್ಷ್ಮಿ ಈಚನೂರು

ಈಚನೂರು ಜಯಲಕ್ಷ್ಮಿಯವರ ಜನ್ಮಸ್ಥಳ. ಈಚನೂರು ಸೋದರಿಯರಲ್ಲಿ ಒಬ್ಬರು. ಬಿ.ಎ. ಪದವೀಧರೆಯಾಗಿ ಗೃಹಕಾರ್ಯ ನಿರ್ವಹಿಸುತ್ತಿದ್ದಾರೆ. ನಾಡಿನ ಅನೇಕ ಪತ್ರಿಕೆಗಳಲ್ಲಿ ಇವರ ಕತೆ, ನಾಟಕ, ರೂಪಕ, ಕವನ, ಧಾರಾವಾಹಿ ಕಾದಂಬರಿಗಳು ಪ್ರಕಟವಾಗಿವೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿಗಳು :

೧ ಪ್ರೇಮಬಂಧನ
೨ ಹಿಮದ ಬೊಂಬೆ
೩ ಮೋಡದ ಮನೆ
೪ ಆಗಂತುಕರು
೫ ಕಡಲಿನ ಒಡಲು
೬ ಅಂತರ್ಗೀತ
೭ ಅಗ್ನಿರೇಖೆ
೮ ಕನಸುಗಳು
೯ ನಾಂದಿ
೧೦ ಸ್ವಪ್ನಸೌಧ
೧೧ ಅಸಹಾಯಕರು
೧೨ ಮಾನಸ ರಾಗ
೧೩ ಚೈತ್ರದ ಹಾಡು
೧೪ ದಡ ಬಿಟ್ಟ ದೋಣಿ

ಕಥಾ ಸಂಕಲನ :

೧೫ ನಂಬಿಕೆ
೧೬ ಒಳಗೂ ಹೊರಗೂ
೧೭ ತೆರೆ ಒಮ್ಮೊಮ್ಮೆ
೧೮ ಅಂತರಾಳದೊಳಗೊಂದು ಕಿರುದನಿ
೧೯ ಆವರಣ
೨೦ ಬೊಂಬೆಯಾಟ

ಸಂಗೀತ, ಹೊಲಿಗೆಗಳಲ್ಲಿ ಆಸಕ್ತಿಯನ್ನಿರಿಸಿಕೊಂಡಿದ್ದಾರೆ.



ಜಯಲಕ್ಷ್ಮಿ ಶ್ರೀನಿವಾಸನ್

"ಸರೋಜ" ಕಾವ್ಯ ನಾಮಾಂಕಿತ ಜಯಲಕ್ಷ್ಮಿಯವರು ಎಪ್ಪತ್ತರ ದಶಕದಲ್ಲಿ ಇವರು ಹಿರಿಯ ಲೇಖಕಿಯಾಗಿದ್ದಾರೆ. ಪ್ರೌಢ ವಿದ್ಯಾಭ್ಯಾಸ ಮಾಡಿ ಗೃಹಕಾರ್ಯದಲ್ಲಿ ನಿರತರಾಗಿದ್ದಾರೆ. ಸಾಹಿತ್ಯದ ಒಲವು ಬೆಳೆಸಿಕೊಂಡು ಅನೇಕ ಕತೆ ಕಾದಂಬರಿಗಳನ್ನು ರಚಿಸಿದ್ದಾರೆ. ಕನ್ನಡ, ಇಂಗ್ಲಿಷ್, ತಮಿಳು, ಹಿಂದಿ ಭಾಷೆಯಲ್ಲಿ ಪರಿಣಿತರಾಗಿದ್ದಾರೆ. ತಮಿಳುನಾಡಿನಲ್ಲಿ "ವಿದ್ಯಾರತ್ನ" ಪ್ರಶಸ್ತಿ ವಿಜೇತೆ. ೧೯೮೧ರಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ವಿಜೇತೆ. ೧೯೬೫ರಲ್ಲಿ ಅಖಿಲ ಭಾರತ ಲೇಖಕಿಯರ ಸಮ್ಮೇಳನದಲ್ಲಿ ಭಾಗವಹಿಸಿ ಗೌರವ ಗಳಿಸಿದ್ದಾರೆ. ಎರಡು ಸಲ ವಿದೇಶ ಯಾತ್ರೆ ಮಾಡಿ ಬಂದಿದ್ದಾರೆ.

ಪ್ರಕಟಿತ ಕೃತಿಗಳು :

೧ ಸರೋಜ ನಳಿನಿ (ಜೀವನ ಚರಿತ್ರೆ) - ೧೯೩೮
೨ ಮೊಗ್ಗು (ಸಣ್ಣ ಕತೆಗಳ ಸಂಕಲನ)
೩ ಪರಿಣಯ (ಕಾದಂಬರಿ) - ೧೯೫೨
೪ ವೈಭವದ ಮನೆ (ಗೃಹವಿಜ್ಞಾನ) - ೧೯೮೫
೫ ವಿತಾಯಿ (ಮಕ್ಕಳ ಕಥೆಗಳು) - ೧೯೮೪



ಜಯಲಕ್ಷ್ಮೀದೇವಿ ಸಿ.ಎಸ್.

ಮೈಸೂರಿನಲ್ಲಿರುವ ಜಯಲಕ್ಷ್ಮೀದೇವಿಯವರು ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೃಷಿ ನಡೆಸಿದ್ದಾರೆ. ಗೃಹಕೃತ್ಯವೇ ಉದ್ಯೋಗ ಎಂದರೂ ಸಾಹಿತ್ಯ, ಸಂಸ್ಕೃತಿ, ಸಮಾಜಸೇವೆಗಳಲ್ಲಿ ಆಸಕ್ತಿಹೊಂದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಎಂ.ಎ. ಪದವೀಧರೆ. ಕನ್ನಡ ಜಾಣ, ಗಮಕಗಳಲ್ಲಿ ಪರಿಣತಿ, ಕರ್ನಾಟಕ ಸಂಗೀತದಲ್ಲಿ ಪರಿಶ್ರಮ ಅವರ ಅಭಿರುಚಿಗೆ ಸಾಕ್ಷಿಯಾಗಿದೆ.

ಪ್ರಕಟಿತ ಕೃತಿಗಳು :

೧ ಅನಾಮಿಕಾ ಮತ್ತು ಇತರ ಕತೆಗಳು (ಸಣ್ಣಕತೆಗಳ ಸಂಕಲನ) - ೧೯೫೮
೨ ಮಕ್ಕಳ ಮೂರು ನಾಟಕಗಳು (ಮಕ್ಕಳ ಸಾಹಿತ್ಯ) - ೧೯೬೬
೩ ಗ್ರಾಮಲೀಲೆ (ಗ್ರಾಮಜೀವನದ ಸಾಮಾಜಿಕ ಕಾದಂಬರಿ) - ೧೯೭೦
೪ ರಾಜಾರಾಂ ಮೋಹನರಾಯ್ (ಜೀವನ ಚರಿತ್ರೆ) - ೧೯೭೨
೫ ಶಪ್ತವಾಸಿ (ಐತಿಹಾಸಿಕ ಕಾದಂಬರಿ) - ೧೯೭೪
೬ ದಶರಥ (ಪೌರಾಣಿಕ ನಾಟಕ) - ೧೯೭೫
೭ ಸ್ನೇಹ ಸಾಮ್ರಾಜ್ಯ (ಮಕ್ಕಳ ನಾಟಕ) - ೧೯೭೯
೮ ಗಂಗರಸ ದುರ್ವಿನೀತ (ಐತಿಹಾಸಿಕ ಕಾದಂಬರಿ) - ೧೯೮೦
೯ ಜನಪ್ರಿಯ ಜೈಮಿನಿ ಭಾರತ (ವಚನ ರೂಪ - ೧೯೮೦
೧೦ ಮಹಾಭಾರತದಲ್ಲಿ ಪ್ರಾಣಿಗಳು, ಭಾಗ-೧ (ಮಕ್ಕಳ ಸಾಹಿತ್ಯ)–೧೯೮೧

೧೧ ಶುಭದೃಷ್ಟಿ (ಕಥಾ ಸಂಕಲನ) - ೧೯೬೨

೧೨ ಕೋಳೂರು ಕೊಡಗೂಸು (ಮಕ್ಕಳ ಸಾಹಿತ್ಯ)

"ಶುಭದೃಷ್ಟಿ" ಕಥಾ ಸಂಕಲನಕ್ಕೆ ೧೯೬೨ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರತಿದೆ.

"ಕೋಳೂರು ಕೊಡಗೂಸು" ಮಕ್ಕಳ ಸಾಹಿತ್ಯ ಸ್ಪರ್ಧೆಯಲ್ಲಿ ಕೇಂದ್ರ ಸರ್ಕಾರದ ಬಹುಮಾನ ಪಡೆದಿದೆ.

೧೯೮೧ರಲ್ಲಿ "ಗಂಗರಸ ದುರ್ವಿನೀತ" ಅಕಾಡಮಿ ಪ್ರಶಸ್ತಿ ಪಡೆದ ಐತಿಹಾಸಿಕ ಕಾದಂಬರಿಯಾಗಿದೆ.



ಜಯಶ್ರೀ ರಾಜಾರಾಂ

ಜಯಶ್ರೀ ರಾಜಾರಾಂ, ವಾಣಿ, ಆರ್ ಹೋಳ್ಕರ್ ಎಂಬ ಕಾವ್ಯನಾಮಗಳಿಂದ ಬರೆಯುವ ಇವರು ಮೂಲತಃ ಮೈಸೂರಿನವರು. ಇಂಟರ್ ಮೀಡಿಯಟ್, ಹಿಂದಿ ಪ್ರವೀಣರಾಗಿ ಸಂಗೀತ, ಸಾಹಿತ್ಯ, ಚಿತ್ರಕಲೆ, ಕೈಕೆಲಸ, ನೃತ್ಯದಲ್ಲಿ ಆಸಕ್ತರಾಗಿ ಅನೇಕ ವರ್ಷಗಳಿಂದ ಸಾಹಿತ್ಯೋಪಾಸಕರಾಗಿದ್ದಾರೆ.

. ಐವತ್ತರ ಹೊಸ್ತಿಲಲ್ಲಿರುವ ಜಯಶ್ರೀ ಅನೇಕ ಲೇಖನ. ಪ್ರಬಂಧ, ನಾಟಕಗಳನ್ನು ರಚಿಸಿದ್ದಾರೆ. ಭಾರತಾದ್ಯಂತವಲ್ಲದೆ ಅಮೆರಿಕಾ, ಯೂರೋಪ್, ಪ್ರವಾಸಗಳಿಂದ ಅನುಭವ ಗಳಿಸಿದ್ದಾರೆ. ತಮಿಳು, ತೆಲುಗು, ಮರಾಠಿ, ಹಿಂದೀ, ಇಂಗ್ಲಿಷ್ ಭಾಷೆಗಳನ್ನು ಬಲ್ಲವರು. ಇವರು ರಚಿಸಿದ "ಒಲವಿನ ಕರೆ" ಕಾದಂಬರಿಗೆ ೧೯೭೫-೭೬ರ ಸಾಲಿನ ಕೇಂದ್ರ ವಿದ್ಯಾ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಪ್ರಶಸ್ತಿ ದೊರಕಿದೆ. ಸವತಿ, ಲಲ್ಲೀ, ಕೋಲು ಕೋಲಣ್ಣ ಕಾದಂಬರಿಗಳು ಧಾರಾವಾಹಿಯಾಗಿ ಪ್ರಕಟಗೊಂಡಿವೆ.

ಇವರ ಪ್ರಕಟಿತ ಕೃತಿಗಳು :

೧ ಒಲವಿನ ಕರೆ (ಕಾದಂಬರಿ) - ೧೯೭೫
೨ ಪುಟ್ಟನ ಪ್ರಶ್ನೆಗೆ ಅಮ್ಮನ ಉತ್ತರ (ಬಾಲ ಸಾಹಿತ್ಯ) - ೧೯೭೯
೩. ಕಣ್ಣು ತೆರೆದಾಗ ,, - ೧೯೮೦



ಜಯಾ ಸೂರ್ಯನಾರಾಯಣಪ್ಪ

ಬರವಣಿಗೆ. ಕುಶಲಕಲೆ, ಅಧ್ಯಯನಗಳಲ್ಲಿ ಆಸಕ್ತರಾದ ಜಯಾ ಸೂರ್ಯನಾರಾಯಣಯಪ್ಪನವರು ಬೆಂಗಳೂರಿನವರು. ಎಸ್.ಎಸ್.ಎಲ್.ಸಿ. ಯವರೆಗೆ ಓದಿಕೊಂಡು ಗೃಹಿಣಿಯಾಗಿದ್ದಾರೆ. ಇದುವರೆಗೆ ನಾಡಿನ ಹಲವಾರು ಪತ್ರಿಕೆಗಳಲ್ಲಿ ಇವರ ಅನೇಕ ಲೇಖನ, ಕತೆ, ವಿಚಾರ ಪತ್ರ. ನಾಟಕ, ಹಾಸ್ಯ ಲೇಖನಗಳು ಪ್ರಕಟವಾಗಿವೆ.

ಪ್ರಕಟಿತ ಕೃತಿ :

"ಬದುಕು"(ಕಾದಂಬರಿ) - ೧೯೭೭

ಈ ಕೃತಿಯು ಅನಕೃ ಸ್ಮಾರಕ ಕಾದಂಬರಿ ಸ್ಪರ್ಧೆಯಲ್ಲಿ ಬಹುಮಾನ ಪಡೆದಿದೆ. ಇವರ ಇನ್ನೂ ಕೆಲವು ಬಿಡಿ ಕಥೆ – ನಾಟಕಗಳು ಬಹುಮಾನಗಳನ್ನು ಪಡೆದು ಕೊಂಡಿವೆ.



ಜ್ಯೋತಿದೇವಿ ಯು. ಶ್ರೀ

ತುಮಕೂರಿನಲ್ಲಿ ಜನಿಸಿದ ಜ್ಯೋತಿಯವರು ಕನ್ನಡ ಎಂ.ಎ. ಹಾಗೂ ಎಲ್.ಎಲ್.ಬಿ ಪದವೀಧರೆ, ಬೆಂಗಳೂರಿನ ಭಾಷಾಂತರ ನಿರ್ದೇಶನಾಲಯದಲ್ಲಿ ಕನ್ನಡ ಭಾಷಾಂತರಕಾರ್ತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ, ಆಕಾಶವಾಣಿಯ ಕವಿತಾ ಸ್ಪರ್ಧೆಯಲ್ಲಿ ಬಹುಮಾನ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾ ವರ್ಷದ "ಮಹಿಳೆ ಮತ್ತು ಕಲೆ" ಎಂಬ ಪುಸ್ತಕಕ್ಕೆ ಬಹುಮಾನ ಬಂದಿದೆ.

ಇವರ ಪ್ರಕಟಿತ ಕೃತಿಗಳು :

೧ ಮಹಿಳೆ ಮತ್ತು ಕಲೆ–೧೯೭೬

೨ ಬಂಕಿಮ ಚಂದ್ರ (ಆಂಗ್ಲ ಮೂಲದ ಅನುವಾದ)–೧೯೮೧

ಅನೇಕ ಲೇಖನ, ಕವನಗಳು ನಾಡಿನ ಪತ್ರಿಕೆಯಲ್ಲಿ ಪ್ರಕಟವಾಗಿವೆ ಹಾಗೂ ಆಕಾಶವಾಣಿಯಲ್ಲಿ ಬಿತ್ತರಗೊಂಡಿವೆ.



ತನುಜಾ

ತನುಜಾ ಜನಿಸಿದ್ದು ಹುಣಸೂರಿನಲ್ಲಿ ೧೯೫೦ನೆಯ ಇಸವಿಯಲ್ಲಿ. ಎಸ್.ಎಸ್.ಎಲ್.ಸಿ. ಯವರೆಗೆ ವಿದ್ಯಾಭ್ಯಾಸ. ಸದ್ಯದ ವಾಸ ಮೈಸೂರಿನಲ್ಲಿ.

ತನುಜಾ ಅವರಿಗೆ ಚಿಕ್ಕಂದಿನಿಂದ ಕಥೆ-ಕಾದಂಬರಿ ಓದುವ ದಾಹ-ಪರಿಣಾಮ ಬರೆಯಲು ಆರಂಭ. ಅನೇಕ ಕಾದಂಬರಿಗಳು ಈಗಾಗಲೇ ಹೊರಬಂದಿವೆ.

ಪ್ರಕಟಿತ ಕೃತಿಗಳು :

೧ ನೆರಳು ಸರಿದಾಗ (ಕಾದಂಬರಿ)
೨ ದಿಟ್ಟ ಹೆಜ್ಜೆ ,,
೩ ಸರಿದ ತೆರೆ ,,
೪ ಒಲವಿನ ಆಸರೆ ,,
೫ ಆತ್ಮಾನುಬಂಧ ,,
೬ ಸಂಕಲನ ,,
೭ ಸಂದಿಗ್ಧ ,,
೮ ಅತೃಪ್ತ ,,
೯ ಹೆಣ್ಣು ಸಂಸಾರದ ಕಣ್ಣು ,,
೧೦ ಸ್ವರ್ಗ ಸೇರಿದ ರತ್ನ ,,
೧೧ ಮಮತೆಯ ಮರೀಚಿಕೆ ,,
೧೨ ಕನಲಿದ ಕುಸುಮ ,,



ತೇಜಸ್ವಿನೀ ನಿರಂಜನ

ಕಿರಿಯ ವಯಸ್ಸಿನಲ್ಲಿಯೇ ಹಿರಿಯ ಸಾಧನೆಯಲ್ಲಿ ನಿರತರಾಗಿದ್ದಾರೆ ತೇಜಸ್ವಿನಿಯವರು. ಮುಂಬಯಿ ವಿಶ್ವವಿದ್ಯಾನಿಲಯದ ಎಂ.ಎ. ಪದವೀಧರೆ, ಹೆಚ್ಚಿನ ವ್ಯಾಸಂಗದ ಸಲುವಾಗಿ ಈಗ ವಿದೇಶದಲ್ಲಿದ್ದಾರೆ.

ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ನಿರರ್ಗಳವಾಗಿ ಬರೆಯುತ್ತಿದ್ದಾರೆ. ಅನುವಾದ ಹಾಗೂ ಸ್ವತಂತ್ರ ಕೃತಿಗಳಿಂದ ಕನ್ನಡ ಸಾಹಿತಿ ಎನಿಸಿದ್ದಾರೆ, ಸಾಹಿತಿ ನಿರಂಜನ ಹಾಗೂ ಅನುಪಮಾ ನಿರಂಜನರವರ ಪುತ್ರಿಯಾಗಿದ್ದಾರೆ,

ಇವರ ಪ್ರಕಟಿತ ಕೃತಿಗಳು :

ಕನ್ನಡ ಕೃತಿಗಳು :

೧ ಮರಳಿ ಬರುವೆ (ಕವನ ಸಂಕಲನ)
(ಕವಿ ಪಾಬ್ಲೊ ನೆರೂದನ ಕತೆಗಳ ಅನುವಾದ)

೨ ಜೂಲಿಯಸ್ - ಸೀಸರ್ (ನಾಟಕ)

ಆಂಗ್ಲ ಕೃತಿಗಳು

೧ Liquid Saphire(Poems) ಸ್ವಂತ ಕೃತಿ

೨ The Stars Shine Brightly
(ನಿರಂಜನರ "ಚಿರಸ್ಮರಣೆ" ಅನುವಾದ)

೩ Wait for the Moon
(ನಿರಂಜನರ "ವಿಮೋಚನೆ" ಅನುವಾದ)

೪ Burnt Smoke & Wood Ash
(poems) ಸ್ವಂತ ಕೃತಿ



ದಾಕ್ಷಾಯಿಣಿ ಹಿರೇಮಠ

ಧಾರವಾಡದಲ್ಲಿರುವ ದಾಕ್ಷಾಯಿಣಿಯವರು ಸಾಹಿತ್ಯದಲ್ಲಿ ಆಸಕ್ತಿ ಹೊಂದಿದ್ದಾರೆ. ಇವರು ಅನೇಕ ಲೇಖನ, ಕವಿತೆ ಮತ್ತು ಕತೆಗಳನ್ನು ಬರೆದಿದ್ದಾರೆ, ಅನೇಕ ಪತ್ರಿಕೆಗಳಲ್ಲಿ ಆವು ಪ್ರಕಟವಾಗಿವೆ.

ಇವರ ಪ್ರಕಟಿತ ಕೃತಿ :

ಸಂಗೀತ (ಕಾದಂಬರಿ)



"ಧಾರಿಣಿ"
(ಶಾಂತಮ್ಮ ಎಸ್.ಪಿ.)

"ಧಾರಿಣಿ", "ಶಾಂತಾ ಶಶಿಕಿರಣ" ಎಂಬ ಕಾವ್ಯನಾಮದಲ್ಲಿ ಎಸ್. ಪಿ. ಶಾಂತಮ್ಮನವರು ಬರೆಯುತ್ತಿದ್ದಾರೆ. ಶಿವಮೊಗ್ಗದಲ್ಲಿ ಜನಿಸಿದ ಇವರು ಬೆಂಗಳೂರಿನ ನಿವಾಸಿಯಾಗಿದ್ದಾರೆ. ಐವತ್ತರ ದಶಕದಲ್ಲಿರುವ ಇವರು ಪೌರಾಣಿಕ ಹಾಗೂ ಭಕ್ತಿ ಪಂಥದ ಜೈನ ಸಾಹಿತ್ಯವನ್ನು ರಚಿಸಿದ್ದಾರೆ. ೧೯೮೧ರ ಮಹಿಳಾ ವರ್ಷದ ಪ್ರಶಸ್ತಿ (ಕನ್ನಡ ಸಾಹಿತ್ಯ ಪರಿಷತ್ತಿನಿಂದ) "ಶಕ್ತಿಶ್ರೀ" ಪುಸ ಕಕ್ಕೆ ದೊರೆತಿದೆ.

ಪ್ರಕಟಿತ ಕೃತಿಗಳು :

ಪೌರಾಣಿಕ ಕಾದಂಬರಿಗಳು ;

೧ ಅಂಜನಾ-೧೯೭೨
೨ ಚಂದನಾದೇವಿ-೧೯೭೫
೩ ಭವದತ್ತಾ-೧೯೭೫
೪ ಶಕ್ತಿಶ್ರೀ-೧೯೮೧

ಕಿರುಗತೆ, ಲಲಿತ ಪ್ರಬಂಧಗಳು, ಕವನಗಳು ಅನೇಕ ಕನ್ನಡ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ.



ದೇವಕಿ ಮೂರ್ತಿ

ಮೈಸೂರಿನಲ್ಲಿ ಜನಿಸಿದ ದೇವಕಿ ಮೂರ್ತಿಯವರು ಕರ್ನಾಟಕ ವಿಶ್ವವಿದ್ಯಾನಿಲಯದ ಬಿ.ಎ. ಪದವೀಧರೆ. ಹಿಂದಿ ಪ್ರವೇಶಿಕಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಕತೆ, ಹರಟೆ, ಕಾದಂಬರಿಗಳನ್ನು ಬರೆದಿದ್ದಾರೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿಗಳು :

೧ ಉಪಾಸನೆ-೧೯೭೩
೨ ಬಳ್ಳಿ ಚಿಗುರಿತು-೧೯೭೪
೩ ಶಿಶಿರ ವಸಂತ-೧೯೭೫
೪ ಎರಡು ದಾರಿ-೧೯೭೬
೫ ಚಂಡ ಮಾರುತ-೧೯೭೮
೬ ಸೆರೆ-೧೯೮೧
೭ ಒಡಕುದೋಣಿ-೧೯೮೨

"ಉಪಾಸನೆ" ಕಾದಂಬರಿ ಕನ್ನಡ ಚಲನಚಿತ್ರವಾಗಿ ಮೆಚ್ಚುಗೆ ಪಡೆದಿದೆ. ಪುಸ್ತಕ ಅನೇಕ ಮುದ್ರಣಗಳನ್ನು ಕಂಡಿದೆ.

೧೯೮೦ರಲ್ಲಿ 'ವನಿತಾ' ಮಾಸಪತ್ರಿಕೆ ಏರ್ಪಡಿಸಿದ ದೀಪಾವಳಿ ಕಾದಂಬರಿ ಸ್ಪರ್ಧೆಯಲ್ಲಿ "ಒಡಕು ದೋಣಿ" ಕಾದಂಬರಿಗೆ ಪ್ರಥಮ ಬಹುಮಾನ ದೊರೆತಿದೆ.

ಕರ್ನಾಟಕ ಸಂಗೀತ ಹಾಗೂ ಪಿಟೀಲು ವಾದನಗಳಲ್ಲಿ ಅಭಿರುಚಿ ಬೆಳೆಸಿ ಕೊಂಡಿದ್ದಾರೆ. ಟೇಲರಿಂಗ್ ಅವರ ಹವ್ಯಾಸವಾಗಿದೆ.



ನರ್ಮದಾ ಬಿ. ಕೆ.

ಬೆಂಗಳೂರಿನ ನರ್ಮದಾರವರು ಎಂ. ಎ. ಪದವೀಧರೆ, ಹಿಂದಿ ರಾಷ್ಟ್ರಭಾಷಾ ವಿಶಾರದೆ. ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ,

ಇವರ ಪ್ರಕಟಿತ ಕೃತಿಗಳು :

೧ ಪುಟ್ಟ ಗುಲಾಬಿ (ಶಿಶು ಸಾಹಿತ್ಯ)—೧೯೭೪
೨ ಸ್ವಾಮಿ ವಿವೇಕಾನಂದ (ಜೀವನ ಚರಿತ್ರೆ)—೧೯೭೩
೩ ಮೈತ್ರೇಯಿ (ಮಕ್ಕಳ ಸಾಹಿತ್ಯ)—೧೯೭೩
೪ ಸುಂದರ ಸ್ವಪ್ನ (ಪ್ರವಾಸ ಕಥನ)—೧೯೭೨
೫ ರಾಣಿ ದುರ್ಗಾವತಿ (ಐತಿಹಾಸಿಕ ಕಿರು ಕಾದಂಬರಿ)—೧೯೭೩

ಓದುಬರಹದೊಂದಿಗೆ ನಾಟಕ ಅಭಿನಯ, ಪ್ರದರ್ಶನದಲ್ಲಿ ಆಸಕ್ತಿ ಮತ್ತು ಸಂಗೀತದಲ್ಲಿ ಅಭಿರುಚಿಯಿದೆ.



ಡಾ॥ ನಳಿನಿ ಮೂರ್ತಿ

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ವೈಜ್ಞಾನಿಕ ಬರವಣಿಗೆ ಬಹಳ ಕಡಿಮೆ. ಅಂಥ ಒಂದು ಸವಾಲನ್ನು ಸ್ವೀಕರಿಸಿದ್ದಾರೆ. ವೈಜ್ಞಾನಿಕ ಕ್ಷೇತ್ರದಲ್ಲಿ ದುಡಿಯುತ್ತಿರುವ ಪ್ರತಿಭಾವಂತ ಮಹಿಳೆಯಾದ. ನಳಿನಿಯವರು ಪರದೇಶದಲ್ಲಿದ್ದರೂ ಕನ್ನಡದಲ್ಲಿ ಬರೆಯುತ್ತಾ ವೈಜ್ಞಾನಿಕ ವಿಷಯಗಳನ್ನು ಒಳಗೊಂಡ ಪುಸ್ತಕಗಳನ್ನು ರಚಿಸಿದ್ದಾರೆ.

ಬಿ.ಎಸ್.ಸಿ. ಯಲ್ಲಿ ಪ್ರಥಮ ರ್‍ಯಾಂಕ್ ಚಿನ್ನದ ಪದಕ ಹಾಗೂ ಎಲೆಕ್ಟ್ರಾನಿಕ್ ಕಮ್ಯುನಿಕೇಷನ್ ಡಿಪ್ಲೊಮಾ ಪಡೆದಿದ್ದಾರೆ. ಎಂ.ಎಸ್ಸಿ. (ಟೆಕ್) ಕಂಪ್ಯೂಟರ್ ಸೈನ್ಸ್‌ನಲ್ಲಿ ಪಿ.ಹೆಚ್.ಡಿ. ಗಳಿಸಿ ಡಾ॥ ನಳಿನಿಮೂರ್ತಿ ಎಂದೇ ಪರಿಚಿತರಾಗಿದ್ದಾರೆ.

ಜಾಂಬಿಯಾ ವಿಶ್ವವಿದ್ಯಾಲಯದಲ್ಲಿ ಗಣಿತ ವಿಜ್ಞಾನದ (ಕಂಪ್ಯೂಟರ್ ಸೈನ್ಸ್) ಅಧ್ಯಾಪಕಿಯಾಗಿ ಕೆಲಸ ಮಾಡಿ ಈಗ ಎಡ್‌ಮಂಟನ್ ಯೂನಿವರ್ಸಿಟಿಯಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದಾರೆ. ಪರದೇಶದಲ್ಲಿದ್ದರೂ ಕನ್ನಡವನ್ನು ಮರೆಯದೆ ರೂಢಿಸಿಕೊಂಡು ಬಂದಿರುವುದಕ್ಕೆ ಅವರ ಕನ್ನಡ ಸಾಹಿತ್ಯ ಸಂಘದ ಕೆಲಸ ಹಾಗೂ ಸಾಹಿತ್ಯ ಸೃಷ್ಟಿ ಸಾಕ್ಷಿಯಾಗಿದೆ. ನಾಡಿನ ನಿಯತಕಾಲಿಕೆಗಳಲ್ಲಿ ಕತೆ - ಧಾರಾವಾಹಿ ಹಾಗೂ ಲೇಖನಗಳನ್ನು ಬರೆಯುತ್ತಾರೆ.

ಇವರ ಪ್ರಕಟಿತ ಕೃತಿಗಳು :

೧ ಬಿಸಿಲು ಮಳೆ - ೧೯೭೭
೨ ಬೀಸಿ ಬಂದ ಬಿರುಗಾಳಿ - ೧೯೭೯
೩ ಗಣಕ ಯಂತ್ರ ಎಂದರೇನು ? (ವಿಜ್ಞಾನ) - ೧೯೮೦
೪ ಗಣಕದ ಕತೆ (ವಿಜ್ಞಾನ) - ೧೯೮೦
೫ ಬಂಗಾರದ ಜಿಂಕೆ (ಕಾದಂಬರಿ) - ೧೯೮೧



ನಾಗಮಣಿ ಎಸ್. ರಾವ್

ಬೆಂಗಳೂರು ಆಕಾಶವಾಣಿಯಲ್ಲಿ ವಾರ್ತಾ ವಿಭಾಗದ ಸಹಾಯಕ ಸಂಪಾದಕಿಯಾಗಿ ಕೆಲಸಮಾಡುತ್ತಿರುವ ನಾಗಮಣಿಯವರು ಪತ್ರಿಕೋದ್ಯಮದಲ್ಲಿ ಬಿ.ಎ. ಹಾಗೂ ಬಿ.ಎಲ್. ಪದವೀಧರೆ. ವಿದ್ಯಾರ್ಥಿದೆಸೆಯಿಂದಲೂ ಲೇಖನ, ಹರಟೆ. ಬರಹಗಳಲ್ಲಿ ಅಭಿರುಚಿ (ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಬಿ.ಎ. ಪ್ರಥಮ ಸ್ಥಾನ) 'ತಾಯಿನಾಡು' ಪತ್ರಿಕೆಯಲ್ಲಿ ಉಪಸಂಪಾದಕಿಯಾಗಿಯೂ ಕೆಲವು ಕಾಲ ಕೆಲಸ ಮಾಡಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಏಕಲವ್ಯ - ೧೯೭೪

೨ ಚಿಂತನಪಲ್ಲಿ ವೆಂಕಟರಾವ್ (ವ್ಯಕ್ತಿಚಿತ್ರಣ - ೧೯೭೮



ಡಾ|| ನಾಗರತ್ನ ಟಿ. ಎನ್.

ಮಧ್ಯಪ್ರದೇಶದಲ್ಲಿ ಜನಿಸಿದ ನಾಗರತ್ನರವರು ಮೂಲತಃ ಕನ್ನಡಿಗರು. ಎಂ.ಎ., ಪಿ.ಎಚ್.ಡಿ. ಅವರ ವಿದ್ಯಾರ್ಹತೆಗಳು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಶೋಧನ ಸಹಾಯಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿ ಜೀವನದಲ್ಲಿ ಪ್ರತಿಭಾವಂತ ವಿದ್ಯಾರ್ಥಿನಿಯಾಗಿ ಬಿ.ಎ., ಎಂ.ಎ.,ಗಳಲ್ಲಿ ಚಿನ್ನದ ಪದಕ ಹಾಗೂ ನಗದು ಬಹುಮಾನಗಳನ್ನು ಗಳಿಸಿದ್ದಾರೆ.

ಇವರ ಪ್ರಕಟಿತ ಕೃತಿ :

೧ ಗೋಪಾಲದಾಸರ ಕೃತಿಗಳು - ೧೯೭೭
೨ ವಾದಿರಾಜರ ಕೃತಿಗಳು - ೧೯೮೦
೩ ಹರಿದಾಸರ ಭಕ್ತಿ ಸ್ವರೂಪ

ಹರಿದಾಸ ಸಾಹಿತ್ಯದಲ್ಲಿ "ಹರಿದಾಸರ ಭಕ್ತಿ ಸ್ವರೂಪ" ಪ್ರಬಂಧ ಮೈಸೂರು ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪದವಿ ಗಳಿಸಲು ಬರೆದುದಾಗಿದೆ,

ಸಂಗೀತ, ನೃತ್ಯ, ನಾಟಕಗಳಲ್ಲಿ ಪರಿಶ್ರಮ ಹಾಗೂ ಆಸಕ್ತಿಯನ್ನು ಹೊಂದಿದ್ದಾರೆ. ಆಟಗಳಲ್ಲಿ ಅಭಿರುಚಿ ಬೆಳೆಸಿಕೊಂಡಿದ್ದಾರೆ.



ನಾಗಾಂಬಾಳ್ ಟಿ. ಜೆ.

ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ತಮಿಳು ಪ್ರಾಧ್ಯಾಪಕರಾಗಿ, ಜೊತೆಗೆ ಪ್ರಾಂಶುಪಾಲರಾಗಿ ನಿವೃತ್ತರಾದ ನಾಗಾಂಬಾಳ್ ಇವರು ಮುಖ್ಯವಾಗಿ ಭಾಷಾಂತರ ಗಾರ್ತಿ.

ತಮಿಳು ಭಾಷೆಯಲ್ಲಿ ಡಿಪ್ಲೊಮಾ, ಎಂ.ಎ. ಪದವೀಧರೆಯಾಗಿದ್ದಾರೆ. ಕನ್ನಡ ಸಾಹಿತ್ಯವನ್ನು ತಮಿಳು ಓದುಗರಿಗೆ ಪರಿಚಯಿಸಿದ್ದಾರೆ. ಇವರು ಭಾಷಾಂತರಿಸಿರುವ ಕನ್ನಡದ ಅನೇಕ ಕತೆ, ಲೇಖನಗಳು ತಮಿಳಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ.

ಇವರ ಪ್ರಕಟಿತ ಕೃತಿ :

"ಕನ್ನಗಿ" (ಸಣ್ಣ ಕಥಾ ಸಂಕಲನ)
—ಸ್ವತಂತ್ರ ಕೃತಿ

ಜೊತೆಗೆ ಮಣಿಮೇಖಲೆ. ಬಸವೇಶ್ವರ, ಅಕ್ಕಮಹಾದೇವಿ ಮುಂತಾದವರ ಜೀವನಚರಿತ್ರೆಗಳನ್ನು ತಮಿಳು ಭಾಷೆಗೆ ತರ್ಜುಮೆ ಮಾಡಿದ್ದಾರೆ.

ವೇದಾಂತದ ಅಭ್ಯಾಸ, ಬರವಣಿಗೆ, ಅನುವಾದ ಕಾರ್ಯ, ಭಾಷಣಗಳಲ್ಲಿ ಆಸಕ್ತಿಯುಳ್ಳ ನಾಗಾಂಬಾಳ್ ಅವರಿಗೆ ಸಮಾಜಸೇವೆಯಲ್ಲಿ ಆಸಕ್ತಿ. ಸದ್ಯಕ್ಕೆ ಗರ್ಲ್ಸ್ ಗೈಡ್ ಮತ್ತು ಸ್ಕೌಟ್ ಜಿಲ್ಲಾ ಕಮಿಷನ್ನರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ ತಮಿಳೇತರರಿಗೆ ತಮಿಳು ಭಾಷೆ ಕಲಿಸುವ ತರಗತಿಗಳನ್ನೂ ನಡೆಸುತ್ತಿದ್ದಾರೆ.



ನಿರ್ಮಲಾ

ತಿಪಟೂರು ನಿರ್ಮಲಾರವರ ಜನ್ಮಸ್ಥಳ. ಎಸ್.ಎಸ್.ಎಲ್.ಸಿ.ಯ ವರೆಗೆ ವಿದ್ಯಾಭ್ಯಾಸ ಮಾಡಿ ಗೃಹಿಣಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅನೇಕ ಕಾದಂಬರಿಗಳನ್ನು ಬರೆದಿದ್ದಾರೆ. ವಿಜಾಪುರದಲ್ಲಿ ನೆಲೆಸಿದ್ದಾರೆ.

ಪ್ರಕಟಿತ ಕೃತಿಗಳು :

೧ ಮಂಗಳದ ಮುಂಬೆಳಕು (ಕಾದಂಬರಿ) ೧೯೭೫

೨ ಪಾರ್ವತಿ ,, ೧೯೭೬



ನಿರುಪಮಾ

ಪದ್ಮಾ ರಾಮಚಂದ್ರರಾವ್ "ನಿರುಪಮಾ" ಕಾವ್ಯನಾಮದಲ್ಲಿ ಬರೆಯುತ್ತಿದ್ದಾರೆ. ತುಮಕೂರು ಜಿಲ್ಲೆಯ ಹೊಳವನಹಳ್ಳಿಯಲ್ಲಿ ಹುಟ್ಟಿದ ಇವರು ಬೆಂಗಳೂರು ನಿವಾಸಿಗಳಾಗಿದ್ದಾರೆ, ಗೃಹಿಣಿಯಾಗಿದ್ದಾರೆ. ಮದ್ರಾಸು ಸಂಗೀತ ಅಕಾಡಮಿಯ ವಿದ್ವತ್ (ಹಾಡುಗಾರಿಕೆ) ವೀಣೆ ಜೂನಿಯರ್ (ಮೈಸೂರು) ಹಾಗೂ ಕನ್ನಡ ಎಂ.ಎ. ಇವರ ವಿದ್ಯಾರ್ಹತೆಗಳು

ಕನ್ನಡ ಹಾಗೂ ತೆಲುಗಿನಲ್ಲಿ ಕೃತಿ ರಚನೆ ಮಾಡಿದ್ದಾರೆ. ಹಿಂದಿ, ತೆಲುಗಿನಿಂದ ಅನುವಾದ ಮಾಡಿದ್ದಾರೆ.

ಇವರ ಪ್ರಕಟಿತ ಪುಸ್ತಕಗಳು :

ಸ್ವಂತ ಕೃತಿಗಳು : ಕಾದಂಬರಿ : ಪರಿತ್ಯಕ್ತೆ, ಅಮೃತಕಲಶ, ಜೀವನ ಸ್ರವಂತಿ, ಮಿಡಿತ ಸಿಡಿತ, ರಾಗರಾಗಿಣಿ, ಭುವನ ವಿಜಯ.

ಕಥಾ ಸಂಕಲನ : ತುಂಗಭದ್ರೆಯ ಮಡಿಲಲ್ಲಿ, ನಾಳೆ, ಬಾವುಟ ಅತ್ತಿತು, ಆ ಹುಡುಗಿ.

ನಾಟಕಗಳು : ರಣಹದ್ದು, ಅಧಿಕಾರಿಗಳ ಅವಾಂತ್ರ.

ಮಕ್ಕಳ ಪುಸ್ತಕಗಳು : ಕಸ್ತೂರಿಬಾ, ವಿಶ್ವನಾಥ ಸತ್ಯನಾರಾಯಣ, ನಮ್ಮ ಬಾವುಟದ ಕಥೆ, ವಿಜಯ, ಸ್ವಾತಂತ್ರ್ಯ ಹೋರಾಟದ ಕಥೆ.

ಸಂಪಾದಿತ ಕೃತಿಗಳು : ಕರ್ನಾಟಕ ಕವಿಯತ್ರಿಯರು, ಮಹಾಭಾರತದಲ್ಲಿ ಮಹಿಳಾಪಾತ್ರಗಳು.

ಇತರ ಕೃತಿಗಳು : ಭಾರತೀಯ ನಾರಿ ನಡೆದು ಬಂದ ದಾರಿ ಮಹಿಳೆ ಮತ್ತು ವಿವಾಹ, ಕಾನೂನಿನ ಕಕ್ಷೆಯಲ್ಲಿ ರಕ್ಷೆ, ಆರೋಗ್ಯವೇ ಮಹಾ ಭಾಗ್ಯ, ಧರ್ಮ, ಮತ ಮತ್ತು ನಂಬಿಕೆ.

ಅನುವಾದಿತ ಕೃತಿಗಳು ಕನ್ನಡದಿಂದ ತೆಲುಗಿಗೆ (ಕಾದಂಬರಿ) : ಅಮೃತ ಕಲಶಂ, ಸುಡಿಗುಡಂ, ಸ್ತ್ರೀ ಮರಿಯು ವಿವಾಹಂ, ಪರಿತ್ಯಕ್ತ, ರಾಗರಾಗಿಣಿ.

ತೆಲುಗಿನಿಂದ ಕನ್ನಡಕ್ಕೆ : ಅಮುಕ್ತ ಮಾಲ್ಯದ, ಮನು ಚರಿತ್ರೆ, ಪಾಂಡುರಂಗ ಮಹಾತ್ಮೆ, ವಸು ಚರಿತ್ರೆ, ಪಾರಿಜಾತಾಪಹರಣ,ಮಹಾಭಾರತದ - ಒಂದು ಸಮೀಕ್ಷೆ (ಭಾಗಶಃ ಪ್ರಕಟವಾಗಿದೆ).

ಹಿಂದಿಗೆ ಅನುವಾದ : ಅಮೃತ ಕಲಶ, ಮಹಿಳೆ ಮತ್ತು ವಿವಾಹ, ಆ ಹುಡುಗಿ.

ತೆಲುಗು: ಸ್ವಂತ ಕೃತಿಗಳು : ವಿಜಯನಗರಂ ಕಾಲಂನಾಟಿ ತೆಲುಗು-ಕನ್ನಡ ಸಾಹಿತ್ಯ, ಆ ಅಮ್ಮಾಯಿ (ಕಥಾ ಸಂಕಲನ), ಯುಗಾಂತರಾಲ್ಲೂ ಮಾಪಾಳು ಯಶೋಧರುಡು, ತೆಲುಗು ಸಾಹಿತ್ಯ ಸಮೀಕ್ಷೆ (ವಿಮರ್ಶೆ), ಮಕ್ಕಳ ಸಾಹಿತ್ಯ (ವಿಶ್ಲೇಷಣೆ ವಿಮರ್ಶೆ), ಸಾಹಿತ್ಯ ಸವಿ (ವಿಮರ್ಶೆ).

೧೯೭೫ರ ಮಹಿಳಾ ವರ್ಷದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪುಸ್ತಕ ಸ್ಪರ್ಧೆಯಲ್ಲಿ "ಮಹಿಳೆ ಮತ್ತು ವಿವಾಹ" ಪುಸ್ತಕಕ್ಕೆ ಬಹುಮಾನ ಬಂದಿದೆ.

೧೯೭೭ರಲ್ಲಿ "ಭಾರತೀಯ ನಾರಿ ನಡೆದು ಬಂದ ದಾರಿ" ಪುಸ್ತಕಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಹುಮಾನ ದೊರತಿದೆ.

ಸಂಗೀತ, ಕಸೂತಿ, ಹೊಲಿಗೆ ಇವರ ಇತರ ಹವ್ಯಾಸಗಳು.



ನೀರಜಾಕ್ಷಿ ಕೆ.

ಬೊಂಬಾಯಿಯ ಕೇಂದ್ರೀಯ ವಿದ್ಯಾಲಯದಲ್ಲಿ ಚರಿತ್ರೆಯ ಅಧ್ಯಾಪಕಿಯಾಗಿ ದ್ದಾರೆ ನೀರಜಾಕ್ಷಿಯವರು. ಇವರ ಜನ್ಮಸ್ಥಳ ಬೆಂಗಳೂರು. ೩೭ವರ್ಷ ವಯಸ್ಸಿನ ಇವರು ಅರ್ಥಶಾಸ್ತ್ರ, ಚರಿತ್ರೆ ಎರಡೂ ವಿಷಯಗಳಲ್ಲಿ ಎಂ.ಎ. ಪದವಿ ಪಡೆದು ಕೊಂಡಿದ್ದು ಕನ್ನಡದಲ್ಲಿ 'ಸಾಹಿತ್ಯರತ್ನ' ದೊಂದಿಗೆ ಬಿ.ಎಡ್. ತರಬೇತಿಯನ್ನೂ ಮುಗಿಸಿಕೊಂಡಿದ್ದಾರೆ. ನೃತ್ಯ, ನಾಟಕಗಳಲ್ಲಿ ಆಸಕ್ತರಾಗಿದ್ದು ಇವರು ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿಯೋಜಿಸಿದ್ದಾರೆ. ತೆಲುಗು, ತಮಿಳು, ಹಿಂದಿ ಕಾದಂಬರಿಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ.

ಪ್ರಕಟಿತ ಕೃತಿಗಳು :

೧ ಪರಿಸರ (ಕಾದಂಬರಿ) - ೧೯೭೯

೨ ಜೀವನದ ಸುಳಿಯಲ್ಲಿ ,, -೧೯೮೧



ನೀಲಗಂಗಾ ಚರಂತಿಮಠ

ಬೆಳಗಾವಿ ಜಿಲ್ಲೆಯ ಸಂಕೇಶ್ವರದಲ್ಲಿ ಜನಿಸಿದ ಈ ಲೇಖಕಿಗೆ ಸಾಹಿತ್ಯ, ಸಂಗೀತದ ಅಭಿರುಚಿ ಇದೆ. ಪದವೀಧರೆಯಾದ ಇವರು ಬೆಳಗಾವಿಯ ಸರಕಾರಿ ಸರದಾರರ ಸಂಯುಕ್ತ ಕಿರಿಯ ಮಹಾವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರಕಟಿತ ಕೃತಿಗಳು :

೧ ದೇವ ಮಂದಿರ (ಕಥಾ ಸಂಕಲನ)—೧೯೭೯

೨ ಆತ್ಮ ಯಾವ ಕುಲ ಜೀವ ಯಾವ ಕುಲ (ಕಾದಂಬರಿ)—೧೯೮೦

೩ ಮನೆ ಮಡದಿ ಮಕ್ಕಳು (ನವ ಸಾಕ್ಷರರಿಗಾಗಿ)—೧೯೭೯

೪ ಗೀತ ಬಸವ (ಕವನ ಸಂಕಲನ)—೧೯೮೧

೧೯೭೮-೭೯ರಲ್ಲಿ ಭಾರತ ಸರ್ಕಾರದವರು ಏರ್ಪಡಿಸಿದ ನವ ಸಾಕ್ಷರರಿಗಾಗಿ ಹಸ್ತಪ್ರತಿ ಸ್ಪರ್ಧೆಯಲ್ಲಿ ಬಹುಮಾನ ರೂಪವಾಗಿ ಇವರ 'ಮನೆ ಮಡದಿ ಮಕ್ಕಳು' ಹಾಗೂ 'ಧೂಮಪಾನ ಮದ್ಯಪಾನ' ಎಂಬ ಪುಸ್ತಕಗಳೂ ಪ್ರಕಟಣೆಯಾಗಿವೆ.

"ಆತ್ಮ ಯಾವ ಕುಲ ಜೀವ ಯಾವ ಕುಲ" ಕರ್ನಾಟಕ ವಿದ್ಯಾವರ್ಧಕ ಸಂಘದ ೧೯೮೧ನೇ ಸಾಲಿನ ಬಹುಮಾನ ಪಡೆದಿದೆ.

ಶಾಸ್ತ್ರೀಯ ಸಂಗೀತ, ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆ,ತತ್ವಜ್ಞಾನ, ಮನಶಾಸ್ತ್ರ ವೈದ್ಯಕೀಯ ಪುಸ್ತಕಗಳನ್ನು ಓದುವ ಅಭಿರುಚಿ ಇವರಿಗಿದೆ.



ನೀಲಮ್ಮ ಕತ್ನಳ್ಳಿ

ಗುಲ್ಬರ್ಗಾ ಜಿಲ್ಲೆಯ ಷಹಾಬಾದ್ ಮರಗೋಳ ಕಾಲೇಜಿನಲ್ಲಿ ಕನ್ನಡದ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ೧೯೫೦ನೆಯ ಇಸವಿಯಲ್ಲಿ ಬಿಜಾಪುರದ ಮಸಬಿನಾಳದಲ್ಲಿ ಜನಿಸಿದ ಇವರು ಕನ್ನಡ ಎಂ.ಎ. ಪದವೀಧರೆ. ವಿದ್ಯಾರ್ಥಿ ಜೀವನದ ದಿನಗಳಿಂದಲೇ ಇವರು ಕತೆ, ಪ್ರಬಂಧ, ಜೀವನಚರಿತ್ರೆಗಳನ್ನು ಬರೆಯಲು ಪ್ರಾರಂಭಿಸಿದರು.

ಇವರ ಪ್ರಕಟಿತ ಕೃತಿ :

"ಮಹಿಳೆ ಮತ್ತು ಮದುವೆ"—೧೯೭೫

ಇವರು ಸಮಾಜ ಸೇವಕಿಯೂ ಹೌದು.



ಡಾ|| ನೀಲಮ್ಮ ಮುತ್ತಣ್ಣ

'ಯೋಗಿನಿ' ಎಂಬ ಕಾವ್ಯನಾಮದಿಂದ ಕಥಾರಚನೆಯಲ್ಲಿ ತೊಡಗಿರುವ ಡಾ॥ ಮುಕ್ಕಾವಿರ (ಕುಂಜೇರಿ) ನೀಲಮ್ಮ ಮುತ್ತಣ್ಣ ವೃತ್ತಿಯಲ್ಲಿ ಹೋಮಿಯೋಪತಿ ವೈದ್ಯೆ. ಡಿಪ್ಲೊಮಾದೊಂದಿಗೆ ಹಿಂದೀ ವಿಶಾರದೆಯೂ ಆಗಿದ್ದಾರೆ.

ನೀಲಮ್ಮ ನಾಡಿನ ಪತ್ರಿಕೆಗಳಲ್ಲಿ ಕಥೆಗಳನ್ನು ಪ್ರಕಟಿಸಿರುವುದಲ್ಲದೆ, ಮೂರು ಕಥಾ ಸಂಗ್ರಹಗಳನ್ನೂ ಹೊರತಂದಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಅಂಕುರ (ಕಥಾ ಸಂಗ್ರಹ) - ೧೯೫೬
೨ ಮಸಣದ ಕೂಗು ,, - ೧೯೫೭
೩ ಕವಿ ಮುಗುಳು ,, - ೧೯೫೮



ನೀಳಾದೇವಿ

ಬೆಂಗಳೂರಿನಲ್ಲಿರುವ ನೀಳಾದೇವಿಯವರು ಕಳೆದೆರಡು ದಶಕಗಳಿಂದ ತಮ್ಮದೇ ಆದ ಹಲವಾರು ಕೊಡುಗೆಗಳಿಂದ ಸಾಹಿತ್ಯ ಸೇವೆ ನಡೆಸಿಕೊಂಡು ಬಂದಿದ್ದಾರೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿಗಳು :

೧ ಬೇಡಿ ಬಂದವಳು - ೧೯೫೯
೨ ಅನುರಾಧ - ೧೯೬೧
೩ ಒಲವಿನ ಜಾಲ - ೧೯೬೧
೪ ಹುಲ್ಲು ಹಸಿರಾಯಿತು - ೧೯೬೩
೫ ಕಣ್ಣಾಮುಚ್ಚಾಲೆ - ೧೯೬೫
೬ ಜೀವನ ಹೆಜ್ಜೆ - ೧೯೬೭
೭ ಕಾಗದದ ಚೂರು - ೧೯೬೭
೮ ದುಂಬಿ ತೊರೆಯಾಸೆ - ೧೯೭೦
೯ ಅಂತಃಸರಿತೆ - ೧೯೭೩
೧೦ ಪ್ಲಾಟ್‌ಫಾರಂ ಮೇಲೆ ಒಂದು ರಾತ್ರಿ - ೧೯೭೫
೧೧ ಮೂಕರಾಗ - ೧೯೭೫
೧೨ ಅಂತರ - ೧೯೭೫
೧೩ ರೂಪದಾಹ (ಕಥಾ ಸಂಗ್ರಹ) - ೧೯೬೨
೧೪ ಅಲೆಯ ಆಟ ,, - ೧೯೭೩
೧೫ ಮಾಣಿಕ್ಯ ,, - ೧೯೭೯

ಅನೇಕ ಸಣ್ಣಕತೆ, ಲೇಖನಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.

ಇಂಟರ್‌ಮೀಡಿಯಟ್‌ವರೆಗೆ ವಿದ್ಯಾಭ್ಯಾಸ ನಡೆಸಿ, ಚಿತ್ರಕಲೆಯ ಕೆಲವು ಪರೀಕ್ಷೆಗಳನ್ನೂ ಪಾಸು ಮಾಡಿದ್ದಾರೆ. ಚಿತ್ರಕಲೆ, ಪ್ರವಾಸ, ಅಂಗವಿಕಲರ ಏಳಿಗೆಯ ಬಗ್ಗೆ ಆಸಕ್ತಿ ಮತ್ತು ಕಳಕಳಿ ಹೊಂದಿದ್ದಾರೆ. ಇವರು ವಿದೇಶ ಪ್ರವಾಸವನ್ನೂ ಮುಗಿಸಿಕೊಂಡು ಬಂದಿದ್ದಾರೆ. ಈ ಪ್ರವಾಸದ ಅನುಭವವೂ ಧಾರಾವಾಹಿಯಾಗಿ ವಾರಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ.



ಪಂಕಜಾ ಎ.

ಪಂಕಜಾರವರ ಮಾತೃಭಾಷೆ ತಮಿಳು. ಜನಿಸಿದ್ದು ತೆಲುಗುನಾಡಿನಲ್ಲಿ (ಪಾವಗಡ) ಮತ್ತು ಕನ್ನಡಿಗನ ಕೈಹಿಡಿದು ಬಾಳುವೆ ನಡೆಸುತ್ತಿರುವುದು ಕರ್ನಾಟಕ ದಲ್ಲಿ. ಸಾಹಿತ್ಯ ರಚನೆಯ ಮಾಧ್ಯಮವೂ ಕನ್ನಡವೇ. ಇಂಟರ್‌ಮೀಡಿಯಟ್ ಹಾಗೂ ಹಿಂದೀ ವಿದ್ವಾನ್ ಇವರ ವಿದ್ಯಾರ್ಹತೆಗಳು.

ಬೇರೆ ಮಾತೃಭಾಷೆಯವರು ಕನ್ನಡದಲ್ಲಿ ಕೃತಿ ರಚಿಸಿದುದಕ್ಕಾಗಿ ಇಟ್ಟಿರುವ ಕೇಂದ್ರ ಸರ್ಕಾರದ ಬಹುಮಾನ ಇವರ 'ಸೊಗಸುಗಾತಿ' ಹಾಗೂ 'ಕಾಗದದ ದೋಣಿ' ಪುಸ್ತಕಗಳಿಗೆ ಲಭ್ಯವಾಗಿದೆ (೧೯೭೧). ಇವರ ಅನೇಕ ಕಾದಂಬರಿಗಳು ಮರುಮುದ್ರಣ ಕಂಡಿವೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿ :

೧ ನಾದಭಂಗ - ೧೯೬೩-೮೧
೨ ವಿಜಯಗೀತ ೧೯೬೭-೭೯
೩ ಬಂಗಾರದ ಬಲೆ - ೧೯೬೯-೭೯
೪ ಸುಖಸ್ವಪ್ನ - ೧೯೭೦
೫ ರಾಗಸುಧಾ - ೧೯೭೧-೮೧
೬ ಅನುರಾಗ ಬಂಧನ - ೧೯೭೨
೭ ಹೊಸ ಹಾದಿಯಲ್ಲಿ- ೧೯೭೩
೮ ಪ್ರೇಮ ಸಂಗಮ - ೧೯೭೩
೯ ಬಯಕೆಯ ಬೆಂಕಿ ೧೯೭೪

೧೦ ಅವನೇ ಕಾರಣ - ೧೯೭೭
೧೧ ಸ್ನೇಹ ಸಂಬಂಧ ೧೯೭೬
೧೨ ನೋವು - ನಲಿವು - ೧೯೭೭
೧೩ ಜೀವನ ಜಾಲ - ೧೯೭೮
೧೪ ಬಲಿಪಶು - ೧೯೮೧
೧೫ ಸೊಗಸುಗಾತಿ - ೧೯೬೮-೭೬
೧೬ ಕಾಗದದ ದೋಣಿ - ೧೯೭೦
೧೭ ಮಮತೆಯ ಮಡಿಲಲ್ಲಿ - ೧೯೮೧

ಜೀವನ ಚರಿತ್ರೆ :

೧೮ ಮಹಾಪುರುಷ - ೧೯೭೮

ಪತ್ತೆದಾರಿ :

೧೯ ನೀನಾ - ೧೯೮೦

ನಾಟಕ ;

೨೦ ಊರ್ಮಿಳಾ - ೧೯೮೧

ವಿಚಾರ ಸಾಹಿತ್ಯ :

೨೧ ಮದುವೆ ಮತ್ತು ಸ್ತ್ರೀ - ೧೯೭೭

ಮಹಿಳಾ ಕೋ ಆಪರೇಟಿವ್ ಬ್ಯಾಂಕಿನ ಸ್ಥಾಪಕ ಹಾಗೂ ಪ್ರಥಮ ಅಧ್ಯಕ್ಷಿಣಿಯಾಗಿದ್ದರು. ಜೊತೆಗೆ ಅನೇಕ ಸಂಘ-ಸಂಸ್ಥೆಗಳ ಪದಾಧಿಕಾರಿ, ಹಿಂದೀ ಶಿಕ್ಷಣ ಸಂಸ್ಥೆಯೊಂದರ ಅಧ್ಯಕ್ಷಿಣಿಯಾಗಿ ಸಮಾಜಸೇವೆಯಲ್ಲಿ ನಿರತರಾಗಿದ್ದಾರೆ.



ಪಂಕಜಾ ಎನ್.

ಬೆಂಗಳೂರಿನಲ್ಲಿ ಜನಿಸಿ ಅಲ್ಲಿಯೇ ನೆಲಸಿರುವ ಪಂಕಜಾರವರು ಅನೇ
ಕಾದಂಬರಿ, ಸಣ್ಣಕತೆ, ಹಾಸ್ಯ, ಹರಟೆಗಳನ್ನು ಬರೆದು ಸಾಹಿತ್ಯಲೋಕಕ್ಕೆ ಪರಿಚಿ
ರಾಗಿದ್ದಾರೆ. ಇಂಗ್ಲಿಷ್ ಅನುವಾದ, ಮಕ್ಕಳ ಕತೆ, ಮಿನಿ ಕಾದಂಬರಿಗಳು ನಾಡಿ
ಅನೇಕ ಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿವೆ. ಆಕಾಶವಾಣಿಯ
ಕಿರುನಾಟಕಗಳು ಪ್ರಸಾರವಾಗಿವೆ. “ಬಳ್ಳಿಮೊಗ್ಗು” ಕನ್ನಡ ಸಾಹಿತ್ಯ ಪರಿಷತ್ತಿ
ವರ್ಷದ ಉತ್ತಮಮಹಿಳಾ ಪುಸ್ತಕವಾಗಿ ಬಹುಮಾನ ಗಳಿಸಿದೆ. (೧೯೭೮)

ಇತರ ಪ್ರಕಟಿತ ಕೃತಿಗಳು :

ಕಾದಂಬರಿ :

೧ ಕಾವೇರಿಯ ಆರ್ತರವ - ೧೯೬೬
೨ ಉಷಾ ನಿಷೆ - ೧೯೬೯
೩ ಮಲಯ ಮಾರುತ - ೧೯೭೦
೪ ವೀಣಾ ಓ ವೀಣಾ - ೧೯೭೩
೫ ಗಗನ - ೧೯೭೪
೬ ಮುಗಿಲ ಮಿಂಚು - ೧೯೭೪
೭ ಬಳ್ಳಿ ಮೊಗ್ಗು - ೧೯೭೭
೮ ದೀಪ - ೧೯೭೯
೯ ತೇಲಿಬಂದ ಬಂಧನ - ೧೯೮೧

ಹಾಸ್ಯ ಬರಹ :

೧ ನಮಸ್ಕಾರ ಗುರುಡಮ್ಮನವರೇ ಏನ್ಸಮಾಚಾರ ? -೧೯೭೬

೨ ತರಂಗರಂಗ - ೧೯೭೨

೩ ಕಾವೇರಮ್ಮ ಅಮೇರಿಕಾದಲ್ಲಿ - ೧೯೭೪

ಮಕ್ಕಳ ಪುಸ್ತಕ :

೧ ಬಿ. ವೆಂಕಟಾಚಾರ್ಯ - ೧೯೭೮

೨ ಕಮಲಾ ನೆಹರು (ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ) - ೧೯೭೪

ಅನೇಕ ಆಂಗ್ಲ ನಾಟಕಗಳನ್ನು ಕನ್ನಡಕ್ಕೆ ರೂಪಾಂತರಿಸಿ ರೇಡಿಯೋಕ್ಕೆ ಅಳವಡಿಸಿದ್ದಾರೆ. ಕನ್ನಡದ ಉತ್ತಮ ಕತೆಗಳನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿದ್ದಾರೆ.

"ಬರಲೆ ಇನ್ನು ಯಮುನೆ" ಕಾದಂಬರಿ "ಸಿಪಾಯಿ ರಾಮು"ವಾಗಿ ರಜತ ಪರದೆಯ ಮೇಲೆ ಮೂಡಿಬಂದಿದೆ.



ಪಂಕಜಾ ಶ್ರೀನಾಥ್

ಬೆಂಗಳೂರಿನಲ್ಲಿರುವ ಪಂಕಜಾರವರು ಮೈಸೂರಿನ ವಿಶ್ವವಿದ್ಯಾನಿಲಯದ ಬಿ.ಎಸ್ಸಿ., ಪದವೀಧರೆ. ದೆಹಲಿ ಆಕಾಶವಾಣಿಯಲ್ಲಿ ಬೆಂಗಳೂರಿನ ಆಕಾಶವಾಣಿಯ ವಾರ್ತಾ ವಿಭಾಗದಲ್ಲಿ ನಾಲ್ಕು ವರ್ಷ ಸುದ್ದಿ ಪ್ರಸಾರಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಅಭಿರುಚಿ ಬೆಳೆಸಿಕೊಂಡು ಅನೇಕ ಲೇಖನ, ಕತೆ, ಕಾದಂಬರಿ ಬರೆದು ಪ್ರಕಟಿಸಿದ್ದಾರೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿ :

೧ ಸಾವಿನ ತೆಕ್ಕೆಯಲ್ಲಿ - ೧೯೬೩
೨ ಅತೃಪ್ತ ಆಕಾಂಕ್ಷೆ

ಅನುವಾದ

೩ ಗೆದ್ದು ಸೋತವನು - ೧೯೫೯
೪ ನರ್ತಕಿಯ ಪೂಜೆ - ೧೯೬೪



ಪದ್ಮಜೆ ಕೆ. ಆರ್.

೩೭ ವರ್ಷ ವಯಸ್ಸಿನ ಪದ್ಮಜೆ ಅನೇಕ ಕಾದಂಬರಿಗಳನ್ನೂ, ಮಕ್ಕಳ ಸಾಹಿತ್ಯವನ್ನೂ ರಚಿಸಿದ್ದಾರೆ. ಪ್ರೌಢಶಾಲೆಗಳಿಗಾಗಿ ಆಕಾಶವಾಣಿ ಏರ್ಪಡಿಸಿದ್ದ ಅಖಿಲ ಭಾರತ ಕಥಾ ಸ್ಪರ್ಧೆಯಲ್ಲಿ ಪದ್ಮಜೆ ೧೯೭೨, ೧೯೭೩ರಲ್ಲಿ ಎರಡು ಬಾರಿ ಬಹುಮಾನವನ್ನು ಪಡೆದಿದ್ದಾರೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿ :

೧ ಬಾಳ ದೀವಿಗೆ
೨ ಬದುಕಿನ ಬಣ್ಣ
೩ ಹೆಣ್ಣಿನ ಮಾಂಗಲ್ಯ
೪ ಶುಭ ತೋರಣ
೫ ಶಾಂತಿ ಮಂದಿರ
೬ ಸುಪ್ರಭಾತ
೭ ಅಂಕಿತ
೮ ಯಾರು ಕೊಲೆಗಾರ ?
೯ ಸಾವಿನ ಅಲೆ
೧೦ ವಿವಾಹ ಬಂಧನ
೧೧ ಶುಭಯೋಗ
೧೨ ಪದ್ಮಾರಾಗ
೧೩ ಚಿನ್ನದ ಕಳ್ಳರು
೧೪ ಗೋವಾದಲ್ಲಿ ಕಳ್ಳರು
೧೫ ಬೆಂಕಿಯ ಸಂಗ
೧೬ ಮಂಜಿನ ಮರಣ
೧೭ ಆಟೋದಲ್ಲಿ ಕೊಲೆ
೧೮ ಬಾಳಗೀತೆ
೧೯ ವರಮಾಲ
೨೦ ವಜ್ರದ ಹಿಡಿ

ಮಕ್ಕಳ ಸಾಹಿತ್ಯ :

೧ ನಿಜವಾದ ನ್ಯಾಯ
೨ ಹಾಡುವ ಹಕ್ಕಿ
೩ ಲಕ್ಷ್ಮಿಯ ಅನುಗ್ರಹ
೪ ಮೂರ್ಖ ಮಂಗ
೫ ಸಾಗರದ ರಾಜ
೬ ಭರತ



ಪದ್ಮಾ ಗುರುರಾಜ್

ಇವರು ಕಳೆದೆರಡು ದಶಕಗಳಿಂದಲೂ ಅನೇಕ ಸಣ್ಣ ಕತೆ, ಲೇಖನ, ಹರಟೆ, ಸಂದರ್ಶನ ಲೇಖನಗಳನ್ನು ನಾಡಿನ ಅನೇಕ ಪತ್ರಿಕೆಗಳಲ್ಲಿ ಬರೆಯುತ್ತ ಬಂದಿದ್ದಾರೆ. ಲೇಖಕಿ, ಪ್ರಕಾಶಕಿ ಹಾಗೂ ಪತ್ರಕರ್ತೆ. ನಲವತ್ತರ ದಶಕದ ಇವರು ಪದವೀಧರೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿ :

೧ ಹೆಣ್ಣಿನ ಪ್ರೇಮ - ೧೯೬೮
೨ ಧೃವತಾರೆ - ೧೯೭೮
೩ ಮುಳ್ಳಿನ ಕಿರೀಟ - ೧೯೮೦
೪ ಮೇಘಮಾಲೆ–೧೯೮೦

ಕಥಾ ಸಂಕಲನ :

೫ ದಾಹ–೧೯೮೧
೬ ಬೇಲಿ ,,

ಸಾಹಿತ್ಯ, ಸಂಗೀತಗಳಲ್ಲಿ ಆಸಕ್ತಿಯುಳ್ಳ ಪದ್ಮಾ ಅವರು ಉತ್ತಮ ಕಾರ್ಯ ಕರ್ತೆಯೂ ಹೌದು. ಕರ್ನಾಟಕ ಲೇಖಕಿಯರ ಸಂಘದ ಕಾರ್ಯದರ್ಶಿನಿಯಾಗಿದ್ದಾರೆ. ಬಾನುಲಿಯಲ್ಲಿ ಇವರ ಅನೇಕ ಕೃತಿಗಳು ಪ್ರಸಾರಗೊಂಡಿವೆ.



ಪದ್ಮಾ ಎಂ. ಸಿ.

ಬೊಂಬಾಯಿಯಲ್ಲಿ ನೆಲೆಸಿದ್ದಾರೆ. ಪದ್ಮಾ ಅವರು ಬಿ. ಎ. ಪದವೀಧರೆ. ರಾಷ್ಟ್ರಭಾಷಾ ಪ್ರವೀಣೆಯಾಗಿದ್ದಾರೆ. ಕನ್ನಡ ಕಾಪಿರೈಟರ್ ಉದ್ಯೋಗ ಮಾಡುತ್ತಿದ್ದಾರೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿ :

೧ ಪ್ರೇಮಮಯಿ
೨ ಸವತಿ ಕಸ್ತೂರಿ
೩ ಮನ ಬೆಳಗಿತು
೪ ಸುಪ್ರಭಾತ
೫ ಅವಳ ಮಗಳು (ತ್ರಿವೇಣಿಯವರ ಅಪೂರ್ಣ ಕಾದಂಬರಿಯನ್ನು ಪೂರ್ಣಗೊಳಿಸಿದ್ದಾರೆ)
೬ ಶಶಿಕಿರಣ
೭ ಮಂಗಳಯಾತ್ರೆ
೮ ಮಂಜು ಕರಗಿತು
೯ ಪ್ರೇಮ ವಸಂತ
೧೦ ಪರಿಣಯ
೧೧ ಸ್ಮೃತಿ
೧೨ ಅಂತರಾಳ

ಕಥಾ ಸಂಕಲನ :

೧೩ ಚಿಟ್ಟೆಯಾಗಿ ಹಾರಿತು

ಇತರ ಭಾಷಾ ಕಲಿಕೆ, ನಾಣ್ಯ ಸಂಗ್ರಹಗಳ ಹವ್ಯಾಸವನ್ನಿರಿಸಿಕೊಂಡಿದ್ದಾರೆ. ಕ್ರಿಕೆಟ್, ಟೆನ್ನಿಸ್ ಆಟಗಳಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದಾರೆ.



ಪದ್ಮಾಶೇಖರ್
(ಟಿ. ವಿ. ಪದ್ಮಾವತಿ)

ಕನ್ನಡ ಎಂ.ಎ. ಪದವೀಧರೆಯಾದ ಪದ್ಮಾವತಿಯವರು ಜೈನಾಲಜಿಯಲ್ಲಿ ಡಿಪ್ಲೊಮಾ ಪದವಿ ಹೊಂದಿ, ಮೈಸೂರಿನ ಅಧ್ಯಯನ ಸಂಸ್ಥೆಯಲ್ಲಿ ಪಿ.ಎಚ್.ಡಿ. ವ್ಯಾಸಂಗ ಮಾಡುತ್ತಿದ್ದಾರೆ. 'ಪದ್ಮಾ ಶೇಖರ್' ಇವರ ಕಾವ್ಯನಾಮ. ಇವರಿಗೆ ವೈಚಾರಿಕ ಸಾಹಿತ್ಯ ರಚಿಸುವತ್ತ ಒಲವು.

ಇವರ ಪ್ರಕಟಿತ ಕೃತಿಗಳು :

೧ ಕನ್ನಡ ಛಂದಸ್ಸು - ಒಂದು ಅಧ್ಯಯನ - ೧೯೮೦

೨ ಜೈನಶಾಸ್ತ್ರ - ಕೆಲವು ಅಧ್ಯಯನಗಳು (ಅನುವಾದ) - ೧೯೭೯

'ಸಹೃದಯ ಪ್ರಕಾಶನ'ದ ಸ್ಥಾಪಕಿ, ಪ್ರಕಾಶಕಿಯಾಗಿಯೂ ಕೆಲಸ ಮಾಡುತ್ತಿದ್ದಾರೆ.



ಪದ್ಮಾ ಶೆಣೈ

ಮದ್ರಾಸಿನಲ್ಲಿ ಜನಿಸಿದ ಪದ್ಮಾರವರು ಈಗ ಮಂಗಳೂರಿನ ನಿವಾಸಿಗಳಾಗಿದ್ದಾರೆ. ಹೈಸ್ಕೂಲ್ ಶಿಕ್ಷಣ ಪಡೆದು ಗೃಹಕಾರ್ಯ ನಿರತರಾಗಿದ್ದಾರೆ. ಅನೇಕ ಕತೆ, ಕಾದಂಬರಿ, ಜೀವನ ಚರಿತ್ರೆ, ವಿಚಾರ ಸಾಹಿತ್ಯಗಳಲ್ಲಿ ದುಡಿಮೆ ನಡೆಸಿದ್ದಾರೆ.

ಮನೆಯಲ್ಲಿ ಆಡುವ ಮಾತು ಕೊಂಕಣಿ.

ಇವರ "ರಸವಿರಸ" ಕಾದಂಬರಿಗೆ ಮೈಸೂರು ಸರ್ಕಾರದ ಪ್ರಶಸ್ತಿ ದೊರೆತಿದೆ. ಹಾಗೂ ಅದು 'ಜಾಣ' ಪರೀಕ್ಷೆಗೆ ಉಪ ಪಠ್ಯಪುಸ್ತಕವಾಗಿ ಅಂಗೀಕೃತವಾಗಿದೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿ :

೧ ರಸವಿರಸ - ೧೯೬೨
೨ ಸಂಧಿಕಾಲ ೧೯೬೬
೩ ಕೊನೆಯ ನಿರ್ಧಾರ - ೧೯೭೦
೪ ನಾ ನಿನ್ನ ಧ್ಯಾನದೊಳಿರಲು - ೧೯೭೫
೫ ನರ-ನಾರಾಯಣ - ೧೯೭೫
೬ ಅನುಬಂಧ - ೧೯೭೫

ಕಥಾ ಸಂಕಲನ :

೭ ದೂರದ ಆಸೆ - ೧೯೬೪
೮ ಹರಿದ ಗಾಳಿಪಟ - ೧೯೭೫

ಜೀವನ ಚರಿತ್ರೆ :

೯ ಮಹಾ ಸನ್ಯಾಸಿ - ೧೯೭೨

ಮಕ್ಕಳ ಕತೆಗಳು :

೧೦ ದ್ರೌಪದಿ

೧೧ ಸಂತ ಸಖೂಬಾಯಿ

೧೨ ಫಿರೋಜ್ ಷಾ ಮೆಹ್ತಾ-೧೯೭೬

೧೩ ಛತ್ರಸಾಲ

ವಿಚಾರ ಸಾಹಿತ್ಯ :

೧೪ ಭಾರತೀಯ ಸ್ತ್ರೀ, ಸಂಸ್ಕೃತಿ ಮತ್ತು ಸಮಾಜ -೧೯೭೬

ನೀಳ್ಗತೆ :

೧೫ ಪ್ರಭಾ

೧೬ ಉಷಾ

೧೭ ಸುಧಾ

"ಭಾರತೀಯ ಸ್ತ್ರೀ, ಸಮಾಜ ಮತ್ತು ಸಂಸ್ಕೃತಿ" ೧೯೭೯ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನಿತ ಪುಸ್ತಕವಾಗಿದೆ. ಓದು ಬರಹದೊಂದಿಗೆ ಸಮಾಜಸೇವೆ ಇವರ ಆಸಕ್ತಿಯ ಕ್ಷೇತ್ರವೆನಿಸಿದೆ.



ಪ್ರೊ. ಪದ್ಮಾವತಿ ಪಿ. ಎಲ್.

ಬೆಂಗಳೂರಿನ ವಿಜಯಾ ಕಾಲೇಜಿನ ಪ್ರಾಂಶುಪಾಲರಾದ ಪದ್ಮಾವತಿಯವರು ಬಿ.ಎಸ್ಸಿ., ಎಂ.ಎ., ಎಂ.ಎಡ್. ಪದವೀಧರರು. ಭದ್ರಾವತಿಯಲ್ಲಿ ಜನಿಸಿ, ಬೆಂಗಳೂರಿನಲ್ಲಿ ಕೆಲಸಮಾಡುತ್ತಿದ್ದಾರೆ. ಲೇಖನ - ಕವನಗಳನ್ನು ರಚಿಸಿದ್ದಾರೆ. ವೈಜ್ಞಾನಿಕ ಲೇಖನ ಬರೆಯುವುದರಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಸಸ್ಯ ವರ್ಗೀಕರಣ ಶಾಸ್ತ್ರ - ೧೯೭೬
೨ ಗಣಿತ ಶಾಸ್ತ್ರದ ಮೂಲ ತತ್ವಗಳ ಅರ್ಥಕೋಶ
೩ ಗತಿಸಿದ ಚರಿತ್ರೆ ಬೋಧಿಸಿದ್ದೇನು ?
೪ ಜೀವಿಗಳಲ್ಲಿ ಸಾಹಸಗಳು
೫ ಉದ್ದಿಷ್ಟ ಮೌಲ್ಯ
೬ ಪರಿಚಯಾತ್ಮಕ ಜೀವ ವಿಜ್ಞಾನದ ಬೋಧನೆಯ ೩ ಭಾಗಗಳು

ಇವರು ಬರೆದ ಸಂಶೋಧನೆಯ ಪ್ರಬಂಧಗಳಲ್ಲಿ ಎರಡಕ್ಕೆ ರಾಷ್ಟ್ರೀಯ ಪ್ರಶಸ್ತಿ ದೊರಕಿದೆ.



ಪಾರ್ವತಮ್ಮ ಸಿ. ಸಿ.

ದಾವಣಗೆರೆಯಲ್ಲಿ ಜನಿಸಿದ ಪಾರ್ವತಮ್ಮನವರು ಧಾರವಾಡದ ನಿವಾಸಿಗಳಾಗಿದ್ದಾರೆ. ಪಾರ್ವತಮ್ಮ ಚಂದ್ರಣ್ಣ, ಪಾರ್ವತಿ ಸಿ. ಶೇಖರ ಎಂದು ಸಾಹಿತ್ಯ ಕ್ಷೇತ್ರಕ್ಕೆ ಪರಿಚಿತರಾಗಿದ್ದಾರೆ. ಗೃಹಿಣಿಯಾಗಿ, ಸಾಹಿತ್ಯವನ್ನೂ ಅಭ್ಯಾಸ ಮಾಡುತ್ತಲಿದ್ದಾರೆ. ಅವರ ಒಲವು ಶರಣ ಸಾಹಿತ್ಯ ಎಂದು ಹೇಳುತ್ತಾರೆ.

ಇವರ ಪ್ರಕಟಿತ ಕೃತಿ :

ಬಯಕೆ (ಕವನ ಸಂಕಲನ) - ೧೯೮೧



ಪಾರ್ವತಿ ಕೃ. ನಾ. ಮೂರ್ತಿ

ಪಾರ್ವತಿಯವರು ಗೃಹಿಣಿ, ಲೇಖಕಿ ಹಾಗೂ ಪ್ರಕಾಶಕಿ. ಇಂಟರ್ ಮೀಡಿಯಟ್‌ವರೆಗೂ ಅಭ್ಯಾಸ ಮಾಡಿರುವ ೪೮ರ ಹರೆಯದ ಇವರು ಹಾಸನದವರು.

ಪಾರ್ವತಿಯವರ ಹವ್ಯಾಸಗಳೆಂದರೆ ಕಸೂತಿ, ಸಂಗೀತ, ಸಾಹಿತ್ಯ ರಚನೆ.

ಇವರ ಪ್ರಕಟಿತ ಕೃತಿಗಳು :

೧ ಹ್ಯಾಮ್‌ಲೆಟ್ (ಷೇಕ್ಸ್‌ಪಿಯರ್‌ನ ನಾಟಕದ ಅನುವಾದ) ೧೯೫೫

೨ ಗೃಹದೇವಿ (ಶರಚ್ಚಂದ್ರರ 'ಬಿರಾಜ್ ಬಹು'ವಿನ ಅನುವಾದ) ೧೯೬೧

೩ ಬಿಡುಗಡೆಯ ಬಂಧನ (ಕಾದಂಬರಿ) ೧೯೭೫

೪ ಸೆಳವಿನ ಸುಳಿ (ಕಾದಂಬಿರಿ) ೧೯೬೮

೫ ಮೂವರ ಕಥೆಗಳು (ಕಥಾ ಸಂಕಲನ) ೧೯೭೨

೬ ಭಾವನಾ (ಸಂಕೀರ್ಣ) ೧೯೭೬

ಬೆಂಗಳೂರಿನಲ್ಲಿ ನಡೆದ ಶರಚ್ಚಂದ್ರರ ಜನ್ಮಶತಾಬ್ಧಿ ಸಮಾರಂಭದಲ್ಲಿ ಶರಚ್ಚಂದ್ರರ ಅನುವಾದಿತ ಕಾದಂಬರಿಗಳಲ್ಲಿ ಅತ್ಯುತ್ತಮ ಅನುವಾದವೆಂದು 'ಗೃಹದೇವಿ' ಪರಿಗಣಿತವಾಗಿ ಪುರಸ್ಕಾರ ಪಡೆದುಕೊಂಡಿದೆ.

ಬಾನುಲಿಯಲ್ಲೂ ಇವರ ಹಲವಾರು ನಾಟಕಗಳು ಪ್ರಸಾರಗೊಂಡಿವೆ.



ಪಾರ್ವತಿ ಪೂವಯ್ಯ

ಮಡಿಕೇರಿಯ ರಮಣೀಯ ನಿಸರ್ಗದ ತೋಟ್ಟಿಲಲ್ಲಿ ಹುಟ್ಟಿ, ಬೆಳೆದು ಬಾಳುವೆ ನಡೆಸುತ್ತಿರುವ ಕೂತಂಡ ಪಾರ್ವತಿ ಪೂವಯ್ಯ ಸಹಜವಾಗಿ ಪ್ರಕೃತಿಯಾರಾಧಕರು. ಸಾಹಿತ್ಯದೊಂದಿಗೆ ಚಿತ್ರಕಲೆಯಲ್ಲಿಯೂ ಆಸಕ್ತಿ ಹೊಂದಿದ್ದಾರೆ.

ಎಪ್ಪತ್ತರ ಸಮೀಪದಲ್ಲಿರುವ ಇವರು ರಚಿಸಿರುವ ಕೃತಿಗಳು :

೧ ಕೊಡಗಿನ ಸಣ್ಣಕತೆಗಳು ಮತ್ತು ಕವನಗಳು ೧೯೭೬
೨ ಕೊಡಗಿನ ಕತೆಗಳು ಮತ್ತು ಕವನಗಳು ೧೯೭೭
೩ ಭುಗಿಲಗೊಂಚಲು ಮತ್ತು ಕವನಗಳು ೧೯೭೯
೪ ಭೈರವಿ ೧೯೮೦

ಇವರು ಲೇಖಕಿ, ಕಲಾವಿದೆಯಾದಂತೆ ಸಂಗೀತಪ್ರಿಯೆಯೂ ಹೌದು. ಇದಲ್ಲದೆ ಚಿತ್ರ ಸಂಗ್ರಹವೂ ಬಿಡುವಿನ ವೇಳೆಯ ಹವ್ಯಾಸವಾಗಿ ಬೆಳೆದುಬಂದಿದೆ.



ಪಾರ್ವತಿ ಎಚ್. ಎಸ್.

ಆಕಾಶವಾಣಿ ಬೆಂಗಳೂರಿನಲ್ಲಿ ಭಾಷಾಂತರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಪಾರ್ವತಿಯವರು. ಕನ್ನಡ ಜಾಣ, ಹಿಂದೀ ಪ್ರವೀಣೆ ಹಾಗೂ ಹಿಂದೀ ಎಂ.ಎ., ಪದವೀಧರೆ. ಸಾಹಿತ್ಯದಂತೆ ಸಂಗೀತ ನಾಟಕಗಳಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದ್ದಾರೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿ ;

೧ ನೇಸರು ನೆಳಲು
೨ ಜೀವನ ಜಾಲ
೩ ಜಾಬಾಲ

ಅನುವಾದ :

೪ ದುರ್ಗೇಶ ನಂದಿನಿ
೫ ಬಿಳಿಯ ರಕ್ತ
೬ ದರ್ಬಾರೀರಾಗ
೭ ಮಾಸಿದ ಸೆರಗು
೮ ಮುಚ್ಚಿದ ಬಾಗಿಲು
೯ ತ್ಯಾಗಪತ್ರ
೧೦ ಉದಯದೆಡೆಗೆ
೧೧ ಪಂಜಾಬಿ ಲೋಕಕತೆಗಳು

ಕಥಾ ಸಂಕಲನ ;

೧೨ ಸ್ವರ ಅಪಸ್ವರ
೧೩ ಬದಲಾದ ಪ್ರತಿಬಿಂಬ
೧೪ ಹೆಣ್ಣು ಹೃದಯ
೧೫ ಒಂಟಿ ಮೋಡ

ಜೀವನ ಚರಿತ್ರೆ :

೧೬ ಆರ್. ಕಲ್ಯಾಣಮ್ಮ–ಜೀವನ ಮತ್ತು ಕಾರ್ಯ

ಮಕ್ಕಳ ಸಾಹಿತ್ಯ :

೧೭ ಶಾರದಾಮಣಿದೇವಿ
೧೮ ಕನ್ನಡ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ
೧೯ ಹನುಮಾನ ಪ್ರಸಾದ ಪೋದ್ದಾರ
೨೦ ಆರ್. ಕಲ್ಯಾಣಮ್ಮ
೨೧ ಹತ್ತಿರದವರು (ಹರಟೆಗಳ ಸಂಕಲನ)
೨೨ "ಭಾರತಿ" ತಿರುಮಲೆ ರಾಜಮ್ಮನವರ ಸಂಭಾವನಾ ಗ್ರಂಥ (ಸಂಪಾದನೆ)
೨೩ "ಸುನಂದಾಭಿನಂದನ"
ಟಿ. ಸುನಂದಮ್ಮನವರ ಅಭಿನಂದನಾ ಗ್ರಂಥ (ಸಂಪಾದನೆ)
೨೪ ನವೋದಯ ಕಾವ್ಯದಲ್ಲಿ ಪ್ರಕೃತಿ ಚಿತ್ರಣ (ಪ್ರಬಂಧ)
೨೫ ಓದಿನಾ ಒಳಗು (ಲೇಖನಗಳ ಸಂಕಲನ)

"ನೇಸರು ನೆಳಲು" ಕಾದಂಬರಿಗೆ ತ್ರಿವೇಣಿ ಕಾದಂಬರಿ ಸ್ಪರ್ಧೆಯಲ್ಲಿ ಬಹುಮಾನ ಬಂದಿದೆ. "ಓದಿನಾ ಒಳಗು" ಲೇಖನಗಳ ಸಂಕಲನಕ್ಕೆ ೧೯೮೧ನೇ ಸಾಲಿನ ಮಲ್ಲಿಕಾ ಪ್ರಶಸ್ತಿ (ಕನ್ನಡ ಸಾಹಿತ್ಯ ಪರಿಷತ್ತಿನಿಂದ) ದೊರೆತಿದೆ. ಪ್ರಕೃತದಲ್ಲಿ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷತೆಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.



ಪುಣ್ಯವತಿ ಡೋಣಗಾಪುರೆ


ಕನ್ನಡದ ಗಡಿನಾಡು ಬೀದರಿನ ಭಾಲ್ಕಿಯಲ್ಲಿರುವ ಪುಣ್ಯವತಿಯವರು ಕನ್ನಡ ಓದು ಬರಹಗಳಲ್ಲಿ ಆಸಕ್ತಿ ಹೊಂದಿದ ವಿದ್ಯಾರ್ಥಿಯಾಗಿದ್ದಾರೆ. ಬಿ.ಎ., ಪದವೀಧರೆ, ಎಂ.ಎ., ವಿದ್ಯಾರ್ಥಿನಿ.

ಇವರ ಪ್ರಕಟಿತ ಕೃತಿ :

೧ ಕೇಳತೀನಿ ಹೇಳ (ಒಗಟುಗಳ ಸಂಕಲನ)

ಈ ಕೃತಿಯು ಮಹಿಳಾ ವರ್ಷದ ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಮಟ್ಟದಲ್ಲಿ ಪ್ರಥಮ ಬಹುಮಾನ ಗಳಿಸಿದೆ.

ಸಾಹಿತ್ಯಿಕ ಚಟುವಟಿಕೆ, ಕ್ರೀಡಾರಂಗ, ಅಭಿನಯ, ಚಲನಚಿತ್ರ, ಪತ್ರಮಿತ್ರತ್ವ, ಶೈಕ್ಷಣಿಕ ಪ್ರವಾಸಗಳು ಅವರ ಹವ್ಯಾಸ ಹಾಗೂ ಅಭಿರುಚಿಗಳಾಗಿವೆ. ಅನೇಕ ಸ್ಥಳೀಯ ಪತ್ರಿಕೆಗಳಲ್ಲಿ ಅವರ ಕವನಗಳು ಪ್ರಕಟವಾಗಿವೆ.



ಪುಷ್ಪ ಎನ್. ರಾವ್

ಪುಷ್ಪ ಎನ್. ರಾವ್ ಹೆಸರಿನಲ್ಲಿ ಸೇತೂಬಾಯಿಯವರು ಅನೇಕ ಕಾದಂಬರಿಗಳನ್ನು ಬರೆದಿದ್ದಾರೆ. ಪ್ರೌಢ ವಿದ್ಯಾಭ್ಯಾಸ ಮಾಡಿ ಗೃಹಿಣಿ ಕರ್ತವ್ಯ ನಿರ್ವಹಿಸುತ್ತ ಸಾಹಿತ್ಯ ಕೃಷಿ ನಡೆಸಿದ್ದಾರೆ. ಸಣ್ಣಕತೆ, ಹಾಸ್ಯ ಲೇಖನ, ವೈಚಾರಿಕ ಲೇಖನಗಳೊಂದಿಗೆ ಧಾರಾವಾಹಿ ಕಾದಂಬರಿಗಳು ನಾಡಿನ ಅನೇಕ ಪತ್ರಿಕೆಗಳಲ್ಲಿ ಅಚ್ಚಾಗಿವೆ. ಹಲವು ಆಕಾಶವಾಣಿಯಿಂದ ಪ್ರಸಾರವಾಗಿವೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿಗಳು :

೧ ಗೃಹರತ್ನ
೨ ಮಲತಾಯಿ
೩ ಮಾರ್ಗದರ್ಶಿನಿ
೪ ವರಪುತ್ರಿ
೫ ಯಾರಿವಳು ?
೬ ಮೂರು ನಿಲ್ದಾಣಗಳು
೭ ಸುವರ್ಣಧಾಮ
೮ ವಾತ್ಸಲ್ಯ ದೇವರು
೯ ಬಂಗಾರದ ಸರಪಣಿ
೧೦ ಪರಿವರ್ತಿನಿ
೧೧ ಮಮತಾಮಂದಿರ
೧೨ ಮರಳಿ ಜೀವನ
೧೩ ಮುಕುರ
೧೪ ಒಲವಿನ ಕಡಲು
೧೫ ಹೊನ್ನು ಹೃದಯ
೧೬ ಹಗಲು ನಕ್ಷತ್ರ
೧೭ ಸುಖ ಸನ್ನಿಧಿ
೧೮ ಮಾಸಲು ಹೂವು
೧೯ ಜಲಪಂಜರ
೨೦ ಗಗನ ಸುಖ



ಪೂರ್ಣಿಮಾ ಎಸ್. ಪಿ.

'ಗುಡಿಬಂಡೆ ಪೂರ್ಣಿಮಾ" ಎಂದೇ ಪರಿಚಿತರಾಗಿದ್ದಾರೆ ಪೂರ್ಣಿಮಾರವರು. ಶ್ರವಣಬೆಳಗೊಳದಲ್ಲಿ ಜನಿಸಿದ ಇವರು ಪ್ರತಿಭಾವಂತ ವಿದ್ಯಾರ್ಥಿನಿಯಾಗಿ ಬಿ.ಎ.ನಲ್ಲಿ ಚಿನ್ನದ ಪದಕ ವಿಜೇತೆಯಾಗಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದ ಎಂ.ಎ. ಪದವೀಧರೆಯೂ ಆಗಿದ್ದಾರೆ.

ಗೃಹಿಣಿ, ಪತ್ರಕರ್ತೆ, ಲೇಖಕಿಯೂ ಆಗಿದ್ದಾರೆ. ಇವರ ಅನೇಕ ಲೇಖನ, ಕವನ, ನಾಟಕಗಳು ನಾಡಿನ ಅನೇಕ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಆಕಾಶವಾಣಿಯಲ್ಲಿ ಬಿತ್ತರಗೊಂಡಿವೆ. ಧಾರಾವಾಹಿಯಾಗಿ ಪತ್ರಿಕೆಯಲ್ಲಿ ಕಾದಂಬರಿಗಳು ಅಚ್ಚಾಗಿವೆ.

ಇವರ ಪ್ರಕಟಿತ ಕೃತಿಗಳು :

೧ ಸುಬಂಧುಶ್ರೀ (ಕಾದಂಬರಿ) - ೧೯೭೪
೨ ಮಲ್ಲಿನಾಥ ,, - ೧೯೭೭
೩ ಬಂಧಮುಕ್ತ ,, - ೧೯೮೦
೪ ಮಾಗಿಯ ಫಲ ,, - ೧೯೮೧
೫ ಪರಾಗ ,, - ೧೯೮೧
೬ ಗುಂಡು ಮೇಸ್ತ್ರು - (ಜೀವನ ಚರಿತ್ರೆ) - ೧೯೭೭
೭ ನನಗನಿಸಿದ್ದು (ಕವನ ಸಂಕಲನ) - ೧೯೮೦
೮ ಮುಂದೇನೇ ಸಖಿ ,, (ಸಂಪಾದಿತ ಕೃತಿ) - ೧೯೮೧

ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಕೋಲಾರ ಜಿಲ್ಲಾ ಸಮಿತಿ ಅಧ್ಯಕ್ಷರಾಗಿದ್ದಾರೆ.



ಫಿಲೋಮಿನಾ ಎಚ್. ಪಿ.

ಪತ್ರಕರ್ತೆಯಾಗಿ ಕೆಲಸ ಮಾಡುತ್ತಿರುವ ಫಿಲೋಮಿನಾ ಅವರು ವಿಜ್ಞಾನ ಪದವೀಧರೆ. ಪತ್ರಿಕೋದ್ಯಮ ಹಾಗೂ ಸಾರ್ವಜನಿಕ ಸಂಪರ್ಕದಲ್ಲಿ ಡಿಪ್ಲೊಮಾ ಪಡೆದಿದ್ದಾರೆ. ಸಂಯುಕ್ತ ಮಹಿಳಾ ವೇದಿಕೆಯ ಕನ್ನಡ "ಬನ್ನಿ" ಮಾಸಪತ್ರಿಕೆಯ ಸಹಸಂಪಾದಕಿ ಹಾಗೂ ಸುದ್ದಿ ಕೇಂದ್ರದ (ಮಾಸಪತ್ರಿಕೆ) ಉಪಸಂಪಾದಕಿಯಾಗಿದ್ದಾರೆ.

ಇವರ ಪ್ರಕಟಿತ ಕೃತಿ :

ದೇವದಾಸಿ ಸಮಸ್ಯೆ - ೧೯೮೧
(ಇವರು ಗಳತಿಯೊಂದಿಗೆ ಬರೆದ 'ದೇವದಾಸಿ ಪ್ರಾಬ್ಲಮ್ಸ್'ನ ಕನ್ನಡ ರೂಪಾಂತರ)

ಇವರ ಈ ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಎಚ್. ನರಸಿಂಹಯ್ಯ ದತ್ತಿನಿಧಿ ಪ್ರಶಸ್ತಿ ದೊರೆತಿದೆ.

ಸಂಗೀತ, ಕಾವ್ಯ, ನಾಟಕಗಳಲ್ಲಿ ಆಸಕ್ತಿ ಇರುವ ಇವರು ಅನೇಕ ಲೇಖನಗಳನ್ನು ಮಹಿಳೆಯರ ಸಮಸ್ಯೆಗಳಿಗೆ ಹಾಗೂ ಧಾರ್ಮಿಕ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಪತ್ರಿಕೆಗಳಲ್ಲಿ ಬರೆಯುತ್ತಿದ್ದಾರೆ.



ಪ್ರಮಿಳಾ ದೇಶಪಾಂಡೆ

ಸಮಾಜ ಸೇವಾಕರ್ತೆಯಾಗಿರುವ ಪ್ರಮಿಳಾರವರು ಮಹಿಳೆಯರ ಸಮಸ್ಯೆಗಳ ಬಗೆಗೆ ಹೆಚ್ಚಿನ ಗಮನ ಹರಿಸಿದ್ದಾರೆ. ಬೆಂಗಳೂರಿನಲ್ಲಿ ನೆಲೆಸಿರುವ ಇವರು ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಸಲಹಾ ಸಮಿತಿಯ ಅಧ್ಯಕ್ಷಿಣಿಯಾಗಿದ್ದರು. ಮಹಿಳೆ ಹಾಗೂ ಮಕ್ಕಳ ಬಗೆಗೆ ಅಸಕ್ತಿಯಿಂದ ಅನೇಕ ಲೇಖನಗಳನ್ನು ಪತ್ರಿಕೆ ಹಾಗೂ ಆಕಾಶವಾಣಿಯಲ್ಲಿ ಪ್ರಸಾರ ಮಾಡಿದ್ದಾರೆ.

ಇವರ ಪ್ರಕಟಿತ ಕೃತಿ :

ಮಹಿಳೆ ಮತ್ತು ಸಮಾಜಸೇವೆ

೧೯೭೫ರ ಮಹಿಳಾ ವರ್ಷದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಬಹುಮಾನ ಪಡೆದ ಪುಸ್ತಕವಾಗಿ ಪ್ರಕಟವಾಗಿವೆ.

ದುರ್ಬಲ, ನಿರ್ಲಕ್ಷಿತ, ನಿರ್ಗತಿಕ ಮಹಿಳೆ ಹಾಗೂ ಮಕ್ಕಳ ಬಗೆಗೆ ವಿಚಾರ ಹಾಗೂ ಪ್ರಚಾರ ಲೇಖನ ಬರೆಯುವ ಹವ್ಯಾಸವಿರಿಸಿಕೊಂಡಿದ್ದಾರೆ. ಸಂಗೀತ, ಚಿತ್ರಕಲೆ, ತೋಟಗಾರಿಕೆ, ಹೆಣಿಗೆ, ಕಸೂತಿ, ಗೃಹಕೃತ್ಯ, ಪಾಕಕಲೆಗಳಲ್ಲಿ ಅಭಿರುಚಿ ಇದೆ.

ಪ್ರಮೀಳಾ ಸಿರ್ಸೆ

"ಪ್ರಮೀಳಾ ಸಿರ್ಸೆ" ಎಂಬ ಹೆಸರಿನಲ್ಲಿ ಬರೆಯುತ್ತಿರುವ ಪ್ರೇಮಾರವರು ಕನ್ನಡ ಗಡಿನಾಡಾದ ಭಾಲ್ಕಿಯಲ್ಲಿ ಜನಿಸಿದ್ದಾರೆ. ಎಂ.ಎಂ. ಪದವೀಧರೆಯಾಗಿ ಬೀದರಿನ ಅಕ್ಕಮಹಾದೇವಿ ಮಹಿಳಾ ವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಇವರ ಪ್ರಕಟಿತ ಕೃತಿ :

ಇದೂ ಒಂದು ಮಹಾಭಾರತ (ಕವನ ಸಂಕಲನ)



ಪ್ರೇಮಾ ಭಟ್

ಇವರು ೧೯೪೧ನೆಯ ಇಸವಿಯಲ್ಲಿ ಉಡುಪೆಯ ಹೆರ್ಗ ಎಂಬ ಊರಿನಲ್ಲಿ ಜನಿಸಿದ್ದಾರೆ. ಈಗ ಬೆಂಗಳೂರಿನಲ್ಲಿದ್ದಾರೆ

ಇವರು ಬರೆದ ಅನೇಕ ಕಾದಂಬರಿಗಳು ನಾಡಿನ ಸುಪ್ರಸಿದ್ಧ ಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಹರಿದು ಬಂದಿವೆ,

ಪ್ರಕಟಿತ ಕೃತಿಗಳು :

೧ ಅವಳ ಬಾಳು
೨ ಕುಂಕುಮ ಶೋಭಿನಿ
೩ ಮಲ್ಲಿಗೆ ಮುಡಿಗೇರಿತು
೪ ಇದ್ದು ಹೋದ ಜೀವ
೫ ಹೂ ಬಿಸಿಲು
೬ ಸುಜಾತ
೭ ಬಿದಿಗೆ ಚಂದ್ರ
೮ ಸೌಧಕ
೯ ನಂದಿನಿ
೧೦ ತಾರಾಬಲ
೧೧ ಅಲೆಗಳು
೧೨ ಭಾವಬಂಧನ
೧೩ ಮನೆ ಮನ
೧೪ ಅಕ್ಷರಲಕ್ಷ್ಮಿ
೧೫ ಪರಿಣಾಮ
೧೬ ಮಿಣುಕು ಹುಳು
೧೭ ಮುತ್ತಿನ ಕೋಲೆ
೧೮ ಗೊಂದಲ

ಕಥಾ ಸಂಕಲನ:

೧೯ ಮನ ಮೆಚ್ಚಿದವಳು
೨೦ ಅಪೆಸ್ಟಿಕ್ ಹುಡುಗಿ
೨೧ ಅಕ್ಷತೆ (೧೦೮ ಕತೆಗಳ ಬೃಹತ್ ಸಂಕಲನ)
೨೨ ತಲೆ ತಿರುಕರು
೨೩ ಮನೆ (ಕವನ ಸಂಕಲನ)

ಸುಮಾರು ೨೫ ವರ್ಷಗಳ ಹಿಂದೆಯೇ ಸಾಹಿತ್ಯ ರಚನೆಗೆ ತೊಡಗಿದ ಇವರು ಎಸ್.ಎಸ್ಎಲ್.ಸಿ.ಯವರೆಗೆ ವಿದ್ಯಾಭ್ಯಾಸ ನಡೆಸಿ, ವಿಧಾನಸೌಧದ ಕಂದಾಯ ಇಲಾಖೆಯಲ್ಲಿ ಸಹಾಯಕಿಯಾಗಿ ದುಡಿಯುತ್ತಿದ್ದಾರೆ. ಇವರಿಗೆ ಕಛೇರಿಯ ಪತ್ರ ವ್ಯವಹಾರಗಳನ್ನು ಕನ್ನಡದಲ್ಲಿ ನಿರ್ವಹಿಸಿದ್ದಕ್ಕಾಗಿ ಸರ್ಕಾರದಿಂದ ಬಹುಮಾನ ದೊರೆತಿದೆ. ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನಿತರಾಗಿದ್ದಾರೆ.



ಭಾಗ್ಯ ಡಿ.ಕೆ.

ಈ ಕವಿಯತ್ರಿಯ ಜನ್ಮಸ್ಥಳ ಕೊಡಗಿನ ಸೋಮವಾರಪೇಟೆ, ಇವರು ಬಿ.ಎ. ಪದವೀಧರೆ. ಬಿ.ಇ.ಎಲ್. ಫ್ಯಾಕ್ಟರಿಯಲ್ಲಿ ಉದ್ಯೋಗದಲ್ಲಿದ್ದಾರೆ.

ಪ್ರಕಟಿತಪುಸ್ತಕಗಳು :

೧ ಬದುಕಿನ ತೆಕ್ಕೆಯಲ್ಲಿ (ಕವನ ಸಂಕಲನ)—೧೯೭೯
೨ ಸುಳ್ಳಿನಾಚೆಯ ಸತ್ಯ ,, —೧೯೮೧



ಭಾನುಮತಿ ವೈ. ಸಿ.

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಯಮಸಂಧಿಯಲ್ಲಿ ಜನಿಸಿದ ಭಾನುಮತಿಯವರು ಬಿ.ಎಸ್ಸಿ. ಪದವೀಧರೆ. ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನಾ ಸಹಾಯಕಿಯಾಗಿದ್ದಾರೆ.

ಕರ್ನಾಟಕ ವಿದ್ಯಾವರ್ಧಕ ಸಂಘದ ಬಹುಮಾನ "ಚಿಕ್ಕಯ್ಯನ ಸಾಂಗತ್ಯ" ಎಂಬ ಕೃತಿಗೆ ದೊರಕಿದೆ. ಅನೇಕ ಪುರಾತನ ಗ್ರಂಥಗಳನ್ನು ಸಂಪಾದಿಸಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಪುರಾತನ ಚರಿತ್ರೆ (ಸಂಪಾದಿತ)— ೧೯೭೬
೨ ನಿಜಲಿಂಗ ಚಿಕ್ಕಯ್ಯನ ಸಾಂಗತ್ಯ ,, —೧೯೭೮
೩ ದಶಾವತಾರ ಚರಿತೆ ,, —೧೯೭೮
೪ ಷಟ್‌ಸ್ಥಲ ತಿಲಕ ,, —೧೯೭೯
೫ ವಿಜಯ ಕುಮಾರ ಚರಿತೆ ,, —೧೯೮೧
೬ ಅನಂತಯ್ಯನ ಚರಿತೆ ,, —೧೯೮೧
೭ ಸಹ್ಯಾದ್ರಿ ಕಾಂಡ ,, —೧೯೮೧
೮ ಬತ್ತೀಸ ಪುತ್ಥಳಿ ಕಥೆಗಳು (ಸಮಗ್ರ ಸಂಪುಟ)

ಇದಲ್ಲದೆ ಅನೇಕ ಬಿಡಿ ಲೇಖನಗಳನ್ನು ಬರೆದಿದ್ದಾರೆ.

ಭಾರತಿ (ತಿರುಮಲೆ ರಾಜಮ್ಮ)

೨೦ನೇ ನವೆಂಬರ್ ೧೯೦೦ರಲ್ಲಿ ಜನಿಸಿದ ರಾಜಮ್ಮನವರ ಕಾವ್ಯನಾಮ "ಭಾರತಿ". ಹೊಸಗನ್ನಡ ಉದಯಕಾಲದ ಸಾಹಿತಿಯಾಗಿ, ಸಂಗೀತ ವಿದುಷಿಯಾಗಿ, ವೀಣಾ ವಾದನ ನಿಪುಣೆಯಾಗಿ ಹೆಸರಾಗಿದ್ದಾರೆ. ನಾಟಕಕರ್ತೆಯಲ್ಲದೆ, ಕಾವ್ಯ ರಚನೆಯನ್ನು ಮಾಡಿದ್ದಾರೆ. ಪತಿ ತಿ. ತಾ. ಶರ್ಮರೊಂದಿಗೆ ಪತ್ರಕರ್ತೆಯಾಗಿ ದುಡಿದಿದ್ದಾರೆ. ಗೃಹಕಾರ್ಯದೊಂದಿಗೆ ಸಮಾಜಸೇವೆ, ದೇಶಸೇವೆ ಮಾಡಿ ಇದೀಗ ನಿವೃತ್ತ ಜೀವನ ಸಾಗಿಸುತ್ತಿದ್ದಾರೆ. ೮೨ರ ವಯೋವೃದ್ಧೆ ಭಾರತಿಯವರು.

ಇವರ ಪ್ರಕಟಿತ ಕೃತಿಗಳು :

೧ ತಪಸ್ವಿನಿ (ಕಾವ್ಯ ನಾಟಕ)
೨ ಮಹಾಸತಿ ,,
೩ ವಾತ್ಸಲ್ಯತರಂಗಲೀಲ (ಕಾವ್ಯ ನಾಟಕ)
೪ ಅಹಲ್ಯಾ ,,
೫ ದೇಶಭಕ್ತಿ ಗೀತೆಗಳು (ಕವನ ಸಂಗ್ರಹ
೬ ರಾಷ್ಟ್ರಶಕ್ತಿ ,,
೭ ವೈಣಿಕ ಶಿಖಾಮಣಿ ಶೇಷಣ್ಣ (ವ ಕ್ತಿ ಚಿತ್ರ)
೮ ಆರ್ಯ ಕೈಲಾಸಂ ,,
೯ ಸ್ವರ್ಗ ನಿರಸನ (ಏಕಾಂಕ ನಾಟಕ)
೧೦ ಉನ್ಮತ್ತಭಾಮಿನಿ ,,
೧೧ ದುಂದುಭಿ ,,
೧೨ ಧ್ರುವ ,,
೧೩ ಭಾರತೀಯ ಸಂಗೀತ ದರ್ಶನ (ಪ್ರಬಂಧ)
೧೪ ಲೋಕಾಭಿರಾಮ (ಹರಟೆಗಳ ಸಂಗ್ರಹ)

ಅನೇಕ ತೆಲುಗು, ತಮಿಳು ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಪ್ರಕಟವಾಗದ ಇನ್ನೂ ಅನೇಕ ಕತೆ, ನಾಟಕ, ಕಾದಂಬರಿಗಳು ಅವರ ಬಳಿ ಇವೆ.

೧೯೬೭ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಇವರನ್ನು ಶ್ರೇಷ್ಠ ಸಾಹಿತಿ ಎಂದು ಗೌರವಿಸಿದೆ. ೧೯೮೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಲೇಖಕಿಯರ ಸಮ್ಮೇಳನದಲ್ಲಿ ಇವರನ್ನು ಸನ್ಮಾನಿಸಿದೆ.

೧೯೭೨ರಲ್ಲಿ "ಭಾರತಿ" ಗೌರವ ಗ್ರಂಥವನ್ನು ಇವರಿಗೆ ಸಮರ್ಪಿಸಲಾಯಿತು.



ಭಾರತಿ ಕೆ. ಎಸ್.

ಕೆ. ಎಸ್. ಭಾರತಿಯವರ ಸಾಹಿತ್ಯಾಸಕ್ತಿ ತಂದೆಯಿಂದ ರಕ್ತಗತವಾಗಿ ಬಂದದ್ದು. ಇವರು ಕಾದಂಬರಿಕಾರ ಶ್ರೀ ಶ್ರೀನಿವಾಸ ಉಡುಪರ ಮಗಳು.

ಇನ್ನೂ ಹದಿನೆಂಟರ ಪ್ರಾಯದಲ್ಲಿರುವ ಬಿ.ಎ. ವಿದ್ಯಾರ್ಥಿನಿ. ವಿದ್ಯಾಭ್ಯಾಸದೊಡನೆ ಸಾಹಿತ್ಯಾಭ್ಯಾಸವೂ ಜೊತೆಜೊತೆಯಲ್ಲಿ ನಡೆದಿದೆ.

ಇವರ ಪ್ರಕಟಿತ ಕೃತಿಗಳು :

೧ ಜೋಡಿ ಹೂಗಳು - (ಕಾದಂಬರಿ) - ೧೯೮೧
೨ ಮಧುಕಿರಣ ,, ,,
೩ ಮುಂಗಾರು ಮೋಡ ,, ,,

ಸಂಗೀತದಲ್ಲೂ ಸಮಾನ ಅಭಿರುಚಿಯುಂಟು.



ಭಾರತಿ ಬಿರಾದಾರ

ವಿಜಾಪುರ ಜಿಲ್ಲೆಯ ಸಿಂದಗಿಯಲ್ಲಿ ನೆಲಸಿರುವ ಭಾರತಿ ಬಿರಾದಾರ ಅವರು ವಿವಾಹದ ನಂತರ ಭಾರತಿ ಪಾಟೀಲ ಆಗಿದ್ದಾರೆ. ವಿದ್ಯಾರ್ಥಿದೆಸೆಯ ಲ್ಲಿರುವಾಗ ಅವರು ಪ್ರಕಟಿಸಿರುವ ಪುಸ್ತಕ :

"ಗುರುಕರುಣೆ" - ೧೯೭೫

ಇವರು ಸಾಹಿತಿ ಶಂ. ಗು. ಬಿರಾದಾರ ಅವರ ಪುತ್ರಿ.



ಭಾಷ್ಯಂ ತನುಜೆ

ಲಲಿತಾರವರು "ಭಾಷ್ಯಂ ತನುಜೆ" ಕಾವ್ಯನಾಮದಲ್ಲಿ ಬರೆಯುತ್ತಾರೆ. ಮೈಸೂರಿನಲ್ಲಿ ಜನಿಸಿದ ಇವರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಬಿ.ಎಸ್ಸಿ., ಬಿ.ಎ., ಪದವೀಧರೆಯಾಗಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಭೈರವಿ (ಕಥಾ ಸಂಕಲನ)
೨ ಸ್ವರ್ಗದೀಪ (ಅನುವಾದಿತ)

"ಭೈರವಿ" ಕಾದಂಬರಿ 'ಮಲ್ಲಿಗೆ' ಮಾಸಪತ್ರಿಕೆಯ ವಾರ್ಷಿಕ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿನಿಧಿ ಸ್ಪರ್ಧೆಯಲ್ಲಿ ಬಹುಮಾನ ಬಂದಿದೆ.

ಸಂಗೀತದಲ್ಲಿ ಆಸಕ್ತಿ, ಛಾಯಾಗ್ರಹಣದಲ್ಲಿ ಅಭಿರುಚಿ ಇದೆ. ಶೇಷಲತಾ ಸರ್ಕ್ಯುಲೇಟಿಂಗ್ ಲೈಬ್ರರಿ ಹಾಗೂ ಶೇಷಲತಾ ಪ್ರಕಾಶನವನ್ನು ನಡೆಸುತ್ತಿದ್ದಾರೆ.



ಮಂಗಳಾ ಚಿ. ನ.

ಚಿ. ನ. ಮಂಗಳಾರವರು ಬೆಂಗಳೂರಿನವರು. ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಆಂಗ್ಲ ಸಾಹಿತ್ಯದಲ್ಲಿ ಎಂ.ಎಂ. ಪದವೀಧರೆಯಾಗಿದ್ದಾರೆ. ಎನ್.ಎಂ.ಕೆ.ಆರ್.ವಿ. ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಅಭಾಗಿನಿ (ಕಾದಂಬರಿ)
೨ ಕಾವ್ಯಕಲ್ಪನೆ (ವಿಮರ್ಶಾತ್ಮಕ ಲೇಖನಗಳು)
೩ ಫ್ಲಾರೆನ್ಸ್ ನೈಟಿಂಗೇಲ್ (ಜೀವನ ಚರಿತ್ರೆ)
೪ ಎಲ್ಲರೂ ನನ್ನವರೆ (ಅನುವಾದಿತ ನಾಟಕ)

"ಹೆಲನ್ ಕೆಲರ್" ಗ್ರಂಥಕ್ಕೆ ರಾಜ್ಯ ಸರಕಾರದ ಬಹುಮಾನ ಬಂದಿದೆ. ಕ.ಸಾ.ಪ. ದಿಂದ "ಎಲ್ಲರೂ ನನ್ನವರೆ" ನಾಟಕಕ್ಕೆ ಮಲ್ಲಿಕಾ ಪ್ರಶಸ್ತಿ ದೊರೆತಿದೆ.

ಸಂಗೀತ, ಪತ್ರಿಕೋದ್ಯಮ, ಪ್ರವಾಸಗಳಲ್ಲಿ ಆಸಕ್ತಿ ಹೊಂದಿದ್ದಾರೆ.

೧೯೭೬ರಲ್ಲಿ "ಏಷ್ಯನ್ ಕಾನ್‌ಫರೆನ್ಸ್ ಫಾರ್ ವಿಮೆನ್ಸ್"ನಲ್ಲಿ ಭಾಗವಹಿಸಲು ಮಲೇಶಿಯಾಗೆ ಭೇಟಿ ನೀಡಿದ್ದರು. ೧೯೮೨ರಲ್ಲಿ ಫುಲ್ ಬ್ರೈಟ್ ಅನುದಾನದಲ್ಲಿ ಭಾರತದಿಂದ ಆಯ್ಕೆಯಾಗಿ ಅಮೆರಿಕಾ. ಇಂಗ್ಲೆಂಡ್‌ಗಳಿಗೆ ಭೇಟಿ ನೀಡಿದ್ದಾರೆ.

ಕನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಲಿಯ ಸದಸ್ಯೆಯಾಗಿದ್ದಾರೆ.



ಮಂಗಳಾ ಸತ್ಯನ್

ಹೊಳೆನರಸೀಪುರದಲ್ಲಿ ಜನಿಸಿದ ಮಂಗಳಾರವರು ಮೈಸೂರಿನಲ್ಲಿ ನೆಲೆಸಿದ್ದಾರೆ. ಕನ್ನಡ, ಹಿಂದಿ (ವಿಶಾರದೆ) ಭಾಷೆಗಳನ್ನು ಬಲ್ಲ ಇವರು ಕಾದಂಬರಿಗಾರ್ತಿ ಎಂದೇ ಹೆಸರಾಗಿದ್ದಾರೆ. ಇವರ ಅನೇಕ ಕಾದಂಬರಿಗಳು ಮರು ಮುದ್ರಣವನ್ನು ಕಂಡಿವೆ. ಅನೇಕ ಸ್ಮರಣ ಸಂಚಿಕೆಗಳನ್ನು ಸಂಪಾದಿಸಿದ್ದಾರೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿಗಳು :

೧ ಭಾಗ್ಯಜ್ಯೋತಿ
೨ ಮುಗ್ಧಮಾನವ
೩ ಹಣದ ಮಗಳು
೪ ಅರಸಿ ಬಂದವಳು
೫ ವಿಷದ ಒಡಲು
೬ ಆ ಮುಖ
೭ ವಂಚಿತೆ
೮ ಹೂವೆರಡು ಕೊನೆಯೊಂದು
೯ ನಿನಗಾಗಿ
೧೦ ಆದರ್ಶ ಪುರುಷ
೧೧ ಕಾನನದ ಕರುಣಾಳು
೧೨ ಬಂಗಾರ ಭೂಷಿತೆ
೧೩ ಉದಾರಶೀಲ
೧೪ ಅತಿಮಧುರ ಅನುರಾಗ
೧೫ ಸ್ವರ್ಗ ಸನ್ನಿಧಿ
೧೬ ಭಾಷೆಯ ಬಂಧನ
೧೭ ಅಮೃತಮಯಿ
೧೮ ಪ್ರೇಮದುಂಬಿ
೧೯ ಆಶಾದೀಪ
೨೦ ನವ ವಸಂತ
೨೧ ಪ್ರಣಯ ತಾಂಡವ
೨೨ ಪುತ್ರಕಾಮಿ

"ಭಾಗ್ಯಜ್ಯೋತಿ" ಮತ್ತು "ಮುಗ್ಧಮಾನವ" ಕಾದಂಬರಿಗಳು ಚಲನಚಿತ್ರ ವಾಗಿದೆ. ಮಕ್ಕಳ ಪ್ರತಿಭೆ ಗುರುತಿಸಿ "ಶ್ರೀ ಗಣೇಶ ಡ್ರಾಮಟಿಕ" ಪರವಾಗಿ ನಾಟಕವನ್ನಾಡಿಸುವ ಹವ್ಯಾಸವಿದೆ. ಅನೇಕ ಸಂಘ-ಸಂಸ್ಥೆಗಳ ಸದಸ್ಯರಾಗಿದ್ದಾರೆ ಹಾಗೂ ಸನ್ಮಾನಿತರಾಗಿದ್ದಾರೆ. ಆಕಾಶವಾಣಿಯಲ್ಲಿ ಇವರ ಅನೇಕ ಸಣ್ಣ ಕತೆಗಳು ಪ್ರಸಾರವಾಗಿವೆ.



ಮಧುರಾಬಾಯಿ ಎಂ.

ಉದಯೋನ್ಮುಖ ಲೇಖಕಿ ಎಂ, ಮಧುರಾಬಾಯಿಯವರ ಹುಟ್ಟೂರು ದಾವಣಗೆರೆ. ಮೂವತ್ತೇಳರ ಪ್ರಾಯದ ಇವರು ಹಿಂದೀ ರಾಷ್ಟ್ರಭಾಷಾ ಪ್ರವೀಣೆ. ಬಿ.ಎ. ಪದವೀಧರೆಯೂ ಹೌದು. ಉಪಾಧ್ಯಾಯನಿಯ ಉದ್ಯೋಗವನ್ನು ಕೈಗೊಂಡಿದ್ದಾರೆ. ಬಿಡುವಾದಾಗ ಕಾದಂಬರಿಗಳನ್ನು ಬರೆಯುವುದು ಇವರ ಪ್ರಿಯ ಹವ್ಯಾಸ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿಗಳು :

೧ ಆಶಾದೀಪ
೨ ಒಲವಿನ ಧಾರೆ
೩ ಗ್ರಹಣ ಬಿಟ್ಟಿತು
೪ ಪ್ರಿಯಾರಾಧನೆ



ಮಲ್ಲಿಕಾ

"ಮಲ್ಲಿಕಾ" ಎಂಬ ಅಭಿದಾನದಿಂದ ಬರೆಯುತ್ತಿರುವ ಲಕ್ಷ್ಮೀದೇವಿ ಕಡಿದಾಳ ಮಂಜಪ್ಪನವರು ಹಿರಿಯ ಲೇಖಕಿ. ಕಳೆದೆರಡು ದಶಕಗಳಿಂದ ಸಾಹಿತ್ಯರಂಗದಲ್ಲಿ ಇವರದು ಅವಿರತ ಸೇವೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿಗಳು ;

೧ ಜೀವನಗಂಗಾ-೧೯೬೬
೨ ಡಾ॥ ಅಘೋರಾ-೧೯೬೭
೩ ಡಾ॥ ಕಮಲೇಶ್-೧೯೫೯
೪ ವಂದೇಮಾತರಂ-೧೯೭೨
೫ ಅನಂತಾನಂದೆಡೆಗೆ-೧೯೭೨

ಕಥಾ ಸಂಕಲನ :

೬ ರತ್ನಗರ್ಭ ವಸುಂಧರಾ-೧೯೬೮
೭ ಬಹುರತ್ನ ವಸುಂಧರಾ-೧೯೬೮
೮ ಲಿಯೋನಾ-೧೯೭೦
೯ ಶ್ರೀಮುಖ-೧೯೭೨
೧೦ ವೈಶಾಖ ಪರ್ವ-೧೯೭೩

ಕಥಾ ಸಂಕಲನ :

೧೧ ಪೂಜಾವಸಾನ ಸಮಯ-೧೯೭೦
೧೨ ಧ್ಯಾನಾವಸಾನ ಸಮಯ-೧೯೭೦
೧೩ ಗಾನತೀರ್ಥ-೧೯೭೧
೧೪ ನಾದಬಿಂದು-೧೯೭೧
೧೫ ವಿಜಯನಾಥಾ-೧೯೭೧
೧೬ ತರಂಗಿಣಿ-೧೯೭೪

ಪೌರಾಣಿಕ ನಾಟಕ :

೧೭ ಪುಣ್ಯಪಯೋನಿಧಿ-೧೯೭೪
೧೮ ಪುಣ್ಯಾಭಿಸಾರ-೧೯೭೪
೧೯ ಕೃತಂಸ್ಮರ ಕ್ರುತುಂಸ್ಮರ (ಉಪನಿಷತ್ತಿನ ಕಥನ ಸಂಗ್ರಹ)-೧೯೭೭
೨೦ ಫಾಲ್ಗುಣೀ ಪರ್ವ

ಇವರು ರಚಿಸಿದ 'ಜೀವನ ಗಂಗಾ' ಕಾದಂಬರಿಗೆ ಸಾಹಿತ್ಯ ಅಕಾಡೆಮಿಯ ಬಹುಮಾನ ಲಭಿಸಿದೆ.

ಲೇಖಕಿಯರ ಉತ್ತಮ ಕೃತಿಗೆ ಪ್ರತಿವರ್ಷ ಬಹುಮಾನ ಕೊಡಲೆಂದು ಇವರು "ಮಲ್ಲಿಕಾ ಪ್ರಶಸ್ತಿ" ಎಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದು ದತ್ತಿನಿಧಿಯನ್ನೂ ಇಟ್ಟಿದ್ದಾರೆ.

ಕುಶಲಕಲೆ, ತೋಟಗಾರಿಕೆ ಇವರ ಹವ್ಯಾಸಗಳು.



“ಮಾತಂಗಿ”
(ಎಂ. ಪದ್ಮಾವತಿಬಾಯಿ)

“ಮಾತಂಗಿ” ಎಂಬ ಕಾವ್ಯನಾಮದಿಂದ ಸಾಹಿತ್ಯರಂಗಕ್ಕಿಳಿದಿರುವ ಪದ್ಮಾವತಿ ಬೆಂಗಳೂರಿನಲ್ಲಿ ೧೯೪೩ರಲ್ಲಿ ಜನಿಸಿದರು. ಕನ್ನಡ ಎಂ.ಎ. ಪದವೀಧರೆ. ಸರ್ಕಾರಿ ಸೇವೆಯಲ್ಲಿ ನಿರತರಾಗಿರುವ ಇವರ ಹವ್ಯಾಸಗಳು ಸಂಗೀತ ಹಾಗೂ ನಾಟಕ.

ಇವರ ಪ್ರಕಟಿತ ಕೃತಿಗಳು :

೧ ಹೊನಲು (ಕವನ ಸಂಕಲನ)-೧೯೭೬

೨ ಪುಟಾಣಿಗಳಿಗೊಂದು ಗುಟ್ಟು (ನಾಟಕ)-೧೯೭೮



ಮಾತೆ ಮಹಾದೇವಿ

ಶ್ರೀ ಜಗದ್ಗುರು ಮಾತೆ ಮಹಾದೇವಿಯವರು 'ಮಾತೆ ಮಹಾದೇವಿ' ಎಂಬ ಅಭಿದಾನದಿಂದ ಅನೇಕ ಕೃತಿಗಳನ್ನು ರಚಿಸಿದ್ದಾರೆ. ೧೯೪೬ರಲ್ಲಿ ಚಿತ್ರದುರ್ಗದಲ್ಲಿ ಹುಟ್ಟಿದ ಇವರು ಬಿ.ಎಸ್ಸಿ., ಎಂ.ಎ. ಪದವೀಧರೆ. ಇವರ ಸೇವಾರಂಗವೂ ಸಹ ಧಾರ್ಮಿಕ - ತತ್ವ ಪ್ರಚಾರ ಕ್ಷೇತ್ರ. ಪೀಠಾಧೀಶರಾದ ಇವರ ಕಾರ್ಯ ಧರ್ಮಪ್ರಸಾರ.

ಇವರು ಬರೆದ 'ಹೆಪ್ಪಿಟ್ಟ ಹಾಲು' ಕಾದಂಬರಿ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ ಗಳಿಸಿದೆ. 'ತರಂಗಿಣಿ' ಕಾದಂಬರಿ ಅಮ್ಮನಬಾವಿ ಸ್ಮಾರಕ ಬಹುಮಾನ ಪಡೆದಿದೆ

ಇವರ ಪ್ರಕಟಿತ ಕೃತಿಗಳು :

೧ ಮಾತೃವಾಣಿ (ಭಾವಗೀತೆ) - ೧೯೬೫
೨ ವಿರಹ ತರಂಗ ,, ೧೯೬೬
೩ ಗಂಗಾ ತರಂಗ ,, ೧೯೭೨
೪ ಭಾವಗೀತೆಗಳ ಸಂಕಲನ)
೫ ಶಿವಯೋಗಿಣಿ (ಚರಿತ್ರೆ) - ೧೯೬೭
೬ ಬಸವ ತತ್ವದರ್ಶನ - ೧೯೬೭
೭ ವಚನ ಸುಧಾ - ೧೯೬೭
೮ ಹಿಂದೂ ಯಾರು ? -೧೯೬೯
೯ ಮಾತೃ ಹರಕೆ - ೧೯೭೨
೧೦ ಕಲ್ಯಾಣ ಕ್ರಾಂತಿ - ೧೯೭೩
೧೧ ದೇವರ ಮಕ್ಕಳು - ೧೯೭೩
೧೨ ಪತಿತೋದ್ಧಾರಕ - ೧೯೭೩

೧೩ ಲಿಂಗಾಯಿತ ಧರ್ಮ ಕೈ ಪಿಡಿ – ೧೯೭೩

೧೪ ದೇವನಡೆಗೆ ೧೯೭೩

೧೫ ಅನುಭವ ಮಂಟಪ

೧೬ ವಿಶ್ವ ವಿಭೂತಿ ಬಸವಣ್ಣ (ವ್ಯಕ್ತಿಪರಿಚಯ) - ೧೯೭೭

೧೭ ಬಸವಣ್ಣನವರ ದೀಕ್ಷಾ ಗುರು ಯಾರು ? (ಸಂಶೋಧಕ ಪ್ರಬಂಧ) ೧೯೮೦

೧೮ ಆಧ್ಯಾತ್ಮ ಮತ್ತು ಮಹಿಳೆ

೧೯ ಪಂಚಧಾರೆ

೨೦ ಸ್ಫುರಣ ಕಿರಣ

೨೧ ತರಂಗಿಣಿ (ಕಾದಂಬರಿ) ೧೯೭೫

೨೨ ಹೆಪ್ಪಿಟ್ಟ ಹಾಲು - ೧೯೭೩

೨೩ ವಿಶ್ವಗುರು ಬಸವಣ್ಣ - ೧೯೮೦

೨೪ ಒಲಿದು ಹಾಡಿನ ಗೀತೆ - ೧೯೮೦

೨೫ ಇಷ್ಟಲಿಂಗ ಜನಕ ವಿಶ್ವಗುರು ಬಸವಣ್ಣ - ೧೯೮೦

೨೬ ಸತ್ಯ-ಸಂದೇಹ-ಸಮಾಧಾನ

೨೭ ವಿಶ್ವಜ್ಯೋತಿ ಬಸವಣ್ಣ

೨೮ ಹರಳಯ್ಯ - ಮಧುವಯ್ಯ - ೧೯೭೮

೨೯ ಅಲ್ಲಮ ಪ್ರಭು - ೧೯೭೮

ಇದಲ್ಲದೆ ಇಂಗ್ಲಿಷ್ ಭಾಷೆಯಲ್ಲೂ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಜೊತೆಗೆ ಹಲವಾರು ಕೃತಿಗಳನ್ನು ಸಂಪಾದಿಸಿದ್ದಾರೆ. "ಹರಳಯ್ಯ ಮಧುವಯ್ಯ" "ಅಲ್ಲಮ ಪ್ರಭು" ಕುರಿತು ಮಕ್ಕಳ ಪುಸ್ತಕಗಳನ್ನು ಬರೆದಿದ್ದಾರೆ. "ಕಲ್ಯಾಣ ಕಿರಣ" ಎಂಬ ಮಾಸ ಪತ್ರಿಕೆಯೂ ಇವರ ಸಂಪಾದಕತ್ವದಿಂದ ಹೊರಬರುತ್ತಿದೆ.



ಮಾಲತಿ ಎ.ಪಿ.

ಉತ್ತರ ಕನ್ನಡದಲ್ಲಿರುವ ಭಟ್ಕಳದ ಮಾಲತಿಯವರು ಪಿ.ಯು.ಸಿ.ವರೆಗಿನ ವಿದ್ಯಾಭ್ಯಾಸ ಮಾಡಿ ಗೃಹಿಣಿಯ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಹತ್ತಾರು ಕಾದಂಬರಿಗಳನ್ನು ರಚಿಸಿದ್ದಾರೆ.

'ಗಾಮೀಣ ಮಹಿಳೆಯರು' ಮಹಿಳಾವರ್ಷದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಬಹುಮಾನ ಪಡೆದ ಪುಸ್ತಕ "ಅನಿಶ್ಚಯ". ೧೯೭೮ರ ಉತ್ತಮ ಮಹಿಳಾ ಕಾದಂಬರಿ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಪಾರಿತೋಷಕ ಪಡೆದಿದೆ. ಹಾಗೂ ೧೯೭೮ರ ಕರ್ನಾಟಕ ವಿದ್ಯಾವರ್ಧಕ ಹಾಗೂ ಧಾರವಾಡದ ತಮ್ಮಣರಾವ್ ಅಮ್ಮಿನಭಾವಿ ಸ್ಮಾರಕ ದ್ವಿತೀಯ ಬಹುಮಾನ ಲಭಿಸಿದೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿ :

೧ ಸೋಲಿನಲ್ಲಿ ಗೆಲವು - ೧೯೬೯

೨ ಅರ್ಧಾಂಗಿ - ೧೯೭೩

೩ ಆಘಾತ - ೧೯೭೫

೪ ಅತೃಪ್ತ - ೧೯೭೮

೫ ಅನಿಶ್ಚಯ - ೧೯೭೮

೬ ಹೊಸ ಹೆಜ್ಜೆ - ೧೯೭೯

೭ ಸರಿದ ತೆರೆ – ೧೯೮೦

೮ ಪುನರ್ಮಿಲನ - ೧೯೮೧

೯ ಹಳ್ಳಿಗೆ ಬಂದ ಎಳೆಯರು (ಮಕ್ಕಳ ಪುಸ್ತಕ) - ೧೯೭೯

೧೦ ಗ್ರಾಮೀಣ ಮಹಿಳೆಯರು (ಪ್ರಬಂಧ ಸಾಹಿತ್ಯ) - ೧೯೭೫

೧೧ ಸುಖದ ಹಾದಿ (ಪ್ರಬಂಧ ಸಾಹಿತ್ಯ) - ೧೯೮೧



ಮಾಲತಿ ಪಟ್ಟಣಶೆಟ್ಟಿ

ಮಹಾರಾಷ್ಟ್ರದ ಕೊಲ್ಲಾಪುರ ಮಾಲತಿಯವರ ಹುಟ್ಟೂರು. ಎಂ.ಎ. ಪದವೀಧರೆಯಾಗಿ ಧಾರವಾಡದ ಜೆ.ಎಸ್.ಎಸ್. ಮಹಾವಿದ್ಯಾಲಯದಲ್ಲಿ ಅಧ್ಯಾಪನ ವೃತ್ತಿ ಕೈಗೊಂಡಿದ್ದಾರೆ.

ಇವರ ಪ್ರಕಟಿತ ಕೃತಿಗಳು :

ಬಾ ಪರೀಕ್ಷೆಗೆ (ಕವನ ಸಂಕಲನ) - ೧೯೭೬
ಗರಿಗೆದರಿ ,, - ೧೯೮೧

ಚಿತ್ರಕಲೆ, ಸಂಗೀತ, ಗೃಹಾಲಂಕಾರ, ಸಮಾಜಕಾರ್ಯದಲ್ಲಿ ಆಸಕ್ತಿ ಹೊಂದಿದ್ದಾರೆ.



ಮಾಲಾ ಜಿ. ರಾವ್

ಬೆಂಗಳೂರಿನ ಮಾಲಾ ಹಿಂದಿ ರಾಷ್ಟ್ರಭಾಷಾ ಪ್ರವೀಣರಾಗಿದ್ದಾರೆ., ಕತೆ, ಕಾದಂಬರಿ ಓದುವ ಹಾಗೂ ಬರೆಯುವ ಹವ್ಯಾಸ ಅವರದು. ಸಂಗೀತದಲ್ಲಿಯೂ ಆಸಕ್ತಿಯಿದೆ.

ಇವರ ಪ್ರಕಟಿತ ಕೃತಿ :

ಹೂಗೊಂಚಲು (ಕಥಾ ಸಂಕಲನ) - ೧೯೭೯

ಮುಕ್ತಾ ಸಿ. ಎನ್

ಚಿತ್ರದುರ್ಗದಲ್ಲಿ ಜನಿಸಿದ ಮುಕ್ತಾ ಬಿ.ಎ., ಬಿ.ಎಡ್., ತೆಲುಗು ಡಿಪ್ಲೊಮಾ ಮಾಡಿಕೊಂಡು ಪ್ರೌಢಶಾಲೆಯಲ್ಲಿ ಉಪಾಧ್ಯಾಯಿನಿಯಾಗಿ ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ.

ಅನೇಕ ಕತೆ, ಕಾದಂಬರಿಗಳನ್ನು ಬರೆದಿದ್ದಾರೆ, ಅವು ನಾಡಿನ ವಾರ ಹಾಗೂ ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಪ್ರಕಟಿತ ಕಾದಂಬರಿಗಳು :

೧ ಆಶ್ರಯ ೧೯೭೭
೨ ಮರೀಚಿಕೆ - ೧೯೭೯
೩ ಪ್ರೇಮ ಸಂಗಮ - ೧೯೮೧
೪ ವಿಮುಕ್ತಿ - ೧೯೮೧

ಕೆಲವು ಧಾರಾವಾಹಿಯಾಗಿ ಪ್ರಕಟವಾಗುತ್ತಲಿವೆ.



ಯಮುನಾಮೂರ್ತಿ

"ಯಾಮಿನೀ" ಎಂದು ಆಕಾಶವಾಣಿಯ ಕೇಳುಗರಿಗೆ ಸುಪರಿಚಿತರಾಗಿರುವ ಯಮುನಾಮೂರ್ತಿಯವರು ಬಿ.ಎಸ್.ಸಿ., ಪದವೀಧರೆ. ನೃತ್ಯ, ನಾಟಕಾಭಿನಯ ದಲ್ಲಿ ಹೆಸರಾಗಿದ್ದಾರೆ. ಬಾನುಲಿಯ ನಾಟಕ ನಿರ್ಮಾಪಕಿಯಾಗಿ ಧಾರವಾಡದಲ್ಲಿ ಕೆಲಸ ಮಾಡುತ್ತಿದ್ದಾರೆ.

ಪ್ರಕಟಿತ ಕೃತಿ :

ನಂಜುನೇಹ (ಮನೋವೈಜ್ಞಾನಿಕ ಕಾದಂಬರಿ) ೧೯೭೦

ಹದಿನೈದು ದೀರ್ಘಾವಧಿಯ ನಾಟಕಗಳು, ಐವತ್ತಕ್ಕೂ ಹೆಚ್ಚಿನ ಕಿರು ನಾಟಕ ಗಳು, ಕೆಲವು ಕತೆ, ಹರಟೆಗಳು ಆಕಾಶವಾಣಿಗಾಗಿಯೇ ಬರೆದು ಪ್ರಸಾರಗೊಂಡಿವೆ. ಕೆಲವು ಬಹುಮಾನಗಳನ್ನು ಗಳಿಸಿವೆ.



ಯಶೋಧರಾಆತ್ಮಾನಂದಭಟ್

ಮಂಗಳೂರಿನ ಯಶೋಧರಾರವರು ಕನ್ನಡ, ಕೊಂಕಣಿ, ಆಂಗ್ಲಭಾಷೆಗಳ ಪರಿಣಿತೆ. ಮದ್ರಾಸ್ ವಿಶ್ವವಿದ್ಯಾಲಯದ ಬಿ.ಎ.ಪದವೀಧರೆ. ಮುಂಬಯಿ ಮದ್ರಾಸುಗಳಲ್ಲಿದ್ದು ನಗರ ಜೀವನದ ಅನುಭವ ಪಡೆದಿದ್ದಾರೆ. ಸದ್ಯಕ್ಕೆ ಕೇರಳದ ತಿರುವನಂತಪುರದ ಉಳ್ಳೂರಿನಲ್ಲಿ ನೆಲೆಸಿದ್ದಾರೆ.

ಇವರ ಪ್ರಕಟಿತ ಸಂಕಲನ ;

ಆಕಾಶ ಬಾಣಗಳು - ೧೯೭೭

ಅನೇಕ ಕಥೆ - ಕವನಗಳನ್ನು ಬರೆದಿದ್ದಾರೆ. ಬಹುಮಾನ ಗಳಿಸಿದ್ದಾರೆ. ನಾಟಕಗಳಲ್ಲಿ ನಟಿಸುವ ಹವ್ಯಾಸ, ಸಂಗೀತ. ನೃತ್ಯ, ಪಾಕಶಾಸ್ತ್ರಗಳಲ್ಲಿ ಅಭಿರುಚಿ ಇದೆ. ನಲ್ವತ್ತರ ದಶಕದಲ್ಲಿರುವ ಇವರು ಪಾಠ ಹೇಳಿಕೊಡುತ್ತಿದ್ದಾರೆ. ಆಕಾಶವಾಣಿಯ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.



ಯಶೋಧರಾ ಎಚ್. ಬಿ.

ಯಶೋಧರಾರವರು ಕೇವಲ ವಿಮರ್ಶಾತ್ಮಕ ಲೇಖನಗಳನ್ನೇ ಬರೆದು, ಸಂಕಲನ ರೂಪದಲ್ಲಿ ಪ್ರಕಟಿಸಿದ್ದಾರೆ. ಹಾಸನದಲ್ಲಿ ಜನಿಸಿದ ಇವರು ಈಗ ಮೈಸೂರಿನಲ್ಲಿ ನೆಲೆಸಿದ್ದಾರೆ. ಕನ್ನಡ ಎಂ.ಎ. ಪದವೀಧರೆಯಾಗಿ ಪಿ.ಎಚ್.ಡಿ. (ಕನ್ನಡದಲ್ಲಿ ಯಕ್ಷಗಾನ ಸಾಹಿತ್ಯ) ಮಾಡುತ್ತಿದ್ದಾರೆ. ಇವರು ಬರೆದ "ಕುವೆಂಪು ಸಾಹಿತ್ಯ ಚಿಂತನ" (೧೯೭೬ರಲ್ಲಿ) ಶ್ರೀ ಕುವೆಂಪುರವರ ೭೪ನೇ ಜನ್ಮದಿನೋತ್ಸವದಂದು ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ನ ಬಹುಮಾನ ಹಾಗೂ ೧೯೮೧ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾ ವಿಮರ್ಶಾ ಕೃತಿಯ ಬಹುಮಾನವನ್ನು ಪಡೆದಿದೆ.

ಇವರ ಪ್ರಕಟಿತ ಕೃತಿಗಳು :

೧ ಸಿಂಚನ (ವಿಮರ್ಶಾ ಸಂಕಲನ) - ೧೯೭೮

೨ ಕುವೆಂಪು ಸಾಹಿತ್ಯ ಚಿಂತನ (ವಿಮರ್ಶಾ ಸಂಕಲನ) - ೧೯೭೯

ಜನಪದ ಸಾಹಿತ್ಯದಲ್ಲಿ ಹೆಚ್ಚು ಅಭಿರುಚಿ ಇರುವುದರಿಂದ ಹಳ್ಳಿಗಳಲ್ಲಿ ಸಂಚರಿಸಿ ಜಾನಪದ ಮಹತ್ವದ ವಸ್ತುಗಳನ್ನು ಸಂಗ್ರಹಿಸುವ ಆಸಕ್ತಿ ಇದೆ.



ರತ್ನಮ್ಮ ಸುಂದರರಾವ್

ಬೆಂಗಳೂರಿನ ರತ್ನಮ್ಮನವರು ಕಾವ್ಯವಾಚನದ ಅಭಿರುಚಿಯೊಂದಿಗೆ ಸಾಹಿತ್ಯ ಸೃಷ್ಟಿಯನ್ನು ಮೈಗೂಡಿಸಿಕೊಂಡಿದ್ದಾರೆ. ಅನೇಕ ಕತೆ, ಪ್ರಬಂಧ, ಲೇಖನಗಳಿಗೆ ಬಹುಮಾನಗಳನ್ನು ಪಡೆದಿದ್ದಾರೆ. ೧೯೭೫ರ ಮಹಿಳಾ ವರ್ಷದಲ್ಲಿ ಇವರ "ಮಹಿಳೆ ಮತ್ತು ಸಾಕ್ಷರತೆ" ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ ಪಡೆದಿದೆ. ಸಾಗರದ ಬರಹಗಾರ ಮಂಡಳಿಯ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಕನ್ನಡಾಂಬೆಯ! ಅಡಿಗಳಲ್ಲಿ (ಕಾದಂಬರಿ)

೨ ಶ್ರೀ ಶಂಕರ ಕಥಾಮೃತ (ಜೀವನ ಚರಿತ್ರೆ)

೩ ಮಹಿಳೆ ಮತ್ತು ಸಾಕ್ಷರತೆ

ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಕತೆ, ಪ್ರಬಂಧಗಳು ಪ್ರಕಟವಾಗಿದೆ. ಆಕಾಶವಾಣಿಯಲ್ಲಿ ನಾಟಕಗಳೂ ಪ್ರಸಾರವಾಗಿವೆ. "ಗಮಕ ವಿದುಷಿ" ಎಂಬ ಅಭಿಧಾನ, ಗಮಕ ಪ್ರೌಢ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಇವರದು.



ರಮಾದೇವಮ್ಮ ಎಸ್.ಕೆ.

ಮೈಸೂರಿನ ರಮಾದೇವಮ್ಮನವರು ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಎಂ.ಎ., ಬಿ.ಎಲ್. ಪದವೀಧರೆ. ಜೊತೆಗೆ ಹಿಂದಿ ರಾಷ್ಟ್ರಭಾಷಾ ವಿಶಾರದೆ. ಸಂಸದೀಯ ಇಲಾಖೆಯ ಅಧೀನ ಕಾರ್ಯದರ್ಶಿಯಾಗಿ ವಿಧಾನಸೌಧದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ನಾಯಿಕೆ (ಕಾದಂಬರಿ) - ೧೯೮೦

೨ ರಷ್ಯಾದೇಶದ ಮಕ್ಕಳ ಕಥೆಗಳು

ಕಛೇರಿಯಲ್ಲಿ ಕನ್ನಡ ಬಳಸಿದ್ದಕ್ಕಾಗಿ ೧೯೭೭ರಲ್ಲಿ ಬಹುಮಾನ ಪಡೆದಿದ್ದಾರೆ. ಅನೇಕ ಪ್ರಬಂಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ.

ಬರವಣಿಗೆ, ನಾಟಕ ವೀಕ್ಷಣೆಯ ಅಭಿರುಚಿ ಇದೆ. ಸಂಸ್ಕೃತ, ಫ್ರೆಂಚ್ ಭಾಷೆಗಳ ಪರಿಚಯವಿದೆ.



ರಾಜಲಕ್ಷ್ಮಿ ತಿರುನಾರಾಯಣ

ಬೆಂಗಳೂರು ವಿಶ್ವವಿದ್ಯಾನಿಲಯದ ನೃತ್ಯ, ನಾಟಕ ಹಾಗೂ ಸಂಗೀತ ವಿಭಾಗದಲ್ಲಿ ವೀಣೆಯ ಪ್ರಾಧ್ಯಾಪಕಿಯಾಗಿದ್ದಾರೆ, ರಾಜಲಕ್ಷ್ಮಿಯವರು ಸಂಗೀತದಲ್ಲಿ ಅಭಿರುಚಿ ಬೆಳಸಿಕೊಂಡು ಅನೇಕ ಸಾರ್ವಜನಿಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಆಕಾಶವಾಣಿಯ ಪ್ರಥಮ ದರ್ಜೆಯ (ಎ ಗ್ರೇಡ್ ಆರ್ಟಿಸ್ಟ್) ಕಲಾವಿದೆ ಎನಿಸಿದ್ದಾರೆ. ಸಂಗೀತದಲ್ಲಿ ಅಪಾರ ಜ್ಞಾನವನ್ನು ತಮ್ಮದಾಗಿಸಿಕೊಂಡು ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಗಾನಶಾಸ್ತ್ರ - ೧೯೭೫

೨ ವೀಣಾ ಧನಮ್ಮಾಳ್ - ೧೯೮೧

"ವಾಗ್ಗೇಯ ವೈಭವ" ಪ್ರಕಟಣೆಯ ಹಂತದಲ್ಲಿದೆ.

ಸಂಗೀತ ವಿದುಷಿಯಾಗಿ ಸಂಗೀತಕ್ಕೆ ಸಂಬಂಧಿಸಿದ ಕೃತಿಗಳನ್ನು ರಚಿಸಿದ್ದಾರೆ.

ರಾಜಲಕ್ಷ್ಮಿ ಎನ್. ರಾವ್

ಇಂಗ್ಲಿಷ್ ಸಾಹಿತ್ಯದಲ್ಲಿ ಬಿ.ಎ. ಪದವೀಧರೆ, ಬಿ. ಎಂ. ಶ್ರೀಕಂಠಯ್ಯನವರ ಮೊಮ್ಮಗಳು.

ಇವರ ಪ್ರಕಟಿತ ಕೃತಿ :

ಸಂಗಮ (ಕಥಾ ಸಂಕಲನ)

ಅವರ ಬಗೆಗೆ ಹೆಚ್ಚಿನ ವಿವರಗಳು ತಿಳಿದುಬಂದಿಲ್ಲ. ಹೃಷಿಕೇಷದಲ್ಲಿದ್ದಾರೆಂಪು ಹೇಳಿಕೆ ಇದೆ.



ರಾಧಾಮೂರ್ತಿ

ಚಿಕ್ಕಂದಿನಲ್ಲಿಯೇ ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಿಕೊಂಡ ರಾಧಾರವರ ಜನ್ಮಸ್ಥಳ ತುಮಕೂರು. ಚಿಕ್ಕಕತೆ, ಕವನಗಳಿಂದ ಪ್ರಾರಂಭಿಸಿ ಲೇಖನ, ಕಾದಂಬರಿಗಳ ಕ್ಷೇತ್ರಕ್ಕೂ ಕಾಲಿರಿಸಿದ್ದಾರೆ. ನಗೆ ಬರಹಗಳಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಉಡುಗೊರೆ (ಸಣ್ಣಕತೆಗಳ ಸಂಕಲನ)

೨ ಓದಿ ನಕ್ಕುಬಿಟ್ಟೀರಿ ಜೋಕೆ (ನಗೆ ಬರಹ)

೩ ನಗ್ನ ಕುಂಚ

ಈ ಕೃತಿಗಳು ನಿಯತಕಾಲಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿ ನಂತರ ಪುಸ್ತಕ ರೂಪದಲ್ಲಿ ಹೊರಬಂದಿವೆ. "ತಿಮ್ಮಪ್ಪನ ಅಹವಾಲು" ಎಂಬ ವಿಡಂಬನಾ ಕೃತಿಗೆ ಬಹುಮಾನ ಸಂದಿದೆ.



ರುಕ್ಮಿಣಿ ಗಿರಿಮಾಜಿ

ಬೆಂಗಳೂರಿನಲ್ಲಿರುವ ರುಕ್ಮಿಣಿ ಗಿರಿಮಾಜಿಯವರು "ಪ್ರತಿಭಾ" ಕಾವ್ಯನಾಮದಲ್ಲಿ ಸಹ ಬರೆಯುತ್ತಾರೆ. ಕನ್ನಡ ಎಂ.ಎ., ಪದವೀಧರೆ. ಹಿಂದಿ ರಾಷ್ಟ್ರಭಾಷಾ ಪ್ರವೀಣೆಯಾಗಿದ್ದಾರೆ. ಪ್ರೌಢಶಾಲಾ ಉಪಾಧ್ಯಾಯಿನಿಯಾಗಿ ಕಾರ್ಯ ನಿರ್ವಹಿಸುತ್ತ ಇತ್ತೀಚೆಗೆ ನಿವೃತ್ತರಾಗಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಗೀತಾ ದರ್ಶನ (ಪದ್ಯರೂಪ)
೨ ಗಾಂಧೀಜಿ (ಮಕ್ಕಳಿಗಾಗಿ ಜೀವನ ಚರಿತ್ರೆ)
೩ ಗುರು ರಾಘವೇಂದ್ರ (ಭಕ್ತಿ ಸಾಹಿತ್ಯ)
೪ ಬೆಂಗಳೂರಿನಿಂದ ಬದರಿನಾಥಕ್ಕೆ (ಪ್ರವಾಸ ಸಾಹಿತ್ಯ)

ಇವರ ಅನೇಕ ಸಣ್ಣಕತೆ, ಲೇಖನಗಳು ಪತ್ರಿಕೆಯಲ್ಲಿ ಪ್ರಕಟವಾಗಿ, ಆಕಾಶ ವಾಣಿಯಲ್ಲಿ ಪ್ರಸಾರವಾಗಿವೆ. ದಾಸ ಸಾಹಿತ್ಯದಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಅನೇಕ ಸಂಘ ಸಂಸ್ಥೆಗಳ ಸದಸ್ಯರಾಗಿದ್ದಾರೆ. ಭಕ್ತಿಪಂಥದಲ್ಲಿ ಆಸಕ್ತಿ ಹೊಂದಿದ್ದಾರೆ.



ರೇಖಾ ಕಾಖಂಡಕಿ (ಕುಲಕರ್ಣಿ)

ರೇಖಾ ಕುಲಕರ್ಣಿ ಎಂಬ ಹೆಸರಿನಲ್ಲಿ ಬರೆಯುತ್ತಿದ್ದ ರೇಖಾರವರು ವಿವಾಹಾ ನಂತರ ರೇಖಾ ಕಾಖಂಡಕಿ ಎಂದು ಬರೆಯುತ್ತಿದ್ದಾರೆ. ಬಾಗಲಕೋಟೆಯಲ್ಲಿ ಜನಿಸಿದ ಇವರು ಬಿ.ಎ., ಪದವೀಧರೆಯಾಗಿ, ಈಗ ಬೆಂಗಳೂರಿನಲ್ಲಿದ್ದಾರೆ. ಗೃಹಕಾರ್ಯ ದೊಂದಿಗೆ ಬರವಣಿಗೆ ಇವರ ಆಸಕ್ತಿಯ ಕ್ಷೇತ್ರವಾಗಿದೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿಗಳು :

೧ ಬಂಧನ-೧೯೭೭

೨ ಅರುಣರಾಗ-೧೯೮೦

೩ ಕೋಟೆ-೧೯೮೦

"ಮಲ್ಲಿಗೆ" ಮಾಸಪತ್ರಿಕೆಯ ಕಾದಂಬರಿ ಸ್ಪರ್ಧೆಯಲ್ಲಿ ಇವರ "ಕೋಟೆ" ಕಾದಂಬರಿಗೆ ಪ್ರಥಮ ಬಹುಮಾನ ಬಂದಿದೆ.



ಲಕ್ಷ್ಮಮ್ಮ ಎಂ. ಆರ್.

ಬೆಂಗಳೂರಿನಲ್ಲಿ ನೆಲೆಸಿರುವ ಎಂ. ಆರ್. ಲಕ್ಷ್ಮಮ್ಮನವರು ಎಂ. ಎ., ಪದವೀಧರೆಯಾಗಿ ಪತ್ರಿಕೋದ್ಯಮದಲ್ಲಿ ವಿಶಿಷ್ಟವಾದ ಸೇವೆ ಸಲ್ಲಿಸಿರುವ ಮಹಿಳೆಯಾಗಿದ್ದಾರೆ. "ಬೆಳಕು" ಪತ್ರಿಕೆಯ ಸಂಪಾದಕಿಯಾಗಿ ಎರಡು ವರ್ಷ, "ಸೋದರಿ" ಮಹಿಳಾ ವಾರಪತ್ರಿಕೆಯ ಸಂಪಾದಕಿಯಾಗಿ ಹತ್ತು ವರ್ಷ ಕೆಲಸ ಮಾಡಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಟಿಪ್ಪುವಿನ ಮದುವೆ (ಏಕಾಂಕ ನಾಟಕ)
೨ ಕುಂತೀದೇವಿ (ವಯಸ್ಕರ ಶಿಕ್ಷಣದ ಚಿಕ್ಕ ಹೊತ್ತಿಗೆ)

"ಟಿಪ್ಪುವಿನ ಮದುವೆ" ಕನ್ನಡ ಸಾಹಿತ್ಯ ಪರಿಷತ್ತಿನ ನಾಟಕ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದೆ. "ಕುಂತೀದೇವಿ" ಎಲ್.ಎಸ್. ವೆಂಕಾಜಿರಾವ್ ಬಹುಮಾನ ಪಡೆದಿವೆ.

"ಸೋದರಿ" ಪತ್ರಿಕೆ–ಪತ್ರಿಕೋದ್ಯಮಕ್ಕಾಗಿರುವ ಜನಪ್ರಗತಿಯ ಬಿ.ಎನ್. ಗುಪ್ತ ಅವರ ಬಹುಮಾನ ಗಳಿಸಿದೆ,

ಸಮಾಜಸೇವೆ, ಗ್ರಾಹಕರ ಸಂಘಟನೆ ಇತ್ಯಾದಿಗಳಲ್ಲಿ ನಿರತರಾದ ಇವರು ಅನೇಕ ಲೇಖನಗಳನ್ನು ಪತ್ರಿಕೆಗಳಲ್ಲಿ ಬರೆದಿದ್ದಾರೆ.



ಲಕ್ಷ್ಮಿ ಸಿ. ಕೆ.

ಕಾಸರಗೋಡಿನ ಮುಕ್ರುಂಪಾಡಿ ಲಕ್ಷ್ಮಿಯವರ ಜನ್ಮಸ್ಥಳ. ಬಿ.ಎ., ಬಿ.ಎಚ್. ಪದವೀಧರೆಯಾಗಿ ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಪತ್ರಿಕೆಗಳಲ್ಲಿ ಇವರ ಕತೆ, ಕವನ, ವಿಮರ್ಶೆ ಪ್ರಕಟಗೊಂಡಿವೆ.

ಪ್ರಕಟಿತ ಕೃತಿಗಳು :

೧ ಮುರಲಿಗಾನ (ಮಕ್ಕಳ ಪದ್ಯಗಳು)

೨ ಕನ್ನಡಿ ,,

೩ ನಾರಾಯಣೀಯಂ (ಅನುವಾದ)

ಯಕ್ಷಗಾನ ನೋಡುವ, ಪುರಾಣ ವಾಚನ ಮಾಡುವ ಹವ್ಯಾಸವನ್ನಿರಿಸಿ ಕೊಂಡಿದ್ದಾರೆ,



ಲಕ್ಷ್ಮಿ ವಿ. ವಿ.

ಬೆಂಗಳೂರುನಗರ ಸಭೆಯ ವಿದ್ಯಾ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಲಕ್ಷ್ಮಿಯವರು ಬರವಣಿಗೆಯನ್ನು ತಮ್ಮ ಹವ್ಯಾಸವನ್ನಾಗಿ ಮಾಡಿಕೊಂಡಿದ್ದಾರೆ. ಬಿ.ಕಾಂ. ಪದವೀಧರೆಯಾಗಿದ್ದು ಸಾಹಿತ್ಯದ ಕೃಷಿ ನಡೆಸಿದ್ದಾರೆ. ಉದ್ಯೋಗಸ್ಥ ಮಹಿಳೆಯ ಅನುಭವ ಪಡೆದಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಮಾಲಿನಿ (ಕಾದಂಬರಿ) – ೧೯೭೧

೨ ಬಾಳಪಲ್ಲವಿ ,, – ೧೯೭೨

೩ ಹಂಬಲದ ಫಲ ,, - ೧೯೭೭

೪ ತಬ್ಬಲಿ ಯಾರು (ಕಾದಂಬರಿ-ಭಾಗ ೧ ಮತ್ತು ೨) - ೧೯೭೭

೫ ಅರುಣೋದಯ - ೧೯೮೦

ಕೆಲವು ಸಣ್ಣ ಕತೆ, ಕವನಗಳು ಕನ್ನಡ ಪತ್ರಿಕೆಗಳಲ್ಲಿ ಅಚ್ಚಾಗಿವೆ. ಅಟ ತೋಟಗಾರಿಕೆಯ ಹವ್ಯಾಸವನ್ನಿಟ್ಟುಕೊಂಡಿದ್ದಾರೆ.



ಲಕ್ಷ್ಮೀಬಾಯಿ ಬಮ್ಮನಹಳ್ಳಿ

'ಸೀತಾಸುತೆ' ಎನ್ನುವ ಕಾವ್ಯನಾಮದಲ್ಲಿ ಸಾಹಿತ್ಯ ರಚನೆಗೆ ತೊಡಗಿರುವ ಲಕ್ಷ್ಮೀಬಾಯಿ ಬಮ್ಮನಹಳ್ಳಿ ವಿಜಾಪುರದ ಜಿಲ್ಲೆಯವರು. ಗೃಹಕೃತ್ಯದೊಂದಿಗೆ ಸಮಾಜಸೇವೆ, ಸಾಹಿತ್ಯ ರಚನೆಯೂ ಪ್ರಿಯವಾದ ಹವ್ಯಾಸಗಳು. ಸಂಗೀತದಲ್ಲಿ ಪರಿಶ್ರಮವೂ ಉಂಟು.

ಇವರ ಪ್ರಕಟಿತ ಕೃತಿಗಳು :

೧ ಗಾನಸಿರಿ (ಕವನ ಸಂಕಲನ) - ೧೯೭೮

೨ ಬಾಲಸುಮ (ಮಕ್ಕಳ ಗೀತೆ) - ೧೯೭೯

೩ ಗೀತ ಗುಚ್ಛ (ಕವನ ಸಂಕಲನ) - ೧೯೮೦

೪ ಇವರೆಲ್ಲ ಗುಡಸರೇ ? (ಕಥಾ ಸಂಕಲನ) -೧೯೮೧

ಲೇಖನ, ಅಭಿನಯಗಳಲ್ಲಿ ಪ್ರಶಸ್ತಿ ಪಡೆದಿರುವ ಲಕ್ಷ್ಮೀಬಾಯಿಯವರು ಯುವತಿ ತಂಡದ ಮುಂದಾಳುವೂ ಆಗಿದ್ದು, ಪ್ರತಿಭಾ ಯುವತಿ ಮಂಡಳದಲ್ಲಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ರೈಫಲ್ ತರಬೇತಿ, ಸೇವಾ ದಳದಲ್ಲಿ ಎ.ಐ.ಸಿ.ಸಿ. ತರಬೇತಿಯನ್ನೂ ಪಡೆದುಕೊಂಡಿದ್ದಾರೆ.



ಲತಾಗುತ್ತಿ

ಧಾರವಾಡ ಲತಾಗುತ್ತಿಯವರು ಕನ್ನಡ ಎಂ.ಎ. ಪದವೀಧರೆ, ಗೃಹಿಣಿಯ ಕರ್ತವ್ಯಗಳೊಂದಿಗೆ ಕವನ ಬರೆಯುವ ಹವ್ಯಾಸ ಇವರದು.

ಪ್ರಕಟಿತ ಕೃತಿ :

ವರ್ತಮಾನ (ಕವನ ಸಂಗ್ರಹ) ೧೯೮೦

ಈಗ ಪರದೇಶದಲ್ಲಿದ್ದಾರೆ.



ಲಲಿತಮ್ಮ ಡಾ|| ಚಂದ್ರಶೇಖರ್

ಲಲಿತಮ್ಮನವರ ಜನ್ಮಸ್ಥಳ ಬೆಂಗಳೂರು. ಇದೀಗ ಇವರು ೫೦ರ ಹೊಸ್ತಿಲಲ್ಲಿ ಕಾಲಿಟ್ಟಿದ್ದಾರೆ. ಬಾಲ್ಯದಿಂದಲೂ ಇವರಿಗೆ ಸಾಹಿತ್ಯದತ್ತ ಒಲವು. ಹರಿಹರದಲ್ಲಿರುವ ಡಾ|| ಚಂದ್ರಶೇಖರ್‌ರವರ ಪತ್ನಿ.

ಇವರ ಪ್ರಕಟಿತ ಕೃತಿಗಳು :

೧ ಡಾಕ್ಟರು ಮತ್ತು ಮಡದಿ (ವ್ಯಕ್ತಿ ಚಿತ್ರಣ)-೧೯೬೧
೨ ಬನೂರಂಗಿ (ವ್ಯಕ್ತಿ ಚಿತ್ರಣ)-೧೯೭೪
೩ ಬಣ್ಣದ ಗಿಲಕಿ (ಮಕ್ಕಳ ಪುಸ್ತಕ)-೧೯೭೨
೪ ಲಕ್ಷ್ಮಣರಾವ್ ಕಿರ್ಲೋಸ್ಕರ್ (ಮಕ್ಕಳ ಪುಸ್ತಕ)-
೫ ಪಾರ್ವತಿಬಾಯಿ ಆಠಾವಳೆ ,,
೬ ರಶ್ಮಿ ಸರ್ಕಸ್ ಕಂಪನಿ ,,
೭ ಉಡುಗೊರೆ (ಕವನ ಸಂಕಲನ)-೧೯೭೯
೮ ಆಂಜನೇಯ (ಧಾರ್ಮಿಕ)-೧೯೭೯
೯ ಧಾರ್ಮಿಕ ಲೇಖನ ಸಂಗ್ರಹ
೧೦ ಲೆಟರ್ ಪ್ಯಾಡ್-೧೯೭೮
೧೧ ಉಷಾ ರಘುವೀರ ಪರಿಣಯ-೧೯೭೯
೧೨ ಮುಗಿಲೆತ್ತರದಲ್ಲಿ ನಾ ಕಂಡ ಕಾರಂತರು-೧೯೮೧
೧೩ ಮಾಯಾಪುರ (ಅನುವಾದ)-೧೯೭೬
೧೪ ಅಶ್ರುಬಿಂದು (ಸಂಪಾದಕಿ)
೧೫ ಅಂಗವಿಕಲ ಅನಾಥ ಜನಪಾಲ (ನೈಜಕಥೆ)-೧೯೮೧

ಲಲಿತಮ್ಮನವರಿಗೆ ಸಾಹಿತ್ಯೇತರ ಚಟುವಟಿಕೆಗಳೂ ಉಂಟು. ಸಮಾಜಸೇವೆ, ಹಳ್ಳಿಗಳಿಗೆ ಹೋಗಿ ಪೋಲಿಯೋ ಡ್ರಾಪ್ಸ್ ಹಾಕುವುದು, ಕೊಳಚೆ ಪ್ರದೇಶದವರ ಶಿಕ್ಷಣ-ಆರೋಗ್ಯ ಸುಧಾರಣೆಯತ್ತ ಲಕ್ಷ್ಯ. ಅಷ್ಟೇ ಅಲ್ಲದೆ, ಲಯನ್ಸ್ ಕ್ಲಬ್ಬಿನ ಅಧ್ಯಕ್ಷಿಣಿಯಾಗಿ ಬಂಗಾರದ ಪದಕ ಪಡೆದಿದ್ದಾರೆ. ಗರ್ಲ್ ಗೈಡ್ ಕಮಿಷನರ್, ಮಹಿಳಾ ಸಮಾಜಗಳಿಗೆ ಅಧ್ಯಕ್ಷಿಣಿಯಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.



ಲಲಿತಾ ಎಸ್.

ಶಿಶಸಾಹಿತ್ಯ ರಚನೆಯತ್ತ ಲಕ್ಷ್ಯ ಕೊಟ್ಟ ಮಹಿಳೆಯರಲ್ಲಿ ಲಲಿತಾರವರು ಒಬ್ಬರು. ಬಿ.ಎ., ಬಿ.ಎಡ್., ಪದವೀಧರೆಯಾಗಿ ಪ್ರೌಢಶಾಲೆಯಲ್ಲಿ ಶಿಕ್ಷಕಿಯಾದ ಅನುಭವದ ಹಿನ್ನೆಲೆ ಇವರಿಗಿದೆ. ಮಕ್ಕಳಿಗಾಗಿ ಪುಟ್ಟ ಪುಸ್ತಕಗಳನ್ನೂ ಕಾದಂಬರಿಗಳನ್ನೂ ಬರೆದು ಸಾಹಿತ್ಯ ಪ್ರಪಂಚಕ್ಕೆ ಪರಿಚಿತರಾಗಿದ್ದಾರೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿಗಳು :

೧ ನಾನಿರುವುದೆ ನಿನಗಾಗಿ
೨ ಏನೇನೋ ಆಸೆ

ಶಿಶು ಸಾಹಿತ್ಯ :

೩ ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿ
೪ ಪುಟ್ಟು ಪ್ರಪಂಚ
೫ ಬುದ್ಧಿ ಕಲಿತ ನರಿ
೬ ಕನಸಿನ ರಾಜ
೭ ಚಿನ್ನದ ಕಿರೀಟ
೮ ವಿನೋಬಾ-ವಿನೋದ

ಇವರು ಮಕ್ಕಳಿಗಾಗಿ ಬರೆದ ಪುಸ್ತಕಗಳು ಅನೇಕ ಮುದ್ರಣಗಳನ್ನು ಕಂಡಿವೆ.



ಲಲಿತಾ ಕೆರಿಮನಿ

ಧಾರವಾಡದ ಬೆಳವಟಿಗಿಯಲ್ಲಿ ೧೯೫೦ರಲ್ಲಿ ಜನಿಸಿದ ಲಲಿತಾ ಕೆರಿಮನಿ ಅವರು ಸಾಹಿತ್ಯ ಪ್ರಿಯರು. ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಬಿ.ಎ., (ಕನ್ನಡ) ಪದವೀಧರೆಯಾಗಿದ್ದಾರೆ. ಲಕ್ಷ್ಮೇಶ್ವರದ ಶ್ರೀ ಜಗದ್ಗುರು ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇವರ ಪ್ರಕಟಿತ ಕೃತಿ :

೧ ಮಹಾತ್ಮಾ ಶ್ರೀ ಶರೀಫರು (ಮಕ್ಕಳ ಪುಸ್ತಕ)

ಸಂಗೀತ, ಹೊಲಿಗೆ, ಭಾಷಣ, ಬರವಣಿಗೆಯಲ್ಲಿ ಆಸಕ್ತಿಯುಳ್ಳ ಲಲಿತಾ ಕೆರಿಮನಿ, ಮಹಿಳಾ ಸಮಸ್ಯೆಗಳನ್ನು ಕುರಿತ ಅನೇಕ ಲೇಖನಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಕವನಗಳನ್ನು ಬರೆದು ವಾಚಿಸುವ ಹವ್ಯಾಸ ಇವರಿಗಿದೆ.



ಲಲಿತಾ ವಿ. ಕೋಪರ್ಡೆ

ಗಡಿನಾಡಾದ ಬೆಳಗಾವಿಯ ಲಲಿತಾರವರು ಕನ್ನಡದ ಓದು, ಬರಹಗಳಲ್ಲಿ ಆಸಕ್ತಿ ವಹಿಸಿದ್ದಾರೆ.

ಇವರ ಪ್ರಕಟಿತ ಕೃತಿ :

ನಮ್ಮ ದೇಶದ ಸ್ವಾತಂತ್ರ್ಯದ ಪರಿಚಯ-೧೯೭೫

ಈ ಕೃತಿಯು ಶಾಲೆಯಲ್ಲಿ ಪೂರಕ ವಾಚನಕ್ಕೆ ಪಠ್ಯಪುಸ್ತಕವಾಗಿ ನಿಯಮಿತವಾಗಿದೆ.



ಲಲಿತಾ ಬಿ. ಟಿ. ನಾಯಕ್

೧೯೪೫ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ತಂಗಲಿತಾಂಡದಲ್ಲಿ ಜನ್ಮವೆತ್ತಿದ ಲಲಿತಾ ನಾಯಕ್‌ರವರು ಕನ್ನಡ ಎಂಟನೆಯ ತರಗತಿಯವರೆಗೆ ವಿದ್ಯಾಭ್ಯಾಸ ನಡೆಸಿದರೂ, ಮಹಿಳೆಯರ ಸಮಸ್ಯೆಗಳ ಬಗ್ಗೆ ಕಳಕಳಿಯಿಂದ, ವಿಚಾರಪೂರ್ಣವಾಗಿ ಬರೆಯಬಲ್ಲರು. ಸಂಗೀತ - ಸಾಹಿತ್ಯ ಇವರ ಆಸಕ್ತಿಯ ವಿಷಯಗಳು. ಪ್ರವೇಶಿಕಾ ದವರೆಗೆ ಹಿಂದೀ ಭಾಷಾಭ್ಯಾಸ, ಹೊಲಿಗೆ, ಹೋಮಿಯೋಪತಿ ವೈದ್ಯಕೀಯ ಇವರ ಇತರ ವಿದ್ಯಾರ್ಹತೆಗಳು.

ಇವರು ರಚಿಸಿದ 'ನೆಲೆ - ಬೆಲೆ' ಕಾದಂಬರಿಗೆ 'ಸುಧಾ' ಕಾದಂಬರಿ ಸ್ಪರ್ಧೆಯಲ್ಲಿ ಎರಡನೇ ಬಹುಮಾನ ಬಂದಿದೆ. (೧೯೮೧)

ಇವರ ಪ್ರಕಟಿತ ಕೃತಿಗಳು :

೨ ಚಂದ್ರ ಪರಾಭವ (ರೇಡಿಯೋ ನಾಟಕ ಸಂಕಲನ) ೧೯೭೨
೧ ಭಟ್ಟನ ಕನಸು (ಮಕ್ಕಳ ಕಥಾ ಸಂಕಲನ) ೧೯೭೯



ಲಲಿತಾ ಶಾಸ್ತ್ರಿ

ಬೆಂಗಳೂರಿನಲ್ಲಿ ನೆಲಸಿರುವ ಲಲಿತಾರವರು ಎಸ್.ಎಸ್.ಎಲ್.ಸಿ.ವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಗೃಹಿಣಿಯ ಕರ್ತವ್ಯ ನಿರ್ವಹಣೆಯೊಂದಿಗೆ ಅನೇಕ ಕತೆಗಳನ್ನು ಅನುವಾದ ಮಾಡಿದ್ದಾರೆ. ನಾಡಿನ ಅನೇಕ ಪತ್ರಿಕೆಗಳಲ್ಲಿ ಅವು ಪ್ರಕಟವಾಗಿವೆ.

ಇವರ ಪ್ರಕಟಿತ ಕೃತಿ :

ಪ್ರಶ್ನೆಗೊಂದು ಉತ್ತರ (ಅನುವಾದ)

"ಭಿಕ್ಷುಕಿಯ ಮಗಳು" ಕಥೆ ಕಿರು ಚಲನಚಿತ್ರವಾಗಿ ಕರ್ನಾಟಕಕ್ಕೆ ಪ್ರಶಸ್ತಿ ತಂದಿದೆ. ನಿಯತಕಾಲಿಕೆಗಳಲ್ಲಿ ಧಾರಾವಾಹಿಗಳು ಪ್ರಕಟವಾಗಿವೆ. ಮನೆಗೆಲಸ, ಓದು ಬರಹಗಳಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದಾರೆ.



ಲಲಿತಾಂಬಾ ಚಂದ್ರಶೇಖರ್

ಹೊರನಾಡಾದ ಹೈದರಾಬಾದಿನಲ್ಲಿ ನೆಲೆಸಿದ ಕನ್ನಡ ಲೇಖಕಿ ಲಲಿತಾಂಬಾ ಅವರ ಹುಟ್ಟೂರು ದಾವಣಗೆರೆ. ಬಿ,ಎಸ್ಸಿ., ಬಿ.ಎಡ್., ಪಿ.ಜಿ.ಡಿಪ್., ಪಿಚ್. ಎಸ್ಸಿ., ಎಂ.ಎ., (ಇಂಗ್ಲೀಷ್) ಪಿ.ಜಿ.ಟಿ.ಇ. ಪದವೀಧರೆಯಾಗಿದ್ದಾರೆ, ವಿದ್ಯಾರ್ಥಿ ಜೀವನದಲ್ಲಿ, ಅಧ್ಯಾಪಕ ವೃತ್ತಿಯಲ್ಲಿ ಹಾಗೂ ಸಾಹಿತಿಯಾಗಿ ಅನೇಕ ಪ್ರಥಮಗಳನ್ನು ಗಳಿಸಿ ಸನ್ಮಾನಿತರಾಗಿದ್ದಾರೆ. ಸರ್ಕಾರಿ ಸಮಗ್ರ ವಿದ್ಯಾ ಶಿಕ್ಷಣ ಕಲಾಶಾಲೆಯ ಅಧ್ಯಾಪಕಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಇವರ ಪ್ರಕಟಿತ ಕೃತಿಗಳು :

ಕಥಾ ಸಂಕಲನ :

೧ ವಿಮೋಚನೆ - ೧೯೫೪
೨ ಬಿಡಿ ಹೂಗಳು - ೧೯೬೬

ಕಾದಂಬರಿ :

೩ ರೇಖಾ (ಭಾಗ ೧, ಭಾಗ ೨) - ೧೯೫೬
೪ ಮುಕುಂದ ಚಂದ್ರ - ೧೯೬೦
೫ ಸರಸ್ವತಿ ಸಂಹಾರವೇ ? - ೧೯೬೮
೬ ಪುನರ್‌ದತ್ತಾ - ೧೯೭೧
೭ ಸ್ವೀಕಾರ (ಪೂರ್ವಾರ್ಧ-ಉತ್ತರಾರ್ಧ) - ೧೯೭೮
೮ ಸುಕನ್ಯೆಯರು - ೧೯೭೯

ಸಣ್ಣಕತೆ :

೯ ಪರ್ಲ್‌ಬರ್ಕ್ (ಭಾಷಾಂತರ) ೧೯೫೨

ಬೊಂಬಾಯಿನ ಭಾರತೀಯ ವಿದ್ಯಾಭವನದ "ಅಖಿಲ ಭಾರತ ಮಹಾಭಾರತ" ಸ್ಪರ್ಧೆಯಲ್ಲಿ ಕನ್ನಡ ಕತೆಗೆ ಬಹುಮಾನ ಬಂದಿದೆ. (೧೯೫೫)

"ಮೊಮೊರೆ ಆಜಾದ್" ಉರ್ದು ಸಂಸ್ಥೆ ಏರ್ಪಡಿಸಿದ ವಿವಿಧ ಭಾಷಾ ಸಣ್ಣಕತೆಗಳ ಸ್ಪರ್ಧೆಯಲ್ಲಿ ಕನ್ನಡ ಕತೆಗೆ ಬಹುಮಾನ ಬಂದಿದೆ. (೧೯೬೬)

ಕನ್ನಡ ಸಾಹಿತ್ಯ ಪರಿಷತ್ತಿನಿಂದ ವರ್ಷದ ಉತ್ತಮ ಪುಸ್ತಕ ಎಂದು "ಸ್ವೀಕಾರ" ಕಾದಂಬರಿಗೆ ಬಹುಮಾನ ಬಂದಿದೆ. (೧೯೬೯)

"ಮುಕುಂದಚಂದ್ರ" ಕಾದಂಬರಿ ಉಸ್ಮಾನಿಯಾ ವಿಶ್ವವಿದ್ಯಾಲಯದ ಪಿ.ಯು.ಸಿ.ಗೆ ಕನ್ನಡ ಪಠ್ಯಪುಸ್ತಕವಾಗಿ ಆಯ್ಕೆಯಾಗಿದೆ.

ಮುಕುಂದಚಂದ್ರ, ಪುನರ್‌ದತ್ತಾ ಕಾದಂಬರಿಗಳು ಚಲನಚಿತ್ರಗಳಾಗಿವೆ.

ಕನ್ನಡ ಹಾಗೂ ಸಂಸ್ಕೃತದಲ್ಲಿ ಹಾಡುಗಳನ್ನು ರಚಿಸಿದ್ದಾರೆ. ಆಕಾಶವಾಣಿಯಲ್ಲಿ ಭಾಷಣ, ನಾಟಕ, ಹರಟೆ ಪ್ರಸಾರ ಮಾಡಿದ್ದಾರೆ. ಹೈದರಾಬಾದಿನ "ಕನ್ನಡ ನಾಟ್ಯರಂಗ"ದ ಮಾಜೀ ಕಾರ್ಯದರ್ಶಿಯಾಗಿದ್ದಾರೆ. ಸಂಗೀತ, ಸಾಹಿತ್ಯ, ನೃತ್ಯಗಳಲ್ಲಿ ಅಭಿರುಚಿ ಇದೆ.

ಲಲಿತಾಂಬಾ ವೃಷಭೇಂದ್ರಸ್ವಾಮಿ

ಧಾರವಾಡದ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕರಾದ ಇವರು ಬಿ.ಎ. ಪದವೀಧರೆ, ಎಂ.ಎಡ್., ಡಿ.ಟಿ.ಇ. ಶಿಕ್ಷಣ ಪಡೆದಿದ್ದಾರೆ.

ಶಿಕ್ಷಣ, ಧರ್ಮ, ಸಾಮಾಜಿಕ ಸಮಸ್ಯೆಗಳು ಹಾಗೂ ಮಹಿಳೆಯರ ಸಮಸ್ಯೆಗಳ ಬಗ್ಗೆ ನಾಡಿನ ಪತ್ರಿಕೆಗಳಲ್ಲಿ ಅನೇಕ ಲೇಖನಗಳನ್ನು ಬರೆದಿದ್ದಾರೆ.

ಇವರ ಪ್ರಕಟಿತ ಕೃತಿ :

ಶಿವಶರಣೆ ಸಜ್ಜಲಗುಡ್ಡದ ಶರಣಮ್ಮ



ಲೀಲಮ್ಮ ಆರ್.

ಬೆಂಗಳೂರಿನ ಲೀಲಮ್ಮನವರು ಗೃಹಿಣಿಯಾಗಿದ್ದುಕೊಂಡು, ಭಕ್ತಿಭಾವದಿಂದ ಪ್ರೇರಿತರಾಗಿ ಸ್ತೋತ್ರಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಶಾರದಾ ವಿಲಾಸ ವೈಭವ – ೧೯೭೬
೨ ಶ್ರೀ ವಿಲಾಸ ವೈಭವ – ೧೯೮೦

ಕಲೆಯಲ್ಲಿ ಅಭಿರುಚಿ ಹೊಂದಿದ್ದಾರೆ. ನವರಾತ್ರಿ ಬೊಂಬೆಗಳ ಅಲಂಕಾರದಲ್ಲಿ ಸಿದ್ಧಹಸ್ತರೆನಿಸಿದ್ದಾರೆ.



ಲೀಲಾ ಗರಡಿ

ಕನ್ನಡ, ಹಿಂದಿ ಭಾಷಾ ಸಮನ್ವಯ ಸಾಧಿಸಿರುವ ಲೀಲಾರವರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಗದಗ ಇವರ ಹುಟ್ಟೂರು. ಮನೆಮಾತು ಕನ್ನಡ, ಹಿಂದಿ ಎಂ.ಎ. ಪದವೀಧರೆ. ಕನ್ನಡ ಹಿಂದಿ ಭಾಷಾಂತರದಲ್ಲಿ ಆಸಕ್ತಿಯನ್ನಿಟ್ಟುಕೊಂಡಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಶಿವದರ್ಶನ (ಕವನ ಸಂಕಲನ) ೧೯೭೧
೨ ಮಹಿಳೆ ಮತ್ತು ವಿವಾಹ (ಕನ್ನಡದಿಂದ ಹಿಂದಿಗೆ ಅನುವಾದ)

ಸಂಗೀತ, ಹೂ ಜೋಡಣೆಯಲ್ಲಿ ಅಭಿರುಚಿ ಇದೆ.



ಲೀಲಾಭಟ್ ಬಿ.

ದಕ್ಷಿಣ ಕನ್ನಡದ ಪುತ್ತೂರು ಲೀಲಾರವರ ಜನ್ಮಸ್ಥಳ. ಎಂ.ಎ., ಬಿ.ಟಿ. ಪದವೀಧರೆಯಾಗಿದ್ದಾರೆ. ಸದ್ಯಕ್ಕೆ ನಿವೃತ್ತ ಪ್ರಾಧ್ಯಾಪಕಿಯಾಗಿ ಪುತ್ತೂರಿನಲ್ಲಿಯೇ ನೆಲೆಸಿದ್ದಾರೆ. "ತುಳುನಾಡಿನಲ್ಲಿ ಶಕ್ತಿ ತತ್ವ ಮತ್ತು ಅರ್ಚನೆ" ಎಂಬ ವಿಷಯದ ಅಧ್ಯಯನ ನಡೆಸಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಭೂತನಾಗರ ನಡುವೆ
೨ ಉಳ್ಳಾಲ್ತಿ ಅಮ್ಮನವರು

ಸಂಶೋಧನೆ, ಪ್ರವಾಸದಲ್ಲಿ ಆಸಕ್ತಿಯಿದೆ. ಚಿತ್ರಕಲೆಯಲ್ಲಿ ಹವ್ಯಾಸವನ್ನಿರಿಸಿ ಕೊಂಡಿದ್ದಾರೆ.



ಲೀಲಾದೇವಿ ಆರ್. ಪ್ರಸಾದ್

ಧಾರವಾಡ ಲೀಲಾದೇವಿಯವರ ಹುಟ್ಟೂರು. ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಬಿ.ಎ. ಪದವೀಧರೆ. ಗೃಹಕೃತ್ಯದೊಡನೆ ಸಮಾಜಸೇವೆ, ರಾಜಕೀಯ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದ್ದಾರೆ. ಪತ್ರಕರ್ತೆಯಾಗಿ "ಪ್ರತಿಭಾ" ಸಾಂಸ್ಕೃತಿಕ ಮಾಸಪತ್ರಿಕೆಯನ್ನು (೧೯೫೪ - ೫೮) ಕೆಲವು ವರ್ಷ ಸಂಪಾದಿಸಿ ಪ್ರಕಟಿಸಿದ್ದಾರೆ. "ಸಮಾಜ ಕಲ್ಯಾಣ" ಸಂಪಾದಕ ಮಂಡಲಿಯ ಸದಸ್ಯೆಯಾಗಿದ್ದಾರೆ.

'ಮಹಿಳೆ ಮತ್ತು ಉಳಿತಾಯ' ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾ ವರ್ಷದ ಬಹುಮಾನ ಪಡೆದಿದೆ. 'ಮಹಿಳೆ ಮತ್ತು ಸಹಕಾರ' ಕರ್ನಾಟಕ ರಾಜ್ಯ ಸಹಕಾರ ಯೂನಿಯನ್ ಪ್ರಶಸ್ತಿ ಗಳಿಸಿದೆ.

ಇವರ ಪ್ರಕಟಿತ ಕೃತಿಗಳು :

೧ ಸಂಜೀವಿನಿ (ಕಿರು ನಾಟಕ)
೨ ಹೆಣ್ಣ ಮೇಲಿನ ಹೆಣ್ಣು (ಕಾದಂಬರಿ)
೩ ಕನ್ನಡತಿ (ಪ್ರಬಂಧಗಳು)
೪ ಮಹಿಳೆ ಮತ್ತು ಉಳಿತಾಯ
೫ ಮಹಿಳೆ ಮತ್ತು ಸಹಕಾರ

ಅಮೆರಿಕಾದ ನ್ಯೂಯಾರ್ಕ್‌ನಲ್ಲಿ ನಡೆದ 'ಇಂಟರ್ ನ್ಯಾಷನಲ್ ಅಲಿಯನ್ಸ್ ಆಫ್ ವುಮೆನ್' ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ನೈನಿತಾಲ್ ಅಖಿಲ ಭಾರತ ಲೇಖಕಿಯರ ಸಮ್ಮೇಳನದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದಾರೆ.

ಕೀರ್ತಿಶೇಷ ಶಿವಮೂರ್ತಿ ಶಾಸ್ತ್ರಿಗಳ ಸೊಸೆ.



ಲೀಲಾವತಿ ಚಂದ್ರಶೇಖರ್

"ಲೀಲಾ ಶೇಖರ್" ಎಂಬ ಕಾವ್ಯನಾಮದಿಂದ ಬರೆಯುತ್ತಿರುವ ಲೀಲಾವತಿ ಚಂದ್ರಶೇಖರ್ ಅವರು ಮದ್ರಾಸಿನಲ್ಲಿದ್ದುಕೊಂಡು ಕನ್ನಡದ ಚಟುವಟಿಕೆಗಳಲ್ಲಿ ಸದಾ ನಿರತರಾಗಿದ್ದಾರೆ.

೧೯೩೬ರಲ್ಲಿ ಮೈಸೂರಿನಲ್ಲಿ ಹುಟ್ಟಿದ್ದಾರೆ. ಸಾಹಿತ್ಯದ ಜೊತೆಗೆ ಕಲೆಯಲ್ಲೂ ಪರಿಶ್ರಮವುಂಟು. ತೆಲುಗು ಹಾಗೂ ಇಂಗ್ಲೀಷ್ ಸಾಹಿತ್ಯದಲ್ಲಿ ಆಸಕ್ತಿಯನ್ನಿರಿಸಿ ಕೊಂಡಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಪ್ರೇಮ ಬಂಧನ (ಕಾದಂಬರಿ) - ೧೯೫೬
೨ ಜ್ಯೇಷ್ಠ ಪುತ್ರಿ ,, - ೧೯೭೨

ಇವರು ಬರೆದ "ಅಕ್ಕ - ಪಕ್ಕ" ನಾಟಕಕ್ಕೂ, ಅಭಿನಯಕ್ಕೂ ಬಹುಮಾನಗಳು ಬಂದಿವೆ. ಮದರಾಸಿನ ಕನ್ನಡ ಸಂಘದ ಸದಸ್ಯೆಯಾಗಿದ್ದಾರೆ. ಇವರು ವಾಸ ವಾಗಿರುವ ಬೆಸೆಂಟ್‌ನಗರದಲ್ಲಿ ಕನ್ನಡಿಗರ ಕೂಟವೊಂದನ್ನು ಸ್ಥಾಪಿಸಿರುವ ಕೀರ್ತಿ ಇವರದೇ. ಟಿ.ವಿ. ನಾಟಕಗಳಲ್ಲೂ ಲೀಲಾ ಶೇಖರ್ ಭಾಗವಹಿಸಿದ್ದಾರೆ. ಸದ್ಯಕ್ಕೆ ಕೇಂದ್ರ ಫಿಲ್ಮ್ ಸೆನ್ಸಾರ್ ಬೋರ್ಡಿನ ಕನ್ನಡ ಚಲನಚಿತ್ರಗಳ ಸಲಹಾ ಸಮಿತಿಯ ಸದಸ್ಯರಲ್ಲಿ ಒಬ್ಬರಾಗಿದ್ದಾರೆ.



ವನಜಾ ಸತ್ಯನಾರಾಯಣ

ವನಜಾ ಸತ್ಯನಾರಾಯಣ ಅನೇಕ ತೆಲುಗು ಕತೆ-ಕಾದಂಬರಿಗಳನ್ನು ಕನ್ನಡ ಭಾಷೆಗೆ ಅನುವಾದ ಮಾಡಿದ್ದಾರೆ. ತೆಲುಗು ಭಾಷೆಯ ಸಂಪರ್ಕ ಇವರಿಗೆ ಬಹಳ ಹಳೆಯದು. ಭಾರತ ಸ್ವಾತಂತ್ರ್ಯ ಪಡೆಯುವ ಕೆಲವು ತಿಂಗಳ ಮುಂಚೆ ಕನ್ನಡ ನಾಡಿನಲ್ಲಿ ಜನಿಸಿ, ಬೆಳೆದರೂ ಇವರು ಮದುವೆಯಾಗಿ ನೆಲೆಸಿದ್ದು ಆಂಧ್ರಪ್ರದೇಶದಲ್ಲಿ ಕನ್ನಡ-ತೆಲುಗು ಭಾಷೆಗಳ ಪರಿಜ್ಞಾನದೊಂದಿಗೆ, ಹಿಂದಿಯಲ್ಲಿ ರಾಷ್ಟ್ರಭಾಷಾ ಪ್ರವೀಣ ರಾಗಿದ್ದಾರೆ.

ಇವರು ಭಾಷಾಂತರಿಸಿರುವ ಪ್ರಕಟಿತ ಕೃತಿಗಳು :

೧ ಹೌಸ್ ಸರ್ಜನ್ - ೧೯೭೩
೨ ದೂರ ದಿಗಂತ - ೧೯೭೩
೩ ಮೋಂಬತ್ತಿ - ೧೯೭೬
೪ ಹನಿಮೂನ್ - ೧೯೮೧
೫ ಭವಿಷ್ಯತ್ತಿನ ಮಗಳು

ಇಷ್ಟೇ ಅಲ್ಲದೆ ರೆಡ್‌ಬಾಕ್ಸ್, ಡಿಂಪ್ಲಿ, ಪ್ರತಿಬಿಂಬ, ಶಿಥಿಲ ಶಿಲ್ಪ ಮುಂತಾದ ಅನೇಕ ಕಾದಂಬರಿಗಳೂ ಕೂಡ ನಾಡಿನ ಜನಪ್ರಿಯ ಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಹರಿದು ಬಂದಿದೆ.



ವರದಾ ಶ್ರೀನಿವಾಸನ್

"ಪಾವನಾ" ಕಾವ್ಯನಾಮದಲ್ಲಿ ಸಾಹಿತ್ಯ ಸೃಷ್ಟಿ ಮಾಡುತ್ತಿರುವ ವರದಾರವರು ಕಾಸರಗೋಡಿನಲ್ಲಿ ಜನಿಸಿದ್ದಾರೆ. ಭಾಷಾಂತರಗಾರ್ತಿಯಾಗಿ ಉದ್ಯೋಗ ಮಾಡುತ್ತಾ ಬೆಂಗಳೂರಿನಲ್ಲಿದ್ದಾರೆ. ಕನ್ನಡ ಎಂ.ಎ. ಪದವೀಧರೆ. ಸಂಸ್ಕೃತ ವಿಶಾರದೆ, ಹಿಂದೀ ಪ್ರವೀಣೆಯಾಗಿದ್ದಾರೆ.

ಅನೇಕ ಕತೆ, ಲೇಖನಗಳು ನಾಡಿನ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ,

ಇವರ ಪ್ರಕಟಿತ ಕೃತಿ :

ಆರು ಪ್ರಬಂಧಗಳು



ವಸಂತಮಾಲಾ ಜಿ. ಎಸ್.

ವಸಂತಮಾಲಾ ಅವರ ಜನ್ಮಸ್ಥಳ ಹಾಸನ. ಬಿ.ಎಸ್ಸಿ., ಪದವೀಧರೆ. ಕನ್ನಡ ಡಿಪ್ಲೊಮಾ ಮಾಡಿರುವುದಲ್ಲದೆ ಎಂ.ಎ. (ಕನ್ನಡ) ವಿದ್ಯಾಭ್ಯಾಸ ಗೃಹಿಣಿಯಾಗಿ, "ಗುರುದೇವ" ಮಾಸಪತ್ರಿಕೆಯ ಸಂಪಾದಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈಗ ಶಿವಮೊಗ್ಗೆಯಲ್ಲಿ ನೆಲೆಸಿದ್ದಾರೆ.

ಇವರ ಪ್ರಕಟಿತ ಕೃತಿ :

ಎರಡು ಕಿನ್ನರ ಜೋಗಿ ಕಾವ್ಯಗಳು

ಜಾನಪದ ಸಾಹಿತ್ಯ ಸಂಗ್ರಹಣೆಯಲ್ಲಿ ಆಸಕ್ತಿ ಹೊಂದಿದ್ದಾರೆ.



ವಸಂತಾದೇವಿ ಅ.ನ.ಕೃ.

ಕನ್ನಡದ ಹೆಸರಾಂತ ಸಾಹಿತಿ ಅ.ನ.ಕೃ.ರವರ ಪತ್ನಿಯಾಗಿ ಸಾಹಿತ್ಯ ಕೃಷಿ ಮಾಡಿದ ವಸಂತಾದೇವಿಯವರು ಕಾದಂಬರಿಗಳನ್ನು ಬರೆದಿದ್ದಾರೆ. ತಮ್ಮ ಐವತ್ತರ ಹರಯದಲ್ಲಿ ಪುಸ್ತಕ ಪ್ರಕಟಣೆ ಪ್ರಾರಂಭಿಸಿ ನಾಲ್ಕು ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಅರವತ್ತರ ಅನಾರೋಗ್ಯದಲ್ಲಿಯೂ ಇನ್ನೂ ಒಳ್ಳೆಯ ಕಾದಂಬರಿ ಬರೆಯಬೇಕೆಂಬ ಅಪೇಕ್ಷೆ ಅವರಲ್ಲಿದೆ.

ಇವರ ಪ್ರಕಟಿತ ಕೃತಿಗಳು :

೧ ಜೀವರಸ - ೧೯೭೧

೨ ದೈವಚಿತ್ತ - ೧೯೭೨

೩ ಅಂದು–ಇಂದು - ೧೯೭೩

೪ ಶುಕ್ರಬಂಧ - ೧೯೭೪



ವಸಂತೀ ಚಂದ್ರಶೇಖರ್

ಕಳೆದ ಎರಡು ದಶಕಗಳಿಂದ ಸತತ ಸಾಹಿತ್ಯ ಕೃಷಿ ನಡೆಸುತ್ತಿರುವ ಲೇಖಕಿ ವಸಂತೀ ಚಂದ್ರಶೇಖರ್ ಅವರ ಆಸಕ್ತಿ ಬಹುಮುಖವಾದದ್ದು. ಇವರ ಕಾವ್ಯನಾಮ ಗಳು ಸಹನಾ, ವಸಂತೀಚಂದ್ರ, ವಸಂತೀ ಮುಂತಾದವು.

ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯ ಪಿಲಾರು ಹುಟ್ಟೂರು. ನಲವತ್ತನೇ ವರ್ಷದಲ್ಲಿ ಕಾಲಿರಿಸುತ್ತಿರುವ ಇವರು ಕನ್ನಡ ರತ್ನ - ಪಂಡಿತ್, ಎಂ.ಎ., ಬಿ.ಎಡ್. ಪದವೀಧರೆ. ವೃತ್ತಿಯಿಂದ ಪ್ರೌಢಶಾಲಾ ಉಪಾಧ್ಯಾಯಿನಿ. ಕಸೂತಿ, ಚಿತ್ರಕಲೆ, ಗ್ರಂಥ ಸಂಗ್ರಹಣೆ - ಅಧ್ಯಯನ, ಸಂಗೀತ ಮುಂತಾದವುಗಳಲ್ಲಿ ಅಭಿರುಚಿ ಇದೆ.

ಇವರ ಪ್ರಕಟಿತ ಕೃತಿಗಳು :

ಕವನ ಸಂಕಲನ :

೧ ವೇಣುವನ - ೧೯೬೭
೨ ವೃಂದಾವನ - ೧೯೬೯
೩ ಅಂತರಕ್ಷಿ - ೧೯೮೦

ಕಾದಂಬರಿ :

೪ ನಿನ್ನಡಿಗಳಲ್ಲಿ - ೧೯೭೩
೫ ಅಗ್ನಿ - ೧೯೭೫
೬ ಉತ್ಥಾನ - ೧೯೭೮
೭ ಧರ್ಮ - ೧೯೮೦

ಕಾವ್ಯ ನಾಟಕ :

೮ ಕ್ಷಮಾಮೂರ್ತಿ - ೧೯೭೪

ಮಕ್ಕಳ ಸಾಹಿತ್ಯ :

೯ ಸತ್ಯಕಾಮ ೧೯೭೯
೧೦ ಸೌಗಂಧಿಕಾ ಪುಷ್ಪ - ೧೯೭೯
೧೧ ಕಿಶೋರ ಜಾಗೃತಿ ೧೯೭೯

ಡಾ|| ವಸುಂಧರಾ ಫಿಲಿಯೋಜಾ

ಇವರು ಹುಟ್ಟಿದ್ದು ಹಾವೇರಿಯಲ್ಲಿ, ಇತಿಹಾಸದಲ್ಲಿ ಎಂ.ಎ. ಡಿಗ್ರಿ ಪಡೆದದ್ದು ಧಾರವಾಡದಲ್ಲಿ. ಮದುವೆಯಾದದ್ದು ಫ್ರಾನ್ಸಿನ ಪಿಯರ್ ಫಿಲಿಯೋಜಾ ಅವರನ್ನು. ಫ್ರೆಂಚ್ ಭಾಷೆಯಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ವಿಷಯ : 'ಸಂಗಮ ವಂಶದ ಇತಿಹಾಸ'. ಫ್ರೆಂಚ್ ಇನ್‌ಸ್ಟಿಟ್ಯೂಟ್ ಆಫ್ ಇಂಡಾಲಜಿಯ ನೆರವಿನಿಂದ ಹಂಪೆಯ ಬಗೆಗೆ ಸಂಶೋಧನೆ ನಡೆಸುತ್ತಿದ್ದಾರೆ. ಫ್ರೆಂಚ್ ಭಾಷೆಯಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಬಗ್ಗೆ ಬೃಹತ್ಪ್ರಬಂಧವನ್ನು ಬರೆದು ಪ್ರಕಟಿಸಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಸಂಗಮ ವಂಶದ ಇತಿಹಾಸ

೨ ಅಳಿದುಳಿದ ಹಂಪೆ



ವಾಣಿ

ಕನ್ನಡ ಓದುಗರಿಗೆ "ವಾಣಿ" ಎಂದೇ ಪರಿಚಿತರಾಗಿದ್ದಾರೆ ಬಿ.ಎನ್. ಸುಬ್ಬಮ್ಮನವರು. ಹಾಸನದಲ್ಲಿ ಜನಿಸಿದ ಇವರು ಬಹಳ ವರ್ಷಗಳಿಂದ ಮೈಸೂರಿನಲ್ಲಿ ನೆಲೆಸಿದ್ದಾರೆ. ಎಸ್. ಎಸ್. ಎಲ್. ಸಿ. ಯವರೆಗೆ ಓದಿ, ಗೃಹಿಣಿಯ ಕರ್ತವ್ಯ ನಿರ್ವಹಿಸುತ್ತ ಅನೇಕ ಕತೆ - ಕಾದಂಬರಿಗಳನ್ನು ಬರೆದಿದ್ದಾರೆ.

ರಾಜ್ಯ ಸರ್ಕಾರದ ಬಹುಮಾನ, ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ೧೯೮೦ರ ಮಹಿಳಾ ಸಮ್ಮೇಳನದಲ್ಲಿ ಸನ್ಮಾನ ಹಾಗೂ ಇನ್ನೂ ಅನೇಕ ಸಭೆ, ಸಮಾರಂಭಗಳಲ್ಲಿ ಮನ್ನಣೆ ಪಡೆದುಕೊಂಡಿದ್ದಾರೆ.

ಎರಡು ಕನಸು, ಶುಭಮಂಗಳ, ಹೊಸಬೆಳಕು - ಈ ಮೂರು ಕಾದಂಬರಿಗಳು ಚಲನಚಿತ್ರಗಳಾಗಿ ಖ್ಯಾತಿಯನ್ನು ತಂದುಕೊಟ್ಟಿವೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿಗಳು :

೧ ಬಿಡುಗಡೆ
೨ ಚಿನ್ನದ ಪಂಜರ
೩ ಮನೆ ಮಗಳು
೪ ಅವಳ ಭಾಗ್ಯ
೫ ಕಾವೇರಿಯ ಮಡಿಲಲ್ಲಿ
೬ ಅಂಜಲಿ
೭ ಬಾಳೆಯ ನೆರಳು
೮ ಅನಿರೀಕ್ಷಿತ

೯ ಹೂವು ಮುಳ್ಳು
೧೦ ಪ್ರೇಮ ಸೇತು
೧೧ ಬಲೆ
೧೨ ತ್ರಿಶೂಲ
೧೩ ಶಿಶಿರಗಾನ
೧೪ ಸುಲಗ್ನಾ ಸಾವಧಾನ

ಕಥಾ ಸಂಕಲನ :

೧೫ ಕಸ್ತೂರಿ
೧೬ ಅರ್ಪಣೆ
೧೭ ನಾಣಿಯ ಮದುವೆ
೧೮ ಅಪರೂಪದ ಅತಿಥಿ

ವಚನ ಸಂಗ್ರಹ :

೧೯ ನವನೀತ

ಅರವತ್ತರ ಹರೆಯದಲ್ಲಿಯೂ ಬರವಣಿಗೆಯನ್ನು ಮುಂದುವರಿಸುತ್ತಿದ್ದಾರೆ ವಾಣಿಯವರು.



ವಾಸಂತಿ ಎಲ್. ಆದಿಶೇಷ

ವಾಸಂತಿಯವರು ಶಿವಮೊಗ್ಗೆಯಲ್ಲಿ ನೆಲೆಸಿದ್ದಾರೆ, ಭದ್ರಾವತಿ ಇವ
ಹುಟ್ಟೂರು. ಗೃಹಕಾರ್ಯದೊಂದಿಗೆ ಪತಿಯೊಂದಿಗೆ "ಧನಲಕ್ಷ್ಮಿ ಪ್ರಕಾಶನ"
ಪ್ರಕಾಶಕರಾಗಿದ್ದಾರೆ. ಪಿ.ಯು.ಸಿ. ವರೆಗೆ ಓದಿದ ಇವರಿಗೆ ಬೆರಳಚ್ಚಿನ ಪರಿಚಯ
ವಿದೆ. ನಾಡಿನ ಅನೇಕ ಪತ್ರಿಕೆಗಳಲ್ಲಿ ಇವರ ಹಲವಾರು ಲೇಖನಗಳು ಪ್ರಕಟವಾಗಿವೆ

ಇವರ ಪ್ರಕಟಿತ ಕೃತಿ :

ಮಿಂಚು ನಕ್ಷತ್ರ (ಸಣ್ಣ ಕತೆಗಳ ಸಂಕಲನ) - ೧೯೮೧

ನಾಟಕ ಅಭಿನಯದಲ್ಲಿ ಆಸಕ್ತಿಯುಳ್ಳವರಾಗಿದ್ದಾರೆ.



ವಾಸಂತಿ ಪಡುಕೋಣೆ

ಬರ್ಮಾದಲ್ಲಿ ಜನಿಸಿದ ವಾಸಂತಿಯವರು ಮೂಲತಃ ಕನ್ನಡಿಗರು. ಮನೆಯಲ್ಲಿ ಆಡುವ ಭಾಷೆ ಕೊಂಕಣಿ, ಹಿಂದಿ ಬಿ.ಎ. ಪದವೀಧರೆ, ಶಿಕ್ಷಕ ಡಿಪ್ಲೊಮಾ, ಮ್ಯಾಟ್ರಿಕ್ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿದ್ದಾರೆ. ಈಗ ನಿವೃತ್ತ ಉಪಾಧ್ಯಾಯಿನಿಯಾಗಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಮಿಥುನ ಲಗ್ನ - ೧೯೬೨

೨ ಕರ್ಮಚಾರಿ - ೧೯೬೩

೩ ನನ್ನ ಆಸೆಯ ಕಣ್ಣು (ಭಾಷಾಂತರ)

೪ ನನ್ನ ಮಗ ಗುರುದತ್ತ

೫ ಜೀವನದ ಹೋರಾಟ

ಮುಂಬಯಿ ಕರ್ನಾಟಕ ಸಂಘದವರಿಂದ ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ಪಡೆದಿದ್ದಾರೆ.

ನಾಟಕ, ಸಂಗೀತ ಹಾಗೂ ಲಲಿತ ಕಲೆಗಳಲ್ಲಿ ಅಭಿರುಚಿ ಬೆಳೆಸಿಕೊಂಡಿದ್ದಾರೆ. ಬಂಗಾಲಿ, ಮರಾಠಿ, ಕನ್ನಡ, ಇಂಗ್ಲೀಷ್‌ಗಳಲ್ಲಿ ಸರಾಗವಾಗಿ ಓದಿ, ಬರೆಯಬಲ್ಲರು. ಆಕಾಶವಾಣಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಹಿಂದಿ ಚಲನಚಿತ್ರ ಜಗತ್ತಿನ ಖ್ಯಾತ ನಿರ್ಮಾಪಕ ನಿರ್ದೇಶಕ ದಿವಂಗತ "ಗುರುದತ್ತ್" ಅವರು ಇವರ ಮಗ.



ವಿಜಯಲಕ್ಷ್ಮಿ ಒಡೆಯರ್

ವಿಜಯಲಕ್ಷ್ಮಿಯವರು ಸಂಗೀತ - ಸಾಹಿತ್ಯಗಳಲ್ಲಿ ಸಮನ್ವಯತೆ ಸಾಧಿಸಿದ್ದಾರೆ. ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಉರ್ದು ಕಾವ್ಯಗಳಲ್ಲಿ ಅಭಿರುಚಿ ಬೆಳೆಸಿಕೊಂಡಿದ್ದಾರೆ. ಬ್ಯಾಡ್‌ಮಿಂಟನ್, ಚೆಸ್ ಆಟಗಳಲ್ಲಿ ಆಸಕ್ತಿಯನ್ನಿರಿಸಿಕೊಂಡಿದ್ದಾರೆ. ಅನೇಕ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ.

ಪ್ರಕಟಿತ ಕೃತಿ :

ಹೂವು ಹಾಲು ಜೇನು (ಕವನ ಸಂಕಲನ) ೧೯೭೬



ವಿಜಯಲಕ್ಷ್ಮಿ ಆರ್.ಎನ್.

ಮಂಡ್ಯ ಇವರ ಹುಟ್ಟೂರು. ಎಂ.ಎ, (ಕನ್ನಡ) ಪಿ.ಎಚ್.ಡಿ. ಯನ್ನು ಮೈಸೂರು ವಿಶ್ವವಿದ್ಯಾಲಯದಿಂದ ಮಾಡಿದ್ದಾರೆ. ಜೈನ ಸಾಹಿತ್ಯ ಸಂಶೋಧನಾ ಸಂಸ್ಥೆಯಲ್ಲಿ ಸಹಾಯಕ ಸಂಶೋಧಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಸಾನಂದ ಗಣೇಶ ಸಾಂಗತ್ಯ - ೧೯೭೫

೨ ದ್ವಾದಶಾನುಪ್ರೇಕ್ಷೆ - ೧೯೮೨

೩ ಕನ್ನಡ ಸಾಂಗತ್ಯ ಪ್ರಕಾರ - ೧೯೮೨

ಪತ್ರಿಕೆಗಳಿಗೆ ಲೇಖನ ಬರೆಯುವ ಹವ್ಯಾಸವಿದೆ. ಶಾಸ್ತ್ರೀಯ ಸಂಗೀತ ಹಾಡುವ, ಕೇಳುವ ಅಭಿರುಚಿ ಬೆಳೆಸಿಕೊಂಡಿದ್ದಾರೆ.



ವಿಜಯಶ್ರೀ
(ವಿಜಯಕುಮಾರಿ ಕೆ.ಜಿ.)

"ವಿಜಯಶ್ರೀ" ಎಂಬ ಕಾವ್ಯನಾಮದಲ್ಲಿ ಅನೇಕ ಕಾದಂಬರಿಗಳನ್ನು ಬರೆದಿದ್ದಾರೆ. ಕವನ, ಸಂಕಲನವನ್ನೂ ಹೊರತಂದಿದ್ದಾರೆ. ಶಿವಮೊಗ್ಗ ಜಿಲ್ಲೆಯ ಈನೂರಿನಲ್ಲಿ ಜನಿಸಿದ ಇವರು ಶಿವಮೊಗ್ಗೆಯಲ್ಲಿ ನೆಲೆಸಿದ್ದಾರೆ. ಕನ್ನಡ ಎಂ.ಎ. ಮಾಡಿ, ಬರವಣಿಯನ್ನೇ ಹವ್ಯಾಸ ಮಾಡಿಕೊಂಡಿರುವ ಇವರಿಗೆ ನಾಟಕದಲ್ಲಿ ಅಭಿನಯ, ನಿರ್ದೇಶನ, ಸಂಗೀತಾಭ್ಯಾಸ, ನೃತ್ಯಗಳಲ್ಲಿ ಆಸಕ್ತಿ ಇದೆ.

ದಿ ತ್ರಿವೇಣಿಯವರ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, ಮಿತ್ರ ವೃಂದದವರ ಕಥಾ ಸ್ಪರ್ಧೆಯಲ್ಲಿ ದ್ವಿತೀಯ ಹಾಗೂ ಇನ್ನೂ ಅನೇಕ ಪ್ರಬಂಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ.

ಇವರ ಪ್ರಕಟಿತ ಕಾದಂಬರಿಗಳು :

೧ ಹೃದಯ ಕುಂಜ

೨ ಗಗನ ಚುಂಬಿ

೩ ಚಂದ್ರಿಕಾ ಚಿಕೋರಿ—ಭಾಗ ೧ ಮತ್ತು ೨

೪ ಜೋಡಿ ಹಂಸ

೫ ಸುಮಂಗಲಿ



ವಿಜಯಾ

ಇಳಾ, ಧಾರಿಣಿ, ಕ್ಷಮಾ, ಮೌನಿ, ವಿಂಧ್ಯಾ, ಮಮತಾ ಹಾಗೂ ವಿಜಯಾ ಎಂದು ಅನೇಕ ಹೆಸರುಗಳಲ್ಲಿ ಅನೇಕ ಬರಹಗಳನ್ನು ಬರೆದಿದ್ದಾರೆ ವಿಜಯಾ, ಬಿ.ಎ., ಪದವೀಧರೆಯಾಗಿದ್ದಾರೆ. ಎಂ.ಎ. ವಿದ್ಯಾರ್ಥಿನಿಯಾಗಿದ್ದಾರೆ. ಪತ್ರಕರ್ತೆಯಾಗಿ ಅಂಕಣ ಬರಹಕ್ಕೆ ಹೊಸ ಆಯಾಮ ತಂದುಕೊಟ್ಟು "ಮಾತಿನಿಂದ ಲೇಖನಿಗೆ" ಪುಸ್ತಕ ರೂಪವಾಗಿ ಪ್ರಕಟಿಸಿದ್ದಾರೆ. "ಬಂದರೋ ಬಂದರು" ಬೀದಿ ನಾಟಕ ಬರೆದು ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ತಾಳ ತಪ್ಪಿದ ಮೇಳ (ಕಾದಂಬರಿ)
೨ ಸಣ್ಣ ಕತೆಯ ಸೊಗಸು (ಪ್ರಬಂಧ)
೩ ಉಳ್ಳವರ ನೆರಳು (ನಾಟಕ)
೪ ಧನ್ವಂತರಿಯ ಚಿಕಿತ್ಸೆ (ಕುವೆಂಪು ಕಥೆ ಆಧಾರಿತ ನಾಟಕ)
೫ ಮಾನಿಷಾದ (ಗಿರೀಶ್ ಕಾರ್ನಾಡರ ನಾಟಕಾಧಾರಿತ ಬೊಂಬೆ ನಾಟಕ)
೬ ಮಾತಿನಿಂದ ಲೇಖನಿಗೆ
೭ ಬಂದರೋ ಬಂದರು (ಬೀದಿ ನಾಟಕ)

ಓದು, ನಾಟಕ, ಲಲಿತ ಕಲೆ, ವಿಚಾರ ವಿನಿಮಯಗಳ ಹವ್ಯಾಸವಿದೆ. ಸೂತ್ರದ ಬೊಂಬೆಗಳ ತಯಾರಿ, ಆ ಮಾಧ್ಯಮದ ಮೂಲಕ ಹೆಚ್ಚು ಮಂದಿಯನ್ನು ತಲುಪುವ ಯತ್ನ. ಆ ವಿಭಾಗದ ಬೇರೆ ಬೇರೆ ಪ್ರಕಾರಗಳ ಪ್ರಯೋಗದಲ್ಲಿ ಆಸಕ್ತಿ ಇವರಿಗಿದೆ.

ಡಾ|| ವಿಜಯಾ ಡಿ.

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ದಬ್ಬೆ ಗ್ರಾಮದಲ್ಲಿ ಜನಿಸಿದ ಇವರು ಎಂ.ಎ., ಪದವೀಧರೆ. ಪಿ.ಎಚ್.ಡಿ. ಮುಗಿಸಿ ಮೈಸೂರು ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಉಪನ್ಯಾಸಕಿಯಾಗಿ ಉದ್ಯೋಗ ಮಾಡುತ್ತಿದ್ದಾರೆ. ಸರಳತೆಯ ಸಾಕಾರಮೂರ್ತಿಯಾಗಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಇರುತ್ತವೆ (ಕವನ ಸಂಕಲನ)
೨ ಸಾನಂದ ಗಣೇಶ ಸಾಂಗತ್ಯ (ಸಂಪಾದನೆ)
೩ ಸಂಪ್ರೀತಿ (ವಿಮರ್ಶೆ)
೪ ಮೇರಿ ಮೆಕೆಲಿಯಾಡ್ ಬೆಥೂನೆ (ವ್ಯಕ್ತಿಚಿತ್ರ)



ವಿಜಯಾ ಶಂಕರ್

ಗೃಹಿಣಿಯಾಗಿರುವ ವಿಜಯಾ ಬಿ.ಎ., ಪದವಿಯನ್ನು ಪಡೆದುಕೊಂಡಿದ್ದಾರೆ. ಜೊತೆಗೆ ಎಂ.ಎ., ಎರಡನೆಯ ವರ್ಷದ ಹಾಗೂ ಬಿ.ಎಡ್. ವಿದ್ಯಾರ್ಥಿನಿಯೂ ಆಗಿದ್ದಾರೆ. ಜೊತೆಜೊತೆಯಲ್ಲಿ ಸಾಹಿತ್ಯ ರಚನೆಯಲ್ಲೂ ನಿರತರಾಗಿದ್ದಾರೆ. ನಾಡಿನ ಪತ್ರಿಕೆಗಳಲ್ಲಿ ಇವರು ಅನೇಕ ಸಣ್ಣ ಕತೆಗಳನ್ನು ಬರೆದಿರುವರಲ್ಲದೆ ತೆಲುಗು ಭಾಷೆಯಿಂದ ಕನ್ನಡಕ್ಕೆ, ಕನ್ನಡದಿಂದ ತೆಲುಗು ಭಾಷೆಗೆ ಕತೆಗಳನ್ನು ಭಾಷಾಂತರಿಸುತ್ತಲೂ ಇದ್ದಾರೆ. ಇವರ ಹಲವಾರು ಲೇಖನಗಳು ಬೆಳಕು ಕಂಡಿವೆ.

ಇವರ ಪ್ರಕಟಿತ ಕೃತಿ :

೧ ಇದು ಯಾವ ನ್ಯಾಯ ? (ತೆಲುಗಿನಿಂದ ಕನ್ನಡಕ್ಕೆ
(ಕಾದಂಬರಿ) ಅನುವಾದ)-೧೯೭೯



ವಿಜಯಾ ಸುಬ್ಬರಾಜ್

"ವಿಜಯಾಸು" "ವಿಜಯ ಲಕ್ಷ್ಮಿ ಸುಬ್ಬರಾಜ್" ಎಂಬ ಕಾವ್ಯನಾಮ. ಇವರು ಬಿ.ಎಸ್ಸಿ. ಕನ್ನಡ ಹಾಗೂ ಇಂಗ್ಲಿಷ್ ಎಂ.ಎ. ಪದವೀಧರೆ. ಎಂ.ಇ.ಎಸ್. ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೃಷಿ ನಡೆಸಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಸೌರಭ ಸೇತು (ಕಾದಂಬರಿ) ಭಾಗ ೧ - ೧೯೭೯
ಭಾಗ ೨ - ೧೯೮೦

೨ ತ್ರಿಶಂಕು (ಕವನ ಸಂಕಲನ) - ೧೯೮೧

೩ ಬಸವಣ್ಣ (ವ್ಯಕ್ತಿ ಪರಿಚಯ) - ೧೯೮೦

೪ ಮಾನಿಷಾದ (ಕಥಾ ಸಂಕಲನ) - ೧೯೮೦

ವಿಜಯಾ ಸಂಗೀತ, ನೃತ್ಯ ರೂಪಕಗಳನ್ನು ರಚಿಸುವುದರಲ್ಲಿ ಹಾಗೂ ದಿಗ್ದರ್ಶಿಸುವುದರಲ್ಲಿ ಪ್ರಯೋಗಶೀಲರಾಗಿದ್ದಾರೆ. ಆಕಾಶವಾಣಿಯ ಕಾರ್ಯಕ್ರಮಗಳಲ್ಲಿ ಕವಿಗೋಷ್ಠಿಗಳಲ್ಲಿ, ವಿಚಾರವೇದಿಕೆಗಳಲ್ಲಿ ಭಾಗವಹಿಸುತ್ತಾರೆ.



ವಿಜಯಾಂಬಾ ಟಿ. ಆರ್

"ವಿಜಯಾ ನಾಗರಾಜ್" ಎಂದು ಬರೆಯುತ್ತಿರುವ ವಿಜಯಾಂಬಾರವರು ಅನೇಕ ಸಣ್ಣ ಕತೆ, ವಿಡಂಬನೆ ಹಾಗೂ ಕಾದಂಬರಿ ಬರೆದಿದ್ದಾರೆ. ಹೆಬ್ಬೂರಿನಲ್ಲಿ ಜನಿಸಿದ ಇವರು ಬೆಂಗಳೂರಿನ ನಿವಾಸಿಗಳಾಗಿದ್ದಾರೆ.

ಇವರ ಪ್ರಕಟಿತ ಕೃತಿ :

ಸ್ವಾಭಿಮಾನಿ (ಕಾದಂಬರಿ) - ೧೯೮೧

ಅನೇಕ ಸಣ್ಣ ಕತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.



ವಿಮಲಾ

ವಿಮಲಾ ಚೆನ್ನಬಸಪ್ಪ ಕೆಂಕೆರೆಮಠ ಅವರು ಅನೇಕ ರಂಗಗಳಲ್ಲಿ ಹೆಸರುವಾಸಿಯಾಗಿದ್ದಾರೆ. ತಾಯ್ನಾಡಿಗಿಂತ ವಿದೇಶದಲ್ಲಿ ತುಂಬಾ ಪರಿಚಿತರಾಗಿದ್ದಾರೆನ್ನಬಹುದು,

೧೯೩೨ರಲ್ಲಿ ಧಾರವಾಡದಲ್ಲಿ ಜನಿಸಿದ ವಿಮಲಾ.ಬಾಲ್ಯದಿಂದಲೂ ಪ್ರತಿಭಾವಂತೆ ಗಿಟಾರ್. ಕೊಳಲು, ಜಲತರಂಗ ಮೊದಲಾದ ಸಂಗೀತ ವಾದ್ಯಗಳನ್ನು ನುಡಿಸಬಲ್ಲರು. ಚಿತ್ರಕಲೆಯಲ್ಲಿ ಆಸಕ್ತರು. ಭರತನಾಟ್ಯ, ಕಥಕ್ ಮತ್ತು ಕಥಕ್ಕಳಿ ನೃತ್ಯಗಳಲ್ಲಿ ಪರಿಣಿತರು. ಇದಕ್ಕಾಗಿ ಅನೇಕ ಬಹುಮಾನ, ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಕವನ ರಚಿಸಿ ಸುಶ್ರಾವ್ಯವಾಗಿ ಹಾಡಲೂ ಬಲ್ಲರು. ಕನ್ನಡ ಮತ್ತು ಭೂಗೋಳ ಶಾಸ್ತ್ರದಲ್ಲಿ ಬಿ.ಎ. ಪದವೀಧರೆಯಾಗಿ, ಅಮೆರಿಕದಲ್ಲಿ ಎಂ.ಎಸ್. (ಗೃಹ ವಿಜ್ಞಾನ. ಕಲಾಶಿಕ್ಷಣ) ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಇಂಗ್ಲೀಷ್, ಫ್ರೆಂಚ್. ಸ್ಪ್ಯಾನಿಶ್ ಭಾಷಾ ಪಾರಂಗತೆಯಾಗಿದ್ದಾರೆ, ಅಮೇರಿಕದ ರಾಜಧಾನಿ ವಾಷಿಂಗ್ಟನ್ (ಡಿ.ಸಿ.) ಪಟ್ಟಣದಲ್ಲಿ ವಾಸವಾಗಿದ್ದು 'ಕಾವೇರಿ' ಎಂಬ ಕನ್ನಡ ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷರಾಗಿ, ಅಮೆರಿಕದ ಭಾಷಾ ಬ್ಯಾಂಕ್ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಆಲ್ ಇಂಡಿಯಾ ರೇಡಿಯೋ, ವಾಯ್ಸ್ ಆಫ್ ಅಮೆರಿಕಾಗಳಲ್ಲಿ ಇವರ ಸಂದರ್ಶನಗಳು ಪ್ರಸಾರವಾಗಿವೆ.

ಇವರ ಪ್ರಕಟಿತ ಕೃತಿಗಳು :

ಕವನ ಸಂಕಲನ :

೧ ನುಡಿ ಎನ್ನ ವೀಣೆ - ೧೯೬೯

೨ ಮಲ್ಲೀಗಿ ಅರಳ್ಯಾವ – ೧೯೭೯

೩ ಚೆನ್ನ - ೧೯೮೦

೧೯೮೦ರಲ್ಲಿ "ಮಲ್ಲಿಗಿ ಅರಳ್ಯಾವ" ಕವನ ಸಂಕಲನಕ್ಕೆ ಧಾರವಾಡದ ವಿದ್ಯಾ ವರ್ಧಕ ಸಂಘದ ಬಹುಮಾನ ದೊರೆತಿದೆ.



ವಿಮಲಾ ರಾಘವೇಂದ್ರ

ಮೈಸೂರಿನವರಾದ ವಿಮಲಾ ರಾಘವೇಂದ್ರ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ನಲವತ್ತರ ಹೊಸ್ತಿಲಲ್ಲಿರುವ ಕನ್ನಡ ಲೇಖಕಿಯಾಗಿದ್ದಾರೆ. ಎಸ್.ಎಸ್.ಎಲ್.ಸಿ. ಯವರೆಗೆ ವಿದ್ಯಾಭ್ಯಾಸ ನಡಸಿರುವ ಇವರಿಗೆ ಬಿ.ಇ.ಎಲ್. ಕಾರ್ಖಾನೆಯಲ್ಲಿ ವೃತ್ತಿ. ಚಿಕ್ಕಂದಿನಿಂದಲೇ ಶಾಲಾ ಪತ್ರಿಕೆಯಲ್ಲಿ ಇವರು ಕಥೆ-ಕವನಗಳನ್ನು ಪ್ರಕಟಿಸಿ ಮೆಚ್ಚುಗೆ ಗಳಿಸಿದ್ದಾರೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿ :

೧ ಬೆಳಕು (ಕಾದಂಬರಿ) - ೧೯೭೩
೨ ಬಳ್ಳಿಗಾಸರೆ ,, - ೧೯೭೫
೩ ಶುಭೋದಯ ,, - ೧೯೭೫
೪ ಹೆತ್ತ ಕರುಳು ,, - ೧೯೭೬
೫ ಬಾಳ ಹಾದಿಯಲ್ಲಿ - ೧೯೮೦

ಕಥಾಸಂಕಲನ :

೬ ಗುಲಾಬಿ ಬಾಡಿತ್ತು - ೧೯೭೫

೧೯೭೭ನೆಯ ಇಸವಿಯಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳೆಯರ ಪುಸ್ತಕ ಗಳಿಗೆ ಬಹುಮಾನದ ಯೋಜನೆಯಡಿಯಲ್ಲಿ ಇವರು ರಚಿಸಿದ "ಹೆತ್ತ ಕರುಳು" ಕಾದಂಬರಿಗೆ ಬಹುಮಾನ ಪ್ರಾಪ್ತಿ. ಸಾಹಿತ್ಯ ರಚನೆಯೊಂದಿಗೆ ಕಸೂತಿ, ಹೊಲಿಗೆ, ಕೈ ಕೆಲಸ ಮಾಡುವ ಹವ್ಯಾಸಗಳಿವೆ.



ವಿಮಲಾ ರಾಜಗೋಪಾಲ್

ಬೆಂಗಳೂರಿನ ವಿಮಲಾರವರು ಬಿ. ಎ. (ಆನರ್ಸ್) ಹಾಗೂ ಎಂ. ಎ., ಪದವೀಧರೆ. ಸಂಗೀತದಲ್ಲಿ ಸೀನಿಯರ್ ಪರೀಕ್ಷೆ ಮುಗಿಸಿದ್ದಾರೆ. ಸದ್ಯಕ್ಕೆ ಗೃಹಿಣಿಯಾಗಿ ಅಮೇರಿಕೆಯಲ್ಲಿ ನೆಲೆಸಿದ್ದಾರೆ.

ಇವರ ಪ್ರಕಟಿತ ಕೃತಿ :

ತುಂಟರ ತೇರು (ಹಾಸ್ಯ ಪ್ರಬಂಧ)-೧೯೫೮

ಜನಪದ ಗೀತೆಗಳನ್ನು ಸಂಗ್ರಹಿಸಿ ಹಾಡುವ ಹವ್ಯಾಸ ಬೆಳೆಸಿಕೊಂಡಿದ್ದಾರೆ. ಅಮೇರಿಕೆಯ ಫಿಲಿಡೆಲ್ಫಿಯಾದಲ್ಲಿ "ಇಂಡಸ್" ಸಂಸ್ಥೆಯ ಆಶ್ರಯದಲ್ಲಿ ಭಾರತ ಸಂಸ್ಕೃತಿಯ ಪರಿಚಯ ಮಾಡಿಕೊಡುವ ಉದ್ದೇಶ ಹೊಂದಿದ್ದಾರೆ. ನೃತ್ಯ ಶಾಲೆಯನ್ನೂ ನಡೆಸುತ್ತಿದ್ದಾರೆ.



ವಿಮಲಾ ರಾಮರಾವ್

ಬೆಂಗಳೂರಿನವರಾದ ವಿಮಲಾರವರು ಎಂ.ಎ., ಪದವೀಧರೆ. ಡಿಪ್ಲೊಮಾ ಇನ್ ಟೀಚಿಂಗ್ ಇಂಗ್ಲೀಷ್ ಮಾಡಿಕೊಂಡು ಬೆಂಗಳೂರು ವಿಶ್ವವಿದ್ಯಾಲಯದ ಇಂಗ್ಲೀಷ್ ವಿಭಾಗದಲ್ಲಿ ರೀಡರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಕನ್ನಡದಲ್ಲಿ ಕೆಲವು ಪುಸ್ತಕಗಳನ್ನು ಬರೆದಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಮಹಿಳೆಯರು ಮತ್ತು ನಗರ ಜೀವನ-೧೯೭೫
(ಮಹಿಳಾ ವರ್ಷದ ಕೊಡುಗೆ)

೨ "ಇಂಗ್ಲೀಷ್‌ನಲ್ಲಿ ಕೃತಿ ರಚನೆ ಮಾಡಿದ ಭಾರತೀಯರು"-೧೯೭೭
(ವಿಮರ್ಶಾ ಗ್ರಂಥ)

ಅನೇಕ ಲೇಖನಗಳನ್ನು ಬರೆದು ವಿಚಾರ ಸಂಕಿರಣಗಳಲ್ಲಿ ಪ್ರತಿಪಾದಿಸಿದ್ದಾರೆ. ತೋಟಗಾರಿಕೆ ಇವರಿಗೆ ಪ್ರಿಯವಾದ ಹವ್ಯಾಸವಾಗಿದೆ.



ವಿಶಾಲಾಕ್ಷಿ ದಕ್ಷಿಣಾಮೂರ್ತಿ (ವಿಶಾಲಾಕ್ಷಿ ಟಿ. ಎನ್.)

ವಿಶಾಲಾಕ್ಷಿ ದಕ್ಷಿಣಾಮೂರ್ತಿಯವರ ಜನ್ಮಸ್ಥಳ ಚಳ್ಳಕೆರೆ. ಈಗ ಸದ್ಯಕ್ಕೆ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಈ ಒಂದು ದಶಕದಿಂದ ಕಾದಂಬರಿಯ ರಚನೆಯಲ್ಲಿ ಕೈ ಹಾಕಿ ಸುಮಾರು ಇಪ್ಪತ್ತು ಕಾದಂಬರಿಗಳನ್ನು ಬರೆದಿದ್ದಾರೆ. ೧೯೭೭ರಲ್ಲಿ ಬರೆದ 'ವ್ಯಾಪ್ತಿ-ಪ್ರಾಪ್ತಿ' ಕಾದಂಬರಿಗೆ ವರ್ಷದ ಅತ್ಯುತ್ತಮ ಕಾದಂಬರಿ ಪ್ರಶಸ್ತಿ ದೊರೆತಿದೆ. ಇವರ ಲೇಖನ ಮತ್ತು ಸಣ್ಣ ಕತೆಗಳು ನಾಡಿನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಇವರ ಪ್ರಕಟಿತ ಕೃತಿಗಳು :

೧ ವಸುಮತಿ
೨ ಪಡಿ ಎಡವಿ ಬಂದವಳು
೩ ಕಲ್ಲು ಬೊಂಬೆ ಕರಗಿತು
೪ ದೊಡ್ಡ ಮನಸ್ಸಿನವರು
೫ ಶ್ರೀವನಿತೆಯರಸನೆ
೬ ಅನುರಾಗಿಣಿ
೭ ಪಶ್ಚಾತ್ತಾಪ
೮ ಕಲ್ಪಲತೆ
೯ ಪ್ರೇಮರಶ್ಮಿ
೧೦ ಋಣಫಲ
೧೧ ಆಸೆಯ ಲೀಲೆ
೧೨ ಭ್ರಮೆಯ ಬದುಕಿನ ಸುತ್ತ
೧೩ ವಿಮುಕ್ತಿ
೧೪ ಮನೆಯ ಮಗ
೧೫ ಪ್ರೇಮದ ಜಲಪಾತ
೧೬ ಸುಳಿಗೆ ಸಿಕ್ಕವರು
೧೭ ವ್ಯಾಪ್ತಿ-ಪ್ರಾಪ್ತಿ



ವಿಶಾಲಾಕ್ಷಿ ನಃರಾಯಣರಾವ್

ವಿಶಾಲಾಕ್ಷಿಯವರು ಎಸ್.ಎಸ್.ಎಲ್.ಸಿ. ವರೆಗಿನ ವಿದ್ಯಾಭ್ಯಾಸ ಮಾಡಿದ್ದಾರೆ. ಹಾಸನ ಇವರ ಜನ್ಮಸ್ಥಳ. ಹಿಂದಿ ರಾಷ್ಟ್ರಭಾಷಾ ಪಾಸಾಗಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಐದು ವರ್ಷ ಕೆಲಸ ಮಾಡಿ ನಂತರ ಮಾಧ್ಯಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಎಂಟು ವರ್ಷ ದುಡಿದಿದ್ದಾರೆ. ಬದುಕಿನ ಕಂಡುಂಡ ಅನುಭವವನ್ನು ನಾಡಿನ ಅನೇಕ ಪತ್ರಿಕೆಗಳಲ್ಲಿ ಹಾಗೂ ಆಕಾಶವಾಣಿಯಲ್ಲಿ ಲೇಖನ, ಕಥೆಗಳ ಮುಖಾಂತರ ಬಿತ್ತರಿಸಿದ್ದಾರೆ.

ಇವರ ಪ್ರಕಟಿತ ಕೃತಿ :

ಮೂಕಪ್ರೇಮ-೧೯೫೭



ವೀಣಾ ಶಾಂತೇಶ್ವರ್

ಧಾರವಾಡದ ವೀಣಾರವರು ಹೊಸ ರೀತಿಯ ಬರವಣಿಗೆಯಲ್ಲಿ ಹೆಸರಾಗಿದ್ದಾರೆ. ಕನ್ನಡ, ಇಂಗ್ಲಿಷ್, ಮರಾಠಿ, ಹಿಂದಿ ಭಾಷೆಗಳ ಸಾಹಿತ್ಯವನ್ನು ಓದಿದ್ದಾರೆ. ಇಂಗ್ಲಿಷ್ ಎಂ.ಎ., ಎಂ.ಲಿಟ್ (ಇ.ಎಲ್.ಟಿ.) ಪಡೆದು ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಪ್ರಾಧ್ಯಾಪಕಿಯಾಗಿದ್ದಾರೆ. ವೀಣಾ ಯಲಬುರ್ಗಿ ಇವರ ವಿವಾಹ ಪೂರ್ವದ ಹೆಸರು.

೧೯೬೯ರಲ್ಲಿ "ಕವಲು" ಕಥಾ ಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರೆತಿದೆ.

"ಗಂಡಸರು" ಕಿರುಕಾದಂಬರಿ 'ಪ್ರಜಾವಾಣಿ'ಯ ದೀಪಾವಳಿ ಕಾದಂಬರಿ ಸ್ಪರ್ಧೆ (೧೯೭೫)ಯಲ್ಲಿ ಪ್ರಥಮ ಬಹುಮಾನ ಗಳಿಸಿದೆ.

ಇವರ ಪ್ರಕಟಿತ ಕಥಾ ಸಂಕಲನಗಳು :

೧ ಮುಳ್ಳುಗಳು - ೧೯೬೯
೨ ಕೊನೆಯದಾರಿ - ೧೯೭೨
೩ ಕವಲು - ೧೯೭೬
೪ ಗಂಡಸರು (ಕಾದಂಬರಿ) - ೧೯೭೫

ಇವರ ಕಿರುಗತೆ "ಅತಿಥಿ" ಪ್ರಾಯೋಗಿಕ ಚಲನಚಿತ್ರವಾಗಿ ಮೆಚ್ಚುಗೆ ಪಡೆದಿದೆ. ಸಾಂಪ್ರದಾಯಿಕ ಚಿತ್ರಕಲೆ, ಕೊಳಲು, ಹಿಂದೂಸ್ಥಾನಿ ಸಂಗೀತ ಹಾಗೂ ಪ್ರವಾಸದಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದಾರೆ.



ವೇದವತಿ

"ಅರ್ಪಿತ" ಕಾವ್ಯನಾಮದಿಂದಲೂ ಬರೆಯುವ ವೇದವತಿಯವರು ತುಮಕೂರು ಜಿಲ್ಲೆಯ ಅರಕೆರೆಯಲ್ಲಿ ಜನಿಸಿ, ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಅನೇಕ ಕಥಾಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ. 'ತುಷಾರ' ಚಿತ್ರಕವನ ಸ್ಪರ್ಧೆಯಲ್ಲಿ "ಮುಪ್ಪು" ಕವನ ಬಹುಮಾನ ಗಳಿಸಿದೆ. ಮತ್ತು ಮೈಸೂರಿನ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆದ ಕಥಾ ಸ್ಪರ್ಧೆಯಲ್ಲಿ "ಸಿಂಧು" ಕತೆ ದ್ವಿತೀಯ ಬಹುಮಾನ ಗಳಿಸಿದೆ. ತುಮಕೂರಿನಲ್ಲಿ ನಡೆದ ಅ.ನ.ಕೃ. ಕಥಾ ಸ್ಪರ್ಧೆಯಲ್ಲಿ "ಸಂಗಮ" ಹಾಗೂ "ಸವಿನೆನಪು" ಕತೆಗಳು ಬಹುಮಾನ ಗಳಿಸಿವೆ.

ಇವರ ಪ್ರಕಟಿತ ಕೃತಿಗಳು :

೧ ಬಲತಾಯಿ (ಕಾದಂಬರಿ) - ೧೯೭೧
೨ ಆಕಾಂಕ್ಷೆ ,, - ೧೯೭೩
೩ ಅಹವಾಲು (ಕವನ ಸಂಗ್ರಹ) - ೧೯೮೧

ನಾಡಿನ ಅನೇಕ ಪತ್ರಿಕೆಗಳಲ್ಲಿ ಇವರ ಕತೆ, ಕವನ, ಲೇಖನಗಳು ಪ್ರಕಟವಾಗಿವೆ. ವೇದವತಿಯವರು ಚಿತ್ರಗಳನ್ನು ರಚಿಸುವ ಹವ್ಯಾಸವನ್ನೂ ಇಟ್ಟುಕೊಂಡಿದ್ದಾರೆ.



ವೈಜಯಂತಿಮಾಲಾ

ಮಂಡ್ಯ ವೈಜಯಂತಿಮಾಲಾ ಇವರ ಹುಟ್ಟೂರು. ಗೃಹಿಣಿಯಾಗಿ ಗೃಹಕೃತ್ಯ ಮಾಡುತ್ತ ಕನ್ನಡ ಎಂ.ಎ. ವಿದ್ಯಾಭ್ಯಾಸ ಮಾಡಿದ್ದಾರೆ.

ಇವರ ಪ್ರಕಟಿತ ಕೃತಿ :

ವಡ್ಡಗೆರೆ ನಾಗಮ್ಮ - ೧೯೮೧

ಜಾನಪದ ಸಾಹಿತ್ಯ ಸಂಗ್ರಹಣೆ ಮತ್ತು ಪ್ರಕಟಣೆಯಲ್ಲಿ ಆಸಕ್ತಿ ಹೊಂದಿದ್ದಾರೆ.



ಶಂಕರಮ್ಮ ಗು.

ಬೆಂಗಳೂರಿನ ಶಂಕರಮ್ಮನವರ ಶಿಕ್ಷಣ ಕೇವಲ ಪ್ರಾಥಮಿಕ ಹಂತದಲ್ಲಷ್ಟೇ ನಡೆದಿದ್ದರೂ ಅವರು ಸ್ವತಃ ಮನೆಯಲ್ಲಿ ಓದುವ - ಬರೆಯುವ ಅಭ್ಯಾಸ ಇಟ್ಟುಕೊಂಡವರು. ಲೇಖನ - ಕವನ ರಚನೆಯಲ್ಲಿ ಆಸಕ್ತಿಯಿದ್ದರೂ ಅಧ್ಯಾತ್ಮದತ್ತ ಅವರ ಒಲವು ಹೆಚ್ಚು. ಆದರ ಫಲ ವಚನರೂಪದಲ್ಲಿ ಜ.ಚ.ನಿ. ಯವರ ಜೀವನ ಚರಿತ್ರೆ ಕೃತಿಗಳನ್ನು ರಚಿಸಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ನುಡಿಗಟ್ಟು (ವಚನ ಸಾಹಿತ್ಯ) - ೧೯೫೮
೨ ಕಾರುಣ್ಯ ಕಿರಣ (ಪತ್ರ ಸಾಹಿತ್ಯ) - ೧೯೬೪
೩ ಮಿಾಸಲು (ಕವನ) - ೧೯೬೯
೪ ಹೊನಲು ,, - ೧೯೭೦
೫ ಚಿನ್ನಚೇತನ - ೧೯೭೧
೬ ವಿಚಾರಧಾರೆ - ೧೯೭೨
೭ ರಸಗಂಗೆ - ೧೯೭೨
೮ ನಂದಾದೀಪ - ೧೯೭೩
೯ ಮುತ್ತು ಮಿಂಚು - ೧೯೭೫
೧೦ ಸಗ್ಗದೆಡೆಗೆ - ೧೯೭೫
೧೧ ಜಗದ್ಗುರುವಿನ ೧೦೮ ನಾಮಾವಳಿ - ೧೯೭೬
೧೨ ಶ್ರೀ ಗುರು ಕರಿಬಸವೇಶ್ವರ ಸ್ತೋತ್ರ - ೧೯೬೫
೧೩ ಜ.ಚ.ನಿ. ಜೀವನ ಚರಿತ್ರೆ - ೧೯೭೮

ಧಾರ್ಮಿಕ ಚಿಂತನೆ, ಸಾಮಾಜಿಕ ಕಳಕಳಿ, ಸಾಹಿತ್ಯಾಸಕ್ತಿಯೊಂದಿಗೆ 'ಮಾಮಿಡಿ' ತ್ರೈಮಾಸಿಕ ಉಪಸಂಪಾದಕಿಯಾಗಿ ಪತ್ರಿಕೋದ್ಯಮದಲ್ಲಿ ಕೆಲಸ ಮಾಡಿದ್ದಾರೆ. ಜೊತೆಗೆ 'ಭ್ರಮರಾಂಬ ಬಳಗ'ದ ಸಂಚಾಲಕಿ ಆಗಿದ್ದಾರೆ.



ಶ್ಯಮಂತಕಮಣಿ ನರೇಂದ್ರನ್

ವೈದ್ಯಕೀಯ ಪದವೀಧರೆ ಶ್ಯಮಂತಕಮಣಿಯವರು. ಶಿಶುವೈದ್ಯ ತಜ್ಞೆಯಾಗಿದ್ದಾರೆ. ಎಂ.ಬಿ.ಬಿ.ಎಸ್., ಡಿ.ಸಿ.ಎಚ್. (ಲಂಡನ್) ಎಂ.ಡಿ. ಅವರ ವಿದ್ಯಾರ್ಹತೆಗಳು. ಮಕ್ಕಳ ಬೆಳವಣಿಗೆಯ ವಿಷಯವಾಗಿ ಅಪಾರ ಆಸಕ್ತಿವಹಿಸಿದ್ದಾರೆ. ಭಾಷಣ, ಲೇಖನಗಳಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ.

ಇವರ ಪ್ರಕಟಿತ ಕೃತಿ :

ನಮಗೆಂಥಾ ಮಕ್ಕಳು ಬೇಕು-೧೯೭೬-೭೯



ಶರ್ವಾಣಿ
ಶಾರದಮ್ಮ ಎಸ್. ಆರ್.

"ಶರ್ವಾಣಿ" ಕಾವ್ಯನಾಮದಿಂದ ಸಾಹಿತ್ಯ ಪ್ರಪಂಚಕ್ಕೆ ಪರಿಚಿತರಾಗಿರುವ ಶಾರದಮ್ಮನವರ ಹುಟ್ಟೂರು ಕೋಲಾರ. ಸುಮಾರು ಇಪ್ಪತ್ತೈದು ವರ್ಷ ಆಂಧ್ರಪ್ರದೇಶದಲ್ಲಿದ್ದು ಇದೀಗ ಕನ್ನಡನಾಡಿಗೆ ಹಿಂದಿರುಗಿ ಬಂದಿರುವ ಇವರು ಕೆಲವು ಕಥೆ ಹಾಗೂ ಕಾದಂಬರಿ ಬರೆದಿದ್ದಾರೆ. ಕನ್ನಡದಿಂದ ತೆಲುಗಿಗೂ ಅನುವಾದಿಸಿದ್ದಾರೆ.

ಇವರ ಪ್ರಕಟಿತ ಕೃತಿ :

೧ ಕಾಲವಾಹಿನಿ (ಕಾದಂಬರಿ)-೧೯೮೧

ಅನುವಾದಿತ ಕೃತಿಗಳು :

ತ್ರಿವೇಣಿಯವರ ಕಾದಂಬರಿಗಳು :

೧	ಬೆಳ್ಳಿ ಮೋಡ	(ಕನ್ನಡದಿಂದ ತೆಲುಗಿಗೆ)
೨	ತಾವರೆಯ ಕೊಳ	,,
೩	ಅಪಸ್ವರ	,,
೪	ಅಪಜಯ	,,
೫	ವಸಂತಗಾನ	,,
೬	ಕೀಲುಗೊಂಬೆ	,,
೭	ಶರಪಂಜರ	,,

ನಿರಂಜನರವರ ಕಾದಂಬರಿಗಳು :

೧ ಅಭಯ (ಕನ್ನಡದಿಂದ ತೆಲುಗಿಗೆ)

೨ ವಿಮೋಚನೆ ,,

ಶಿವರಾಮ ಕಾರಂತರ ಕಾದಂಬರಿ :

ಚೋಮನದುಡಿ



ಶಶಿಕಲಾ ವಸ್ತ್ರದ

ಕರ್ನಾಟಕದ ಉತ್ತರ ಭಾಗವಾದ ವಿಜಾಪುರದ ಶಶಿಕಲಾರವರು ಕನ್ನಡ ಎಂ.ಎ. ಪದವೀಧರೆ. ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿ. ಭಾಷಣ ಕಲೆಯಲ್ಲಿ ಪರಿಣಿತೆ. ಕವನ ಇವರ ಸಾಹಿತ್ಯ ಮಾಧ್ಯಮ.

ಇವರ ಪ್ರಕಟಿತ ಕೃತಿಗಳು :

೧ ಗುಬ್ಬಿಮನಿ (ಕವನ ಸಂಕಲನ)-೧೯೭೮
೨ ಬುಲಾಮಿ ಹಾಡುಗಳು (ಜಾನಪದ ಸಂಗ್ರಹ)-೧೯೭೬
೩ ಪ್ರಶ್ನೆ (ಕವನ ಸಂಗ್ರಹ)-೧೯೮೧

ಪುಸ್ತಕಗಳ ಸಂಗ್ರಹ, ಓದು ಬರಹ, ಸಂಗೀತ ಕೇಳುವುದರಲ್ಲಿ ಆಸಕ್ತಿ ಬಹಳ. ಇವರು ಅನೇಕ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಇವರ ಕವನಗಳೂ, ಲೇಖನಗಳೂ ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.



ಶಾಂತ ಈಚನೂರು

ಈಚನೂರಿನ ಸಹೋದರಿಯರಲ್ಲಿ ಒಬ್ಬರಾಗಿದ್ದಾರೆ ಶಾಂತಾರವರು. ಎಂ.ಎ., ಎಂ.ಲಿಟ್. ಪದವೀಧರೆ. ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಗ್ರಂಥಪಾಲಕಿಯಾಗಿ ಕೆಲಸ ಮಾಡುತ್ತಿದ್ದಾರೆ.

ದೀಪಾವಳಿ, ಯುಗಾದಿಯ ವಿಶೇಷ ಕಥಾ ಸ್ಪರ್ಧೆಗಳಲ್ಲಿ ಅನೇಕ ಬಹುಮಾನಗಳನ್ನು ಪಡೆದಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಅಲೆಗಳು
೨ ಹೆಜ್ಜೆಗಳು
೩ ಧ್ವನಿಗಳು
೪ ಮುಖವಾಡ
೫ ನಿನ್ನೆ ನಡೆದ ನನ್ನ ಕಥೆ
೬ ಗೆಲುವು
೭ ತಲ್ಲಣ ನೂರು ಬಗೆ
೮ ಸ್ಪಂದನ
೯ ಗೋಡೆಗಳ ನಡುವೆ
೧೦ ಅಪರಿಚಿತ
೧೧ ಜೀಡನ ಬಲೆ
೧೨ ವಿಭ್ರಾಂತ
೧೩ ಸಂಪನ್ನರು
೧೪ ಹರೆಯ ನೀ ಬಂದಂತೆ ಸಮಯ
೧೫ ಬಂಧಿತರು
೧೬ ಕಲ್ಪನಾ ಛಾಯೆಯು
೧೭ ತಪ್ಪು
೧೮ ವಿಭ್ರಾಂತ

ಪ್ರವಾಸ ಹಾಗೂ ಭಾವಗೀತೆಗಳಲ್ಲಿ ಆಸಕ್ತಿ ಇದೆ.




ಡಾ|| ಶಾಂತಾ ಕೆ.

ಬೆಂಗಳೂರಿನಲ್ಲಿ ನೆಲೆಸಿರುವ ಶಾಂತಾರವರು ಕನ್ನಡ ಎಂ.ಎ. ಪದವೀಧರೆ. ಜೊತೆಗೆ ಹೋಮಿಯೋಪತಿ ವೈದ್ಯರೂ ಸಹ. ಕತೆ, ಕಾದಂಬರಿ ಬರೆಯುವ ಹವ್ಯಾಸವಿದೆ. ಕನ್ನಡ ಪತ್ರಿಕೋದ್ಯಮ ಶಿಕ್ಷಣ ಪಡೆದಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಮುತ್ತುರತ್ನ ಮತ್ತು ಇತರ ಕತೆಗಳು (ಕಥಾ ಸಂಗ್ರಹ)
೨ ಬೆರೆಯದ ಮನ (ಕಾದಂಬರಿ)
೩ ಭಾಗ್ಯೋದಯ ,,
೪ ಎರಡು ಹೂ ,,
೫ ಮಗ ಯಾರು ? ,,
೬ ವೈರ ಸಾಧಿಸಿತು ,,
೭ ಎ. ಆರ್. ಕೃಷ್ಣಶಾಸ್ತ್ರಿ (ಜೀವನ ಚರಿತ್ರೆ)
೮ ಗೃಹ ವಿಜ್ಞಾನ (ವಿಚಾರ ಸಾಹಿತ್ಯ)
೯ ಮಾಲಾರ್ಪಣೆ (ಸಂಪಾದನಾ ಗ್ರಂಥ)

ಅನೇಕ ಸಣ್ಣ ಕತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರು ಎ.ಆರ್. ಕೃಷ್ಣಶಾಸ್ತ್ರಿಗಳ ಸಂಸ್ಕೃತ ಪೀಠದ ಸಂಚಾಲಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಸಾಹಿತಿ ಎ.ಆರ್.ಕೃಷ್ಣಶಾಸ್ತ್ರಿಗಳ ಮಗಳೂ ಆಗಿದ್ದಾರೆ.



ಶಾಂತಾ ದಿವಾಕರ

ಬೆಂಗಳೂರಿನ ಶಾಂತಾ ದಿವಾಕರರವರು ಎಂ.ಎ., ಎಂ.ಎಡ್. ಪದವೀಧರೆ ಪಿ.ಜೆ.ಡಿ.ಟಿ.ಇ.ಸಿ.ಐ.ಎಫ್.ಎಲ್. ಹೈದ್ರಾಬಾದಿನಲ್ಲಿ ಮಾಡಿದ್ದಾರೆ. ಬೆಂಗಳೂರಿ, ಎಂ.ಇ.ಎಸ್. ಟೀಚರ್ಸ್ ಕಾಲೇಜಿನಲ್ಲಿ ಪ್ರಾಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದಾರೆನ ಜಗತ್ತಿನ ಅನೇಕ ದೇಶಗಳಲ್ಲಿ ಸುತ್ತಾಡಿ ಬಂದಿದ್ದಾರೆ. ಇವರು ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಈಶಾವಾಸೋಪನಿಷತ್ತು (ಭಾಷಾಂತರ)
೨ ಮಕ್ಕಳ ಮನಸ್ಸು (ಮನೋ ವೈಜ್ಞಾನಿಕ)
೩ ಆನಂದಾಂತರಂಗ (ಭಾವಗೀತೆಗಳು)

ಅನೇಕ ಪ್ರವಾಸ ಲೇಖನಗಳು, ಸಂದರ್ಶನ, ಪರಿಚಯ ಲೇಖನಗಳು ಪತ್ರಿಕೆಯಲ್ಲಿ, ಆಕಾಶವಾಣಿಯಲ್ಲಿ ಪ್ರಸಾರಗೊಂಡಿವೆ. ಒಳ್ಳೆಯ ಭಾಷಣಗಾರ್ತಿ. ಪತ್ರಿಕೋದ್ಯಮದಲ್ಲಿ ಸಾಂಸ್ಕೃತಿಕ ನಿರ್ದೇಶಕಿಯಾಗಿ "ಸಂಯುಕ್ತ ಕರ್ನಾಟಕ"ದಲ್ಲಿ ಕೆಲಸ ಮಾಡಿದ್ದಾರೆ. ಇಂದಿನ ಶಿಕ್ಷಣ ಸಮಸ್ಯೆಗಳ ಬಗೆಗೆ ಸಂಶೋಧನೆ ನಡೆಸುತ್ತಿದ್ದಾರೆ. ಅನೇಕ ಸಂಘ ಸಂಸ್ಥೆಗಳಿಗೆ ಸದಸ್ಯರಾಗಿದ್ದಾರೆ.



ಶಾಂತಾದೇವಿ ಕಣವಿ

ಧಾರವಾಡದಲ್ಲಿ ನೆಲೆಸಿರುವ ಶಾಂತಾದೇವಿ ಕಣವಿಯವರ ಜನ್ಮಸ್ಥಳ ವಿಜಾಪುರ. ಸಣ್ಣ ಕತೆಗಳ ಕೃಷಿ ನಡೆಸುತ್ತಿದ್ದಾರೆ. ೧೯೭೪ರಲ್ಲಿ "ಬಯಲು ಆಲಯ" ಕಥಾಸಂಗ್ರಹಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ದ್ವಿತೀಯ ಬಹುಮಾನ ದೊರೆತಿದೆ. ಅವರ ಅನೇಕ ಕಥಾ ಸಂಕಲನಗಳು ಮರು ಮುದ್ರಣ ಕಂಡಿವೆ.

ಇವರ ಪ್ರಕಟಿತ ಕೃತಿಗಳು :

೧ ಸಂಜೆ ಮಲ್ಲಿಗೆ - ೧೯೬೭

೨ ಮರುವಿಚಾರ - ೧೯೭೮

೩ ಜಾತ್ರೆ ಮುಗಿದಿತ್ತು ೧೯೮೧

೪ ನಿಜಗುಣ ಶಿವಯೋಗಿ (ಮಕ್ಕಳ ಪುಸ್ತಕ) - ೧೯೭೪

೫ ಬಯಲು ಆಲಯ - ೧೯೭೩

ಇವರು ಸಾಹಿತಿ, ಕವಿ ಶ್ರೀಯುತ ಚೆನ್ನವೀರ ಕಣವಿಯವರ ಪತ್ನಿಯಾಗಿದ್ದಾರೆ. ಕಾವ್ಯಗಾಯನದಲ್ಲಿ ಅಭಿರುಚಿ ಬೆಳೆಸಿಕೊಂಡಿದ್ದಾರೆ.



ಶಾಂತಾದೇವಿ ಮಾಳವಾಡ

ಲೇಖಿಕಿ ಶಾಂತಾದೇವಿ ಮಾಳವಾಡ ಅವರು ಸಾಹಿತಿ ಪ್ರೊ:ಸ.ಸ.ಮಾಳವಾಡರ ಪತ್ನಿ.

ಅರವತ್ತನೆಯ ವರ್ಷದಲ್ಲಿ ಕಾಲಿಟ್ಟಿರುವ ಇವರು ಜನ್ಮತಃ ಬೆಳಗಾವಿ ಯವರು. ಕನ್ನಡ ಸಾಹಿತ್ಯ ಪರಿಷತ್ತಿನ ಪರೀಕ್ಷೆಗಳನ್ನು ಪಾಸುಮಾಡಿ ಮನೆಯಲ್ಲೇ ಇಂಗ್ಲೀಷ್. ಹಿಂದಿ, ಮರಾಠಿ ಶಿಕ್ಷಣವನ್ನು ಪಡೆದುಕೊಂಡಿದ್ದಾರೆ. ಕಥಾ ಸಾಹಿತ್ಯದಿಂದ ಹಿಡಿದು ಆಧ್ಯಾತ್ಮದ ಬರವಣಿಗೆಯವರೆಗೂ ಇವರ ಪ್ರತಿಭೆ, ಆಸಕ್ತಿ ಗಳು ಹರಡಿವೆ. ಕನ್ನಡ ಸಾಹಿತ್ಯಕ್ಕೆ ಇವರು ನೀಡಿದ ಕೊಡುಗೆಗಾಗಿ ರಾಜ್ಯ ಸಾಹಿತ್ಯ ಅಕಾಡೆಮಿಯು ಇವರಿಗೆ ಪ್ರಶಸ್ತಿಯನ್ನಿತ್ತಿದೆ. ಜ.ಚ.ನಿ. ಪ್ರಶಸ್ತಿಯಾಗಿ "ಸಾಹಿತ್ಯ ಸುಮ" ಎಂದು ಬಂಗಾರದ ಪದಕವೂ ಸಂದಿದೆ. ಅನೇಕ ಸಂಘ-ಸಂಸ್ಥೆ ಗಳಿಂದಲೂ ಸನ್ಮಾನಿತರಾಗಿದ್ದಾರೆ. ೧೯೮೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾ ಸಮ್ಮೇಳನದಲ್ಲಿ ಸನ್ಮಾನಿತರಾಗಿದ್ದಾರೆ.

ಮನೆಯಲ್ಲಿ ಉತ್ತಮ ಗೃಹಿಣಿಯೆನಿಸಿಕೊಂಡು ಸಮಾಜಸೇವೆಯಲ್ಲೂ ನಿರತರು. ವಿವಿಧ ಸಂಘ-ಸಂಸ್ಥೆಗಳಲ್ಲಿ ಜವಾಬ್ದಾರಿಯುತ ಸ್ಥಾನ, ಸದಸ್ಯತ್ವಗಳಲ್ಲಿದ್ದಾರೆ.

೧೯೭೩ ರಿಂದ ೭೮ರವರೆಗೆ ಕೇಂದ್ರ ಸಾಹಿತ್ಯ ಅಕಾಡಮಿಯ ಸದಸ್ಯರಾಗಿ ಸೇವೆ ಸಲ್ಲಿಸಿ, ಸದ್ಯಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಮೊಗ್ಗೆಯ ಮಾಲೆ
೨ ಕುಂಕುಮ ಬಲ(ಸಣ್ಣ ಕಥಾಸಂಕಲನ)
೩ ಕನ್ನಡ ತಾಯಿ
೪ ಕೆಳದಿ ಚೆನ್ನಮ್ಮ
೫ ಅಕ್ಕ ನಾಗಲಾಂಬಿಕೆ
೬ ಸ್ವಾಭಿಮಾನಿ ಬೆಳವಡಿ ರಾಣಿ
೭ ಸರದಾರ ವೀರನಗೌಡರು
೮ ನೀಲಾಂಬೆ (ಜೀವನ ಚರಿತ್ರೆ)
೯ ಮಹಿಳೆಯರ ಆತ್ಮಶ್ರೀ(ಪ್ರಬಂಧ)
೧೦ ಮಹಿಳಾ ಚೇತನ ,,
೧೧ ಮಧುಪಿಗೆ ಉಡುಗೊರೆ ,,
೧೨ ರಸಪಾಕ (ಪ್ರಬಂಧ)
೧೩ ಹರಿಹರನ ಪ್ರಾರ್ಥನೆಗಳು
೧೪ ಮಹಿಳೆಯರ ಅಲಂಕಾರ
೧೫ ಸೊಬಗಿನ ಮನೆ
೧೬ ಬಸವ ಪ್ರಕಾಶ
೧೭ ಅಕ್ಕನ ಭಾವ ಸೌರಭ
೧೮ ಶ್ರೀಗಿರಿಯಿಂದ ಹಿಮಗಿರಿ
೧೯ ಧಾರವಾಡ ಜಿಲ್ಲೆ
೨೦ ನಂದಾದೀಪ
೨೧ ದಾಂಪತ್ಯ ಯೋಗ
೨೨ ಬಸವಯುಗದ ಶಿವಶರಣೆಯರು (ಜೀವನ ಚರಿತ್ರೆ)



ಶಾರದಾ ವಿನಾಯಕ ಗೋಕಾಕ್

ಬೆಂಗಳೂರಿನಲ್ಲಿ ನೆಲಸಿರುವ ಶಾರದಾರವರು ಹೆಚ್ಚಿನ ವಿದ್ಯಾಭ್ಯಾಸದ ಅವಕಾಶ ವಿಲ್ಲವಿದ್ದರೂ ಪತಿ ಸಾಹಿತಿ ವಿ. ಕೃ. ಗೋಕಾಕರೊಂದಿಗಿನ ನಿಕಟ ಸಂಪರ್ಕದಿಂದ ಸಾಹಿತ್ಯಾಭ್ಯಾಸ ಮಾಡಿಕೊಂಡು ಬಂದಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಸುಮಂಗಲಾಕ್ಷತೆ (ಕವನ ಸಂಗ್ರಹ)-೧೯೬೯
೨ ಸಿಮ್ಲಾ ಸಿಂಫನಿ ,, (ಪತಿ ಗೋಕಾಕರೊಂದಿಗೆ)-೧೯೭೨
೩ ಒಲವೆ ನಮ್ಮ ಬದುಕು (ಆತ್ಮ ಚರಿತ್ರೆ)-೧೯೭೭

ಗೃಹಿಣಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಇವರು ವಿಶೇಷವಾಗಿ ಅಧ್ಯಾತ್ಮ ದತ್ತ ಗಮನವಿರಿಸಿದ್ದಾರೆ.



ಶಾರದಾ ಜಡೆ


ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆಯಲ್ಲಿ ಜನಿಸಿದ ಶಾರದಾರವರು ಹಿಂದೀ (ರಾಷ್ಟ್ರಭಾಷಾ ವಿಶಾರದ ಮತ್ತು ಪ್ರಚಾರಕ್) ಭಾಷಾ ಪಂಡಿತರು. ಪ್ರೌಢಶಾಲೆಯಲ್ಲಿ ಕನ್ನಡ, ಹಿಂದಿ ಶಿಕ್ಷಕಿಯ ಅನುಭವ. ಚರ್ಚಾ ಸ್ಪರ್ಧೆ ನಾಟಕಗಳಲ್ಲಿ ಆಸಕ್ತಿ ಸಾಹಿತ್ಯ ಕ್ಷೇತ್ರದಲ್ಲಿ ಕಾಲಿರಿಸುವಂತೆ ಮಾಡಿದವು. ಕಥೆ, ಕವನ, ಕಿರು ನಾಟಕಗಳನ್ನು ಸೃಷ್ಟಿಸಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ನವರತ್ನದ ಕಡಗ (ಕಥಾ ಸಂಗ್ರಹ)
೨ ಸಾಗರದೀಪ (ಕವನ ಸಂಗ್ರಹ)

ಅನೇಕ ರೂಪಕ, ಕತೆ, ಕವನಗಳು ಆಕಾಶವಾಣಿಯಲ್ಲಿ ಪ್ರಸಾರಗೊಂಡಿವೆ.

ಸಮಾಜ ಕಾರ್ಯಕರ್ತೆಯಾಗಿ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಚಿತ್ರ ಬಿಡಿಸುವಿಕೆ, ಬಣ್ಣದ ರಂಗೋಲೆ, ಕಲಾಕುಸುರಿಯ ಕೆಲಸ, ಕಾವ್ಯವಾಚನ, ವೀಣಾ ವಾದನಗಳಲ್ಲಿ ಅಭಿರುಚಿಯಿದೆ.



ಶಾರದಾ ಭಟ್ ಕೆ.

ಮೂವತ್ತೆರಡು ವರ್ಷದ ಶಾರದಾ ಭಟ್ ಬಿ. ಎ., ಎಲ್. ಎಲ್. ಬಿ. ಪದವೀಧರೆ. ಕತೆಗಳನ್ನು ಓದುವ, ಬರೆಯುವ ಒಲವುಳ್ಳ ಶಾರದಾ ನಾಟಕ ಪ್ರಿಯರೂ ಕೂಡ. ಇವರ ಅನೇಕ ಸಣ್ಣ ಕತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿ, ಕಥಾ ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಗಳಿಸಿವೆ.

ಇವರ ಪ್ರಕಟಿತ ಕೃತಿ :

ಪಯಣ (ಕಾದಂಬರಿ)-೧೯೭೬



ಶಾರದಾ ರಾಜಶೇಖರ್ ಜೆ.

"ಸುವರ್ಣಾ" ಎಂಬ ಕಾವ್ಯನಾಮದಿಂದ ಬರೆಯುವ ಲೇಖಕಿ ಶಾರದಾ ರಾಜಶೇಖರ್ ಚಿಕ್ಕಬಳ್ಳಾಪುರದಲ್ಲಿ ೧೯೩೦ರಲ್ಲಿ ಜನಿಸಿದರು. ಎಂ.ಎ., ಪದವೀಧರೆ. ರಾಷ್ಟ್ರಭಾಷಾ ಹಿಂದೀ ಪ್ರವೀಣೆ. ಸಂಗೀತ, ಸಮಾಜಸೇವೆಯಲ್ಲಿ ಆಸಕ್ತಿಯಿದೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿಗಳು :

೧ ಆತ್ಮಮಿಲನ
೨ ನಿರೀಕ್ಷೆ
೩ ಶುಕ್ರತಾರೆ
೪ ಚಿಂತನ ಶೀಲೆ
೫ ಅಕ್ಷಮ್ಯ
೬ ಸಂಚಿ ಹೊನ್ನಮ್ಮ (ಜೀವನ ಚಿತ್ರ) -೧೯೭೩
೭ ಶ್ರೀಮತಿ ಇಂದಿರಾಗಾಂದಿ (ಜೀವನ ಚಿತ್ರ)-೧೯೮೧
೮ ಕರ್ನಾಟಕ ರಾಜಕೀಯ ಮಹಿಳೆ (ಪ್ರಬಂಧ)-೧೯೮೧

ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ-ನವದೆಹಲಿ, ಮಕ್ಕಳ ವಿಭಾಗದಲ್ಲಿ "ಸಂಚಿ ಹೊನ್ನಮ್ಮ" ಎಂಬ ಕೃತಿಗೆ ೧೯೭೩ರಲ್ಲಿ ಬಹುಮಾನ ದೊರಕಿದೆ. ಇವಲ್ಲದೆ ಇವರ ಅನೇಕ ಸಣ್ಣಕತೆ, ಲೇಖನ, ಚುಟುಕಗಳು ಪ್ರಕಟಗೊಂಡಿವೆ.



"ಶಾರದೆ"
(ಮಾಲತಿ ರಾಮದಾಸ್)

"ಶಾರದೆ" ಕಾವ್ಯನಾಮದಿಂದ ಕಾದಂಬರಿ ಲೋಕದಲ್ಲಿ ಸುಪರಿಚಿತರಾಗಿರು ಮಾಲತಿಯವರು ಚಿಕ್ಕಮಗಳೂರಿನಲ್ಲಿ ಜನಿಸಿದರು. ಈಗ ಬೆಂಗಳೂರಿನಲ್ಲಿದ್ದಾ ಹಿಂದಿ ರಾಷ್ಟ್ರಭಾಷಾ ವಿದ್ವಾನ್ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿದ್ದಾರೆ. ಗೃಹಕೃ ದೊಂದಿಗೆ ಸಾಹಿತ್ಯವನ್ನು ಸಮನ್ವಯ ಮಾಡಿಕೊಂಡಿದ್ದಾರೆ. ಅನೇಕ ಸಣ್ಣಕತೆ ಕಾದಂಬರಿಗಳು ಧಾರಾವಾಹಿಯಾಗಿ ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವ ಮರುಮುದ್ರಣ ಕಂಡಿವೆ.

ಇವರ ಪ್ರಕಟಿತ ಕಾದಂಬರಿಗಳು :

೧ ಬಾಳಬೆಳಕು - ೧೯೬೪
೨ ಜೋಡಿ ಹಕ್ಕಿ - ೧೯೬೫
೩ ಆರತಿ ೧೯೬೮
೪ ಜೀವನ ರಾಗ - ೧೯೬೮
೫ ತ್ಯಾಗಮಯಿ - ೧೯೬೮
೬ ಒಲವಿನ ಬಲೆಯಲ್ಲಿ - ೧೯೭೦
೭ ಕಣ್ಮಣಿ - ೧೯೭೪



ಶಾಲಿನಿ ರಘುನಾಥ್

ಶಾಲಿನಿ ರಘುನಾಥ್ ೧೯೫೧ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಕಿಲಾರದಲ್ಲಿ ಜನ್ಮ ತಳೆದರು. ಬಂಗಾರದ ಪದಕ ಪಡೆದು ಕನ್ನಡ ಎಂ.ಎ. ಪದವೀಧರೆ ಎನಿಸಿಕೊಂಡರು. ಭಾಷಾಶಾಸ್ತ್ರದಲ್ಲಿ ಪ್ರಥಮ ರ್‍ಯಾಂಕ್, ಭಾಷಾಂತರ - ಜಾನಪದ ವಿಷಯಗಳಲ್ಲಿ ಡಿಪ್ಲೊಮಾ, ಬಿ.ಲಿಟ್. ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ತೇರ್ಗಡೆಯಾಗಿರುವ ಕೀರ್ತಿ ಇವರದು. ಸದ್ಯಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ಅಧ್ಯಾಪನ ವೃತ್ತಿ. (ಶಾಲಿನಿ ಹೆಗಡೆ ಹೆಸರಿನಲ್ಲಿ ಬರೆಯುತ್ತಿದ್ದರು).

ಇವರ ಪ್ರಕಟಿತ ಕೃತಿಗಳು :

೧ ಮಹಿಳೆ ಮತ್ತು ಶಿಕ್ಷಣ - ೧೯೭೫

೨ ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಹಾಡುಗಳು (ಸಂಪಾದನೆ) - ೧೯೭೯

೩ ಉಪಭಾಷಾ ಅಧ್ಯಯನ - ೧೯೭೯

ಅಂತರರಾಷ್ಟ್ರೀಯ ಮಹಿಳಾ ವರ್ಷದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ಮಹಿಳೆಯರ ಪುಸ್ತಕ ಸ್ಪರ್ಧೆಯಲ್ಲಿ 'ಮಹಿಳೆ ಮತ್ತು ಶಿಕ್ಷಣ'ಕ್ಕೆ ಬಹುಮಾನ ಬಂದಿದೆ. 'ಹವ್ಯಕ ಭಾಷೆಯ ಸಾಮಾಜಿಕ ಅಧ್ಯಯನ' ಕುರಿತು ಪಿ.ಎಚ್.ಡಿ. ಪ್ರಬಂಧ ಮುಗಿಸುವ ಸನ್ನಾಹದಲ್ಲಿದ್ದಾರೆ.

ಜಾನಪದ, ಆಟ, ಉಪಭಾಷಾ ಅಧ್ಯಯನ ಇವರ ಇನ್ನಿತರ ಹವ್ಯಾಸಗಳು. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಸತತವಾಗಿ ಎರಡು ವರ್ಷಗಳವರೆಗೆ ವಿಶ್ವವಿದ್ಯಾನಿಲಯದ ಅಥ್ಲೀಟ್ ಎಂಬ ದಾಖಲೆ ಸ್ಥಾಪಿಸಿರುವ ಆಟಗಾರ್ತಿ ಶಾಲಿನಿ.

ಪತ್ರಿಕೆಗಳಲ್ಲಿ ಇವರ ಅನೇಕ ಸಂಶೋಧನಾತ್ಮಕ ಲೇಖನಗಳು ಪ್ರಕಟಗೊಂಡಿವೆ.



ಶೋಭಾ ಮುತಾಲಿಕ ಪಾಟೀಲ

ಶೋಭಾ ಕಟ್ಟಿ ಎಂದೇ ಹೆಸರಾಗಿರುವ ಇವರು ಮದುವೆಯ ನಂತರ ಶೋಭಾ ಪಾಟೀಲ ಹೆಸರಿನಿಂದ ಬರೆಯುತ್ತಿದ್ದಾರೆ. ಬಿ.ಎಸ್ಸಿ., ಲಿಟ್, ಎಂ.ಎ. (ಕನ್ನಡ ಪದವೀಧರೆ. ಇವರು ಅನೇಕ ಕತೆಗಳು ಮತ್ತು ಲೇಖನಗಳನ್ನು ಬರೆದಿದ್ದಾರೆ.

ಇವರ ಪ್ರಕಟಿತ ಕೃತಿ :

ಮಹಿಳೆ ಮತ್ತು ವಿಜ್ಞಾನ -೧೯೭೫

ಈ ಕೃತಿಯು ೧೯೭೫ರ ಮಹಿಳಾ ವರ್ಷದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ ಗಳಿಸಿದೆ. ಆಕಾಶವಾಣಿಯ ಪ್ರಸಾರಕ್ಕೆಂದು ಏಕಾಂಕ ನಾಟಕಗಳನ್ನು ಬರೆದಿದ್ದಾರೆ. ಯುವಜನ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದಿದ್ದಾರೆ.



ಶೈಲಜಾ ಎಂ. ಭಟ್

ಇಪ್ಪತ್ತಾರು ವರ್ಷದ ಶೈಲಜಾ ಎಂ. ಭಟ್ ಅವರು ಬಿ.ಎ., ಬಿ.ಎಡ್. ಪದವೀಧರೆ. ಗ್ರಂಥರಚನೆ, ನಾಟಕಾಭಿನಯಗಳಲ್ಲಿ ಆಸಕ್ತರಾದ ಶೈಲಜಾರವರಿಗೆ ಅವರ ತಂದೆ ಡಾ|| ಕೆ. ಗಣಪತಿ ಭಟ್‌ರವರದೇ ಸಾಹಿತ್ಯ ರಚನೆಗೆ ಪ್ರೇರಣೆ. ಗೃಹಿಣಿಯಾಗಿದ್ದೇ ಪತ್ರಿಕೆಗಳಿಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಕನ್ನಡ ವ್ಯಾಕರಣ
೨ ಅಭಿಜ್ಞಾನ ಶಾಕುಂತಲಂ
೩ ಪ್ರಭಾವೀ ವ್ಯಾವಹಾರಿಕ ಕನ್ನಡ
೪ ಲೇಖನ ಕಲೆ
೫ ಬುದ್ಧಿವಂತರ ಕಥೆಗಳು
೬ ಭೀಮಸೇನ
೭ ಪಶುಪಕ್ಷಿಗಳ ಕಥೆಗಳು
೮ ಪುಣ್ಯವಂತರ ಕಥೆಗಳು
೯ ಸಾಹಸಿ ಗಲಿವರ
೧೦ ಕಿರಿಯರ ಕಥೆಗಳು
೧೧ ಭಾರತದ ವೀರ ಬಾಲಕರು
೧೨ ಕರ್ನಾಟಕದ ವೀರ ಮಹಿಳೆಯರು
೧೩ ಗೃಹಾಲಂಕರಣ
೧೪ ಅಭಿರುಚಿಗಳು
೧೫ ಮಕ್ಕಳ - ಮುದುಕರ ಮಾತುಕತೆಗಳು

"ಬುದ್ಧಿವಂತರ ಕಥೆಗಳು", "ಭೀಮಸೇನ", "ಪಶುಪಕ್ಷಿಗಳ ಕಥೆಗಳು" ಹಾಗೂ "ಪುಣ್ಯವಂತರ ಕಥೆಗಳು" ಈ ಪುಸ್ತಕಗಳನ್ನು ಪಠ್ಯಪುಸ್ತಕಗಳನ್ನಾಗಿ ಆಯ್ಕೆಮಾಡಲಾಗಿದೆ.

ಕೆಲವು ಪುಸ್ತಕಗಳು ಮರುಮುದ್ರಣ ಕಂಡಿವೆ.



ಶೈಲಜಾ ಉಡಚಣ

ಕರ್ನಾಟಕ ಗಡಿನಾಡಾದ ರಾಯಚೂರಿನಲ್ಲಿ ಜನಿಸಿದ ಮಹಂತಮ್ಮ-ಬಿ-ಹಸ್ಮಕಲ್ (ವಿವಾಹಾಪೂರ್ವದ ಹೆಸರು)ರವರು "ಶೈಲಜಾ ಉಡಚಣ" ಎಂದು ಸಾಹಿತ್ಯ ಲೋಕಕ್ಕೆ ಪರಿಚಿತರಾಗಿದ್ದಾರೆ. ಎಂ.ಎ., ಪಿ.ಎಚ್.ಡಿ., ಬಿ.ಎಡ್., ಪದವೀಧರೆಯಾಗಿ ಕಾಲೇಜಿನಲ್ಲಿ ಪ್ರಾಧ್ಯಾಪಕಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಕವನ ಹಾಗೂ ವಿಮರ್ಶಾ ಕ್ಷೇತ್ರದಲ್ಲಿ ಕೃಷಿ ಮಾಡಿದ್ದಾರೆ. ೧೯೭೯ರಲ್ಲಿ "ಕಾದುನೋಡು" ಕವನ ಸಂಕಲನವನ್ನು ಕನ್ನಡ ಸಾಹಿತ್ಯ ಪರಿಷತ್ತು ವರ್ಷದ ಮಹಿಳೆಯರ ಉತ್ತಮ ಪುಸ್ತಕ ಎಂದು ಗೌರವಿಸಿದೆ,

ಇವರ ಪ್ರಕಟಿತ ಕೃತಿಗಳು :

ಕವನ ಸಂಕಲನ :

೧ ಕಾದುನೋಡು-೧೯೭೯

೨ ಒಂದು ಗಳಿಗೆ-೧೯೭೨

೩ ಸ್ವಗತ-೧೯೮೧

"ಸ್ವಗತ" ೧೯೮೧ರ ಕರ್ನಾಟಕ ವಿಶ್ವವಿದ್ಯಾನಿಲಯದ ಎರಡನೇ ಬಿ.ಎಸ್ಸಿ.. ಪಠ್ಯ ಪುಸ್ತಕವಾಗಿದೆ.

೧೯೭೪ರ ಜನವರಿಯಲ್ಲಿ ಸರ್ವಭಾಷಾ ಸಮ್ಮೇಳನ ದೆಹಲಿಯಲ್ಲಿ ನಡೆದಾಗ ಕರ್ನಾಟಕವನ್ನು ಪ್ರತಿನಿಧಿಸಿದ್ದಾರೆ.

ಕನ್ನಡದಂತೆ ಉರ್ದು ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದಾರೆ. ಲೇಖನ, ವಿಮರ್ಶೆ, ಸಮೀಕ್ಷೆಗಳು ನಾಡಿನ ಅನೇಕ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ.



ಶ್ರೀಮತಿ ಎಸ್. ಜಿ.

ಮೈಸೂರಿನ ಶ್ರೀಮತಿಯವರು ಬಿ.ಎಸ್ಸಿ., ಪದವೀಧರೆ. ವಾದ್ಯಸಂಗೀತ (ವೀಣೆ) ಹಾಗೂ ಹಿಂದೀ ಪ್ರವೀಣರು. ಬೆಂಗಳೂರಿನಲ್ಲಿ ಅಕೌಂಟೆಂಟ್ ಜನರಲ್ ಆಫೀಸಿನಲ್ಲಿ ಆಡಿಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಸಂಗೀತಾಸಕ್ತಿ, ಭಕ್ತಿ ಗೀತೆಗಳ ಹಾಡುವಿಕೆ, ಸ್ವತಃ ಗೀತೆಗಳನ್ನು ರಚಿಸುವಂತೆ ಪ್ರೇರೇಪಿಸಿದೆ.

ಇವರ ಪ್ರಕಟಿತ ಕೃತಿಗಳು :

ಮಕ್ಕಳ ಪುಸ್ತಕ :

೧ ಶ್ರೀ ಕೃಷ್ಣ ಚೈತನ್ಯ-೧೯೭೬

೨ ರವಿದಾಸ-೧೯೭೯

ಚರ್ಚೆ, ವಿಚಾರಗೋಷ್ಠಿಗಳಲ್ಲಿ ಆಸಕ್ತಿ ಹೊಂದಿದ್ದಾರೆ. ಬಾನುಲಿಯ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ,



ಡಾ|| ಸಂಧ್ಯಾರೆಡ್ಡಿ ಕೆ. ಆರ್.

ಚಿತ್ರದುರ್ಗದಲ್ಲಿ ಜನಿಸಿದ ಸಂಧ್ಯಾರವರು ಎಂ.ಎ., ಪಿ.ಎಚ್.ಡಿ, (ಜಾನಪದ) ಮಾಡಿಕೊಂಡಿದ್ದಾರೆ. ಜನಪದಕ್ಕೆ ಸಂಬಂಧಿಸಿದ ಅನೇಕ ಲೇಖನಗಳನ್ನು ಬರೆದು ನಾಡಿನ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಅನೇಕ ಕಡೆ ಉಪನ್ಯಾಸಗಳನ್ನು ಮಂಡಿಸಿದ್ದಾರೆ. ಕನ್ನಡ ಜಾನಪದ ವಿಶ್ವಕೋಶದ ಭಾಷಾಂತರಕಾರ್ತಿಯಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಜಾನಪದ ತರಗತಿಯ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಗೂ ಬೆಂಗಳೂರಿನ ಎನ್.ಜಿ.ಇ,ಎಫ್.ನಲ್ಲಿ ಭಾಷಾಂತರ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಕನ್ನಡ ಜನಪದ ಕಥೆಗಳು (ಸಂಶೋಧನಾ ಗ್ರಂಥ)

೨ ಮೂವತ್ತು ಜನಪದ ಕಥೆಗಳು

ಸಂಧ್ಯಾರೆಡ್ಡಿಯವರು ಲೇಖಕಿ ಅನಸೂಯಾ ರಾಮರೆಡ್ಡಿಯವರ ಮಗಳಾಗಿದ್ದಾರೆ.



ಸಂಧ್ಯಾಶರ್ಮ ವೈ. ಕೆ.

"ಪವಿತ್ರ" ಎಂಬ ಕಾವ್ಯನಾಮದಲ್ಲಿ ಹಾಗೂ 'ಸಂಧ್ಯಾಶರ್ಮ' ಎಂಬ ಹೆಸರಿನಲ್ಲಿ ಬರೆಯುತ್ತಿರುವ ಸಂಧ್ಯಾರವರು ಬೆಂಗಳೂರಿನವರು. ಎಂ.ಎ. (ಕನ್ನಡ) ಪದವೀಧರೆ. ಪತ್ರಿಕೋದ್ಯಮ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಇವರು ಪ್ರಜಾಮತ, ಪ್ರಜಾ ಪ್ರಭುತ್ವಗಳಲ್ಲಿ ಉಪಸಂಪಾದಕಿಯಾಗಿ ಅನುಭವ ಗಳಿಸಿದ್ದಾರೆ. ಈಗ 'ಇಂಚರ" ಮಾಸಪತ್ರಿಕೆಯ ಸಲಹಾ ಸಂಪಾದಕಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಅಂತರರಾಷ್ಟ್ರೀಯ ಮಹಿಳಾ ವರ್ಷದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾ ಪುಸ್ತಕ ಸ್ಪರ್ಧೆಯಲ್ಲಿ "ಮಹಿಳೆ ಮತ್ತು ಉದ್ಯೋಗ" ಪುಸ್ತಕಕ್ಕೆ ಬಹುಮಾನ ಬಂದಿದೆ, ಹಾಗೂ ಕೆನರಾ ಬ್ಯಾಂಕಿನ ವಿಶೇಷ ಬಹುಮಾನ ಕೂಡ ಸಂದಿದೆ. ಅನೇಕ ಕಥಾ ಸ್ಪರ್ಧೆಗಳಲ್ಲಿ ಇವರ ಕಥೆಗಳಿಗೆ ಬಹುಮಾನ ದೊರೆತಿವೆ. ನಾಡಿನ ಪತ್ರಿಕೆಗಳಲ್ಲಿ ಇವರ ನೂರಕ್ಕೂ ಹೆಚ್ಚು ಸಣ್ಣಕತೆಗಳು, ಲೇಖನ, ಪ್ರಬಂಧ, ವಿಮರ್ಶೆ ಪ್ರಕಟವಾಗಿವೆ. ಚರ್ಚೆ–ನಾಟಕ, ರೂಪಕ, ಭಾಷಣ, ಕತೆ ಬಾನುಲಿಯಲ್ಲಿ ಪ್ರಸಾರವಾಗಿವೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿಗಳು ;

೧ ಪರಿವೇಶ-೧೯೭೬

೨ ಕವಣೆಗಿಟ್ಟ ಕಲ್ಲು-೧೯೭೯

೩ ಮಹಿಳೆ ಮತ್ತು ಉದ್ಯೋಗ-೧೯೭೫

೪ ಕಿರುಗುಟ್ಟುವ ದನಿಗಳು (ಕಥಾ ಸಂಕಲನ)-೧೯೭೯

೫ ಅಹಲ್ಯಾಬಾಯಿ ಹೋಳ್ಕರ್ (ಮಕ್ಕಳ ಸಾಹಿತ್ಯ)-೧೯೭೬

ನೃತ್ಯ, ನಾಟಕ, ಅಭಿನಯ, ಚಿತ್ರಕಲೆಗಳನ್ನು ಅಭ್ಯಾಸ ಮಾಡಿದ್ದಾರೆ. ಸಂಗೀತ, ಕುಶಲಕಲೆಗಳಲ್ಲಿ ಆಸಕ್ತಿ ಹೊಂದಿದ್ದಾರೆ.



ಸರಸ್ವತಿಗೌಡ ಎಂ.

ಬಿ.ಎ. ಪದವೀಧರೆಯಾದ ಇವರು ಎಂ.ಎ. ವಿದ್ಯಾರ್ಥಿನಿ. ಚನ್ನಪಟ್ಟಣ ತಾಲ್ಲೂಕಿನ ಶೆಟ್ಟಿಹಳ್ಳಿಯ ಮತ್ತೀಕೆರೆಯಲ್ಲಿದ್ದಾರೆ. ತ್ರಿವೇಣಿ ಕಥಾ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಹಾಗೂ ವಿದ್ಯಾರ್ಥಿ ಕವಿಗೋಷ್ಠಿಯಲ್ಲಿ ದ್ವಿತೀಯ ಬಹುಮಾನ ದೊರಕಿಸಿಕೊಂಡಿದ್ದಾರೆ.

ಇವರ ಪ್ರಕಟಿತ ಕೃತಿ :

ಮುಂಗಾರು (ಕವನ ಸಂಕಲನ) ೧೯೮೦



ಸರಸ್ವತಿ ಜಿ.

ಮಂಗಳೂರಿನಲ್ಲಿ ಜನಿಸಿದ ಸರಸ್ವತಿಯವರು ಎಂ. ಎಸ್ಸಿ. ಪದವೀಧರೆ. ಮೈಸೂರಿನ ಮಾನಸಗಂಗೋತ್ರಿಯಲ್ಲಿ ಗೃಹವಿಜ್ಞಾನ ವಿಭಾಗದಲ್ಲಿ ರೀಡರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ೧೯೭೫ರ ಮಹಿಳಾ ವರ್ಷದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನವನ್ನು "ಮಹಿಳೆ ಮತ್ತು ಅಲಂಕರಣ" ಪುಸ್ತಕ ದೊರಕಿಸಿ ಕೊಂಡಿದೆ. ಕನ್ನಡ ಅಧ್ಯಯನ ಸಂಸ್ಥೆಯ ಗೃಹವಿಜ್ಞಾನ ವಿಭಾಗದ ಪುಸ್ತಕ ಸ್ಪರ್ಧೆಯಲ್ಲಿ "ಆಹಾರ ಪೋಷಣೆ" ಮೊದಲ ಬಹುಮಾನ ಗಳಿಸಿದೆ.

ಇವರ ಪ್ರಕಟಿತ ಕೃತಿಗಳು :

೧ ಮಹಿಳೆ ಮತ್ತು ಅಲಂಕರಣ
೨ ಆಹಾರ ಪೋಷಣೆ

ಇವರಿಗೆ ಚಿತ್ರಕಲೆಯಲ್ಲಿ ಅಭಿರುಚಿ ಇದೆ.



ಸರಸ್ವತಿ ವಿಠ್ಠಲಪೂಜಾರ

ಬಿಜಾಪುರದ ಸರಸ್ವತಿಯವರು ಎಂ.ಎ. ಪದವೀಧರೆ. ಕನ್ನಡ ಉಪನ್ಯಾಸಕಿಯಾಗಿ ಕಲಬುರ್ಗಿ ಮಹಾವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಥೆ, ವಿಮರ್ಶೆ. ನಾಟಕ, ಜಾನಪದ ಸಾಹಿತ್ಯದಲ್ಲಿ ಆಸಕ್ತಿ ಬೆಳಸಿಕೊಂಡು ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. 'ಸರಸ್ವತಿ ಚಿಮ್ಮಲಗಿ' ಎಂಬ ಹೆಸರಿನಲ್ಲಿ ಬರೆಯುತ್ತಿದ್ದರು.

ಇವರ ಪ್ರಕಟಿತ ಕೃತಿ :

ನಾವು ನಿಮ್ಮವರೇ ಸ್ವಾಮಿ (ಕವನ ಸಂಕಲನ)

ಕ್ರೀಡಾಪಟು, ಆಕಾಶವಾಣಿ, ದೂರದರ್ಶನ ಕಲಾವಿದೆಯಾಗಿದ್ದಾರೆ.



ಸರಸ್ವತಿ ವೆಂಕಟೇಶ್ ಎಸ್. ಎಸ್.

ಹಾಸನದಲ್ಲಿ ನೆಲೆಸಿರುವ ಸರಸ್ವತಿಯವರ ಜನ್ಮಸ್ಥಳ ಶಿವಮೊಗ್ಗ. ಬಿ.ಎಸ್ಸಿ. ಪದವೀಧರೆಯಾಗಿ, ಅಧ್ಯಾಪಕಿಯಾಗಿ ದುಡಿಯುತ್ತಿದ್ದಾರೆ. ಸಮಾಜಸೇವೆಯೊಂದಿಗೆ ಸಾಹಿತ್ಯದ ಅಭಿರುಚಿಯಿರುವುದರಿಂದ ಅನೇಕ ಕತೆ, ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ನಾಡಿನ ಪ್ರಮುಖ ಪತ್ರಿಕೆಗಳಲ್ಲಿ, ವಿಶೇಷಾಂಕಗಳಲ್ಲಿ ಬಹುಮಾನಿತ ಬರಹ ಬರೆದ ಹಿರಿಮೆ ಇವರದು.

ಇವರ ಪ್ರಕಟಿತ ಕೃತಿ :

ಭೂತಯ್ಯನ ಗುಡಿ (ಮಕ್ಕಳ ಸಾಹಿತ್ಯ)
(ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆ) - ೧೯೭೯

ಯೋಗಾಭ್ಯಾಸದ ಅಭ್ಯಾಸ ನಡೆಸಿದ್ದಾರೆ.



ಸರಿತಾ ಕುಸುಮಾಕರ ದೇಸಾಯಿ

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯಲ್ಲಿ ಜನಿಸಿದ ಸರಿತಾರವರು ಗುಲ್ಬರ್ಗಾದಲ್ಲಿ ನೆಲೆಸಿದ್ದಾರೆ. ಬಿ.ಎ., ಎಲ್.ಎಲ್.ಬಿ. ವ್ಯಾಸಂಗ ಮಾಡಿ ನ್ಯಾಯವಾದಿ ವೃತ್ತಿಯನ್ನಲಂಬಿಸಿದ್ದಾರೆ. ಹಿಂದಿ ರಾಷ್ಟ್ರಭಾಷಾ ವಿಶಾರದರಾಗಿದ್ದಾರೆ. ಮರಾಠಿ ಭಾಷೆಯ ಪರಿಚಯವಿದೆ. ತೆಲುಗು, ತಮಿಳು, ಉರ್ದುಗಳನ್ನು ಸಹ ಅರ್ಥ ಮಾಡಿಕೊಳ್ಳಬಲ್ಲ ಬಹುಭಾಷಾ ಕಲಾವಿದೆಯಾಗಿದ್ದಾರೆ.

೧೯೮೦ರಲ್ಲಿ "ಕಾಶಿಯಲ್ಲಿ ಕಂಡದ್ದೇನು ?" ಎಂಬ ಕಥಾ ಸಂಕಲನಕ್ಕೆ ವರ್ಷದ ಉತ್ತಮ ಮಹಿಳಾ ಕೃತಿ ಎಂದು ಧಾರವಾಡದ ವಿದ್ಯಾವರ್ಧಕ ಸಂಘದ ಬಹುಮಾನ ದೊರೆತಿದೆ. ಅನೇಕ ಬಿಡಿ ಲೇಖನ, ಕಥೆಗಳಿಗೆ ಮೆಚ್ಚುಗೆ ಬಹುಮಾನಗಳು ದೊರೆತಿವೆ. ನ್ಯಾಯವಾದಿಗಳಾದ್ದರಿಂದ ಕಾನೂನಿನ ಪರಿಚಯಿಸುವ ಲೇಖನಗಳನ್ನು ಬರೆದಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ನಾನು ಲಕ್ಕಿ (ಕಥಾ ಸಂಕಲನ) ೧೯೭೮
೨ ಕಾಶಿಯಲ್ಲಿ ಕಂಡದ್ದೇನು ? (ಕಥಾ ಸಂಕಲನ) - ೧೯೮೦
೩ ಮಹಡಿ ಮನೆ (ಹಿಂದಿ, ಮರಾಠಿ ಕಥೆಗಳ ಅನುವಾದ) - ೧೯೮೦
೪ ಬಾಲ ವಿವಾಹ ನಿಷೇಧ (ಕಾನೂನು) - ೧೯೭೮

ನಾಟಕ, ನೃತ್ಯ ಕಲೆಗಳಲ್ಲಿ ಅಭಿರುಚಿ ಇದೆ. ಆಕಾಶವಾಣಿ ಹಾಗೂ ದೂರದರ್ಶನಗಳಲ್ಲಿ ಪ್ರಹಸನ, ಏಕಪಾತ್ರಾಭಿನಯ ಹಾಗೂ ಕಾನೂನು ಮಾಹಿತಿ ಮಾಲಿಕೆಯಲ್ಲಿ ಭಾಗವಹಿಸಿದ್ದಾರೆ. ಪರಭಾಷೆಯಿಂದ ಉತ್ತಮ ಸಾಹಿತ್ಯವನ್ನು ಅನುವಾದ ಮಾಡಲು ಆಸಕ್ತಿಯಿದೆ. ಸಮಾಜಸೇವೆಯಲ್ಲಿರುವ ಆಸಕ್ತಿಯಿಂದಾಗಿ ವಿವಿಧ ಸಂಘ ಸಂಸ್ಥೆಗಳ ನಿಕಟ ಸಂಪರ್ಕವನ್ನಿರಿಸಿಕೊಂಡಿದ್ದಾರೆ.



ಸರೋಜಾ ನಾರಾಯಣರಾವ್

೧೯೩೧ರಲ್ಲಿ ಮೈಸೂರಿನಲ್ಲಿ ಜನಿಸಿದ್ದಾರೆ. ಇಂಟರ್ ಮೀಡಿಯಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಸಂಗೀತದಲ್ಲಿ ವಿದ್ವತ್ ಪಡೆದುಕೊಂಡಿದ್ದಾರೆ. ಹಿಂದೆ ಕಥೆಗಾರ, ಕಥಾವಳಿಗಳು ನಡೆಸಿದ ಕಥಾ ಸ್ಪರ್ಧೆಗಳಲ್ಲಿ ಇವರು ಬರೆದ ಅನೇಕ ಸಣ್ಣ ಕತೆಗಳು ಬಹುಮಾನಿತವಾಗಿವೆ. ಇನ್ನೂ ಅನೇಕ ಸಣ್ಣ ಕತೆ - ಶಿಶು ಸಾಹಿತ್ಯ ಲೇಖನಗಳು ನಾಡಿನ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿ :

೧ ಹಳ್ಳಿಯಿಂದ ದಿಳ್ಳಿಗೆ
೨ ಆಸೆಯ ಸೇತುವೆ
೩ ಜಾಲಿಯ ಮರ
೪ ಅಪಾತ್ರ
೫ ವಾನಪ್ರಸ್ಥ -೧೯೮೧

ಶಿಶು ಸಾಹಿತ್ಯ :

೬ ದಿನೇಶನ ರಜೆಯ ದಿನಗಳು ೧೯೭೨
೭ ರಶ್ಮಿಯ ಗೆಳತಿ ಮಾಧವಿ - ೧೯೭೪

ಇವರಿಗೆ ಶಿಶು ಸಾಹಿತ್ಯದಲ್ಲಿ ಅಪಾರ ಆಸಕ್ತಿ. ಸಾಹಿತ್ಯವನ್ನು ಕುರಿತ ಚರ್ಚೆ ವಿಚಾರ ಗೋಷ್ಠಿ, ಮಕ್ಕಳ ರೂಪಕ - ನಾಟಕ ರಚನೆಯ ಅನೇಕ ಕಾರ್ಯಕ್ರಮಗಳನ್ನು ಬೆಂಗಳೂರಿನ ಬಾನುಲಿಯಲ್ಲಿ ಪ್ರಸಾರ ಮಾಡಿದ್ದಾರೆ.



ಸರೋಜಾರಾವ್ ಕಾಕೋಳು

ನಲವತ್ತರ ಹರೆಯದ ಕಾಕೋಳು ಸರೋಜಾರಾವ್ ಅವರು ಬಿ.ಎ. ಪದವೀಧರೆ. ಸರ್ಕಾರಿ ಕಾರ್ಯಾಲಯವೊಂದರಲ್ಲಿ ಸೂಪರಿಂಟೆಂಡೆಂಡ್ ಆಗಿ ಉದ್ಯೋಗದಲ್ಲಿದ್ದಾರೆ. ಲೇಖನ, ಕತೆಗಳನ್ನು ಬರೆಯುವುದು ಇವರ ಚಿಕ್ಕಂದಿನ ಹವ್ಯಾಸ.

ಇವರ ಪ್ರಕಟಿತ ಕೃತಿಗಳು :

ಕಾದಂಬರಿಗಳು :

೧ ನಿಶ್ಚಿತಾರ್ಥ
೨ ಎರಡು ಮನೆ
೩ ಚಿಗುರೆಲೆ ಬಾಡಿದಾಗ
೪ ಅವಳ ಹೆಜ್ಜೆ
೫ ಹೊನ್ನಿನ ಹಂಬಲ
೬ ಸೋತಬಾಳು
೭ ಮಾಗಿಯ ಕನಸು
೮ ಅವಳ ಮಗ
೯ ಚಿರವಿರಹಿ
೧೦ ವಿಜಯ ಹಸ್ತ
೧೧ ಮಾತು ಕೊಟ್ಟವಳು
೧೨ ಮರಳಿ ಮಣ್ಣಿಗೆ
೧೩ ಮನೆ ಬೆಳಕು
೧೪ ಮೋಹದ ಬಲೆ
೧೫ ಹೇಮಾವತಿ
೧೬ ಆಶ್ರಯ
೧೭ ದೇವರ ಗೊಂಬೆ
೧೮ ಮಾಂಗಲ್ಯ ಮಾಲೆ
೧೯ ಕೆಸರು ಮೊಸರು
೨೦ ತಾಯಿ ನೆರಳು
೨೧ ಬಳ್ಳಿ ಹಬ್ಬಿದಾಗ
೨೨ ಶರಣಾಗತ
೨೩ ವರ್ಷಕಾಲ-ಮರಗಳೋದಯ
೨೪ ಶ್ರಾವಣ ಸುಪ್ರಭಾತ
೨೫ ಪ್ರೇಮ ಕಾಶ್ಮೀರ
೨೬ ಬೆಟ್ಟದ ಗೌರಿ

೨೭ ಮಂಗಳ ವಾದ್ಯ
೨೮ ಹೃದಯ ಸಂಗಮ
೨೯ ದೂರದ ಮನೆ
೩೦ ಕ್ಷಮೆ - ಸಾಕ್ಷಿ
೩೧ ಉಪಕಾರಿ
೩೨ ಹೇಮಾವತಿ - ಮನೆಸೊಸೆ
೩೩ ಆಶ್ರಯ
೩೪ ಅಮೃತಧಾರೆ
೩೫ ಬಲಿದಾನ
೩೬ ಕಣ್ಣು ಮುಚ್ಚಾಲೆ
೩೭ ಗೆದ್ದವರು ಯಾರು ?
೩೮ ಸ್ವರ್ಗದ ಬಾಗಿಲು
೩೯ ಹೆಜ್ಜೆ ಗೆಜ್ಜೆ
೪೦ ಮೌನ ಗೀತೆ
೪೧ ಕುಂಕುಮ ಬಲ
೪೨ ಪ್ರೇಮ ದೋಣಿ
೪೩ ನಿರ್ಣಯ
೪೪ ಬೆಳಕು ಹರಿದಾಗ
೪೫ ಪಂಜರದ ಬಾಳು
೪೬ ಅಧಿಕಾರ
೪೭ ನೆರಳು
೪೮ ಗುಪ್ತಗಾಮಿನಿ
೪೯ ಬಾಳಿದ ಮನೆ
೫೦ ದೆವ್ವದ ಮನೆ
೫೧ ನನ್ನ ತಂಗಿ
೫೨ ಭ್ರಮೆ
೫೩ ಶ್ರಾವಣ ಸಂಧ್ಯಾ
೫೪ ಬಂಗಾರದ ದೊಡ್ಡಿ

ನಾಟಕಗಳು :

೧ ಕರ್ನಾಟಕ ರಮಾರಮಣ (ಚಾರಿತ್ರಿಕ)
೨ ಲಾಟ್ರಿ ಲಕ್ಷ್ಮಿ (ಹಾಸ್ಯ)
೩ ಬಂಜೆ (ವೈಚಾರಿಕ)
೪ ರೂಪಶಿಲ್ಪಿ (ಜಾನಪದ)



ಡಾ|| ಸರೋಜಿನಿ ಮಹಿಷಿ

ಸರೋಜಿನಿ ಮಹಿಷಿಯವರು ಧಾರವಾಡದವರು. ಎಂ.ಎ., ಪಿ.ಎಚ್.ಡಿ. ಹಾಗೂ ಎಲ್.ಎಲ್.ಬಿ. ಪದವೀಧರೆ. ಹಿಂದಿ ಸಾಹಿತ್ಯ ರತ್ನ ಕೂಡ ಆಗಿದ್ದಾರೆ. ಒಳ್ಳೆಯ ವಾಗ್ಮಿ.

ಸಾಹಿತ್ಯ,ಸಮಾಜ ಸೇವೆ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಕೃಷಿ ಮಾಡಿದ್ದಾರೆ. "ವೀರಮಾತೆ" ಪತ್ರಿಕೆಯ ಸಂಪಾದಕಿಯಾಗಿದ್ದರು.

ಇವರ ಪ್ರಕಟಿತ ಕೃತಿಗಳು :

೧ ಕರ್ನಾಟಕ ಕವಿಯತ್ರಿಯರು (ಡಾಕ್ಟರೇಟ್ ಪ್ರಬಂಧ)
೨ ಮುಳ್ಳು ಗುಲಾಬಿ (ಮಕ್ಕಳ ಕವನ ಸಂಗ್ರಹ) - ೧೯೬೪
೩ ನವಿಲು - ಇಂಚರ ,, - ೧೯೬೭
೪ ರೂಪಾ (ಕಥಾ ಸಂಕಲನ)
೫ ಈಜಿ ಕಟಿಂಗ್ (ಹೊಲಿಗೆ ಶಾಸ್ತ್ರ)
೬ ಕಸೂತಿ ಕಲೆ ,,
೭ ಸುಲಭ ಗೃಹ ವಿಜ್ಞಾನ
೮ ಶಕುಂತಲಾ (ಅನುವಾದಿತ ಕಾದಂಬರಿ)
೯ ಸ್ವಾತಂತ್ರ್ಯ ಕಹಳೆ (ಕವನ ಸಂಕಲನ)
೧೦ ಹಿಮಾಲಯದಿಂದ ರಾಮೇಶ್ವರ (ಕವನ ಸಂಕಲನ)

೧೧ ಸಾಹಿತ್ಯ ಮಥನ
೧೨ ಅತಿಥಿ ಸತ್ಕಾರ ಮತ್ತು ಇತರ ಹರಟೆಗಳು
೧೩ ಕನ್ನಡ ಬಾಣ ಕಾದಂಬರಿ (ಸಂಪಾದಿತ)

ಹಿಂದಿಯಲ್ಲಿ "ಯೆ ಭಿ ಹವಾರೆ" ಪ್ರಶಸ್ತಿ ವಿಜೇತ ಕೃತಿಯಾಗಿದೆ. "ಮುಳ್ಳು ಗುಲಾಬಿ", "ನವಿಲು - ಇಂಚರ" ಕವನ ಸಂಕಲನಗಳು ರಾಜ್ಯ ಸರ್ಕಾರದ ಪ್ರಶಸ್ತಿ ಪಡದಿವೆ. "ಯೆ ಭಿ ಹವಾರೆ", "ಮೂಷ ತಿಮ್ಮ ದರ್ಶನ್" (ಮಂಕುತಿಮ್ಮನ ಕಗ್ಗದ ಹಿಂದಿ ಅನುವಾದ) ಪ್ರಕಟವಾಗಿದೆ.

ಹತ್ತು ವರ್ಷ ಕೇಂದ್ರ ಪ್ರವಾಸೋದ್ಯಮ ರಾಜ್ಯ ಮಂತ್ರಿಯಾಗಿದ್ದರು. ಈಗ ಜನತಾ ಪಕ್ಷದ ಕಾರ್ಯದರ್ಶಿಯಾಗಿದ್ದಾರೆ. ಅನೇಕ ಸಂಘ ಸಂಸ್ಥೆಗಳ ಅಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.



ಡಾ|| ಸರೋಜಿನಿ ಶಿಂತ್ರಿ

ಡಾ || ಸರೋಜಿನಿ ಶಿಂತ್ರಿಯವರು ಇಂಗ್ಲೀಷ್ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಇಂಗ್ಲೀಷ್ ಪ್ರಾಧ್ಯಾಪಕಿ. ಇವರು ವಿಜಾಪುರದಲ್ಲಿ ೪-೭-೧೯೩೦ರಲ್ಲಿ ಜನಿಸಿದರು. ಪಿ.ಎಚ್.ಡಿ.ಗಳಿಸಿದ್ದಾರೆ. ಅಧ್ಯಯನ, ಬರವಣಿಗೆ, ಸಂಗೀತ ಇವರ ಆಸಕ್ತಿಯ ವಿಷಯಗಳು. ಅನೇಕ ವಿಚಾರಗೋಷ್ಠಿ, ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಸ್ತ್ರೀ ದೃಷ್ಟಿ ಸೃಷ್ಟಿ (ರೇಡಿಯೋ ಭಾಷಣಗಳ ಸಂಕಲನ) - ೧೯೭೫

೨ ಮಹಿಳೆ ನಡೆದು ಬಂದ ದಾರಿ - ೧೯೭೭

೩ ಮಹಿಳೆಯರ ಸಮಸ್ಯೆ ಮತ್ತು ಸಾಧನೆಗಳು - ೧೯೭೬

೪ ಪ್ರಗತಿ ಪಥದಲ್ಲಿ ಮಹಿಳೆ - ೧೯೭೮

೫ ಭಾಗೀರತಿದೇವಿ ಪುರಾಣಿಕ (ಜೀವನ ಚರಿತ್ರೆ) - ೧೯೭೯

ಇಂಗ್ಲೀಷ್ ಭಾಷೆಯಲ್ಲಿ :

೬ ವುಮೆನ್ ಇನ್ ಷೇಕ್‌ಪಿಯರ್ - ೧೯೭೮

೭ ವುಮೆನ್ ಹರ್ ಪ್ರಾಬ್ಲಮ್ಸ್ ಅಂಡ್ ಹರ್ ಅಚೀವ್‌ಮೆಂಡ್ಸ್, ೧೯೭೬



"ಸಾಯಿಸುತೆ"
(ರತ್ನಾ ಅಶ್ವಥ್)

ರತ್ನಾ ಅಶ್ವಥ್‌ಅವರು 'ಸಾಯಿಸುತೆ' ಎಂಬ ಕಾವ್ಯನಾಮದಿಂದ ಪುಸ್ತಕಗಳನ್ನು ಬರೆಯುತ್ತಾರೆ. ೧೯೪೭ರಲ್ಲಿ ಕೋಲಾರದಲ್ಲಿ ಜನಿಸಿದ ರತ್ನಾ ಗೃಹಿಣಿ. ಇವರ ಕೃತಿಗಳಲ್ಲಿ ಕೆಲವು ಮರು ಮುದ್ರಣ ಕಂಡಿವೆ. ಧಾರಾವಾಹಿಯಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಿವೆ,

ಇವರ ಪ್ರಕಟಿತ ಕಾದಂಬರಿಗಳು :

೧	ಮಿಂಚು	೧೬	ನಾಟ್ಯಸುಧಾ
೨	ಹೊಂಬೆಳಕು	೧೭	ಮಾನಸವೀಣಾ
೩	ವಿವಾಹ ಬಂಧನ	೧೮	ಆರಾಧಿತೆ
೪	ವಿಧಿವಂಚಿತೆ	೧೯	ಗಂಧರ್ವಗಿರಿ
೫	ವಸುಂಧರಾ	೨೦	ನಿಶೆಯಿಂದ ಉಷೆಗೆ
೬	ಬಾಡದ ಹೂವು	೨೧	ಸಮಾಗಮ
೭	ಕರಗಿದ ಕಾರ್ಮೋಡ	೨೨	ಸುಮಧುರ ಭಾರತಿ
೮	ಶುಭಮಿಲನ	೨೩	ಚೈತ್ರದ ಕೋಗಿಲೆ
೯	ಗಿರಿಧರ	೨೪	ಮಂಗಳದೀಪ
೧೦	ಮಧುರಗಾನ	೨೫	ಸ್ವರ್ಣಮಂದಿರ
೧೧	ಡಾ॥ ವಸುಧಾ	೨೬	ಶ್ವೇತಗುಲಾಬಿ
೧೨	ಮಮತೆಯ ಸಂಕೋಲೆ	೨೭	ಆಶಾಪಲ್ಲವಿ
೧೩	ಹೃದಯರಾಗ	೨೮	ಮಂದಾರ ಕುಸುಮ
೧೪	ಸಪ್ತಪದಿ	೨೯	ಪ್ರೇಮಸಾಫಲ್ಯ
೧೫	ಜೀವನ ಸಂಧ್ಯಾ	೩೦	ವಸಂತದ ಚಿಗುರು

ಮಕ್ಕಳಿಗಾಗಿ ಸಣ್ಣ ಕತೆಗಳನ್ನು ಬರೆಯುವ ಹವ್ಯಾಸವಿರುವ ರತ್ನಾ, ಆಕಾಶವಾಣಿಗಾಗಿ ರೂಪಕಗಳನ್ನು ಬರೆದು ಪ್ರಸಾರ ಮಾಡಿದ್ದಾರೆ.



ಸಾವಿತ್ರಮ್ಮ ಎಚ್. ವಿ.

ಸ್ವಾತಂತ್ರ್ಯಪೂರ್ವ ಕಾಲದಿಂದ ಮೂರು ದಶಕಗಳ ಸಾರ್ಥಕ ಸಾಹಿತ್ಯಸೇವ ಎಚ್. ವಿ. ಸಾವಿತ್ರಮ್ಮನವರದು.

ಇವರ ಜನ್ಮಸ್ಥಳ ಬೆಂಗಳೂರು. ೧೯೧೩ರಲ್ಲಿ ಇವರು ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಬಿ.ಎ. ಪದವೀಧರೆ. ವಿದ್ಯಾಭ್ಯಾಸ ಕಾಲದಲ್ಲಿ ವಿಶ್ವವಿದ್ಯಾಲಯದ ಮೂರು ಚಿನ್ನದ ಪದಕಗಳು, ಎರಡು ಬಹುಮಾನ ಇವರ ಪಾಲು. ಸೃಜನಾತ್ಮಕ ಬರವಣಿಗೆಯೊಂದಿಗೆ ಜಗತ್ತಿನ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕಿಳಿಸುವ ಅನುವಾದ ಕಾರ್ಯ ನಡೆಸಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ನಿರಾಶ್ರಿತ (ಕಥಾ ಸಂಗ್ರಹ) - ೧೯೪೯
೨ ಮರು ಮದುವೆ ,, - ೧೯೫೪
೩ ಸರಿದ ನೆರಳು ,, - ೧೯೬೫
೪ ಪ್ರತೀಕ್ಷೆ ,,
೫ ಲಕ್ಷ್ಮಿ ,, - ೧೯೭೮
೬ ಮನೆ ಜಗತ್ತು (ಅನುವಾದ) - ೧೯೫೫
೭ ಗೋರಾ ,, - ೧೯೬೧
೮ ಚಿನ್ನದ ದೋಣಿ ,, - ೧೯೫೮
೯ ಸ್ಮರ ಭಸ್ಮ - ೧೯೫೯
೧೦ ಶಶಿರೇಖಾ–ನೀಲನೇತ್ರ - ೧೯೬೨

೧೧ ರಾಮು ಸೀತೆ ರಾವಣ (ಕಾದಂಬರಿ) - ೧೯೮೦
೧೨ ಅಜ್ಜಿಯ ಕಥೆಗಳು (ಭಾಗ ೨) (ಮಕ್ಕಳ ಸಾಹಿತ್ಯ)
೧೩ ಎಚ್.ವಿ. ನಂಜುಂಡಯ್ಯ ಅವರ ಜೀವನ ಕಾರ್ಯ (ಜೀವನ ಚರಿತ್ರೆ)
೧೪ ನೌಕಾಘಾತ (ಅನುವಾದ) - ೧೯೫೪
೧೫ ಹಸಿವೋ ಹಸಿವು - ೧೯೬೨
೧೬ ಮದುವಣಗಿತ್ತಿ - ೧೯೫೯
೧೭ ಮಹಾತ್ಮಾ ಗಾಂಧಿ (ಜೀವನ ಚರಿತ್ರೆ) ೧೯೬೧
೧೮ ಮಹಾತ್ಮಾ ಗಾಂಧಿ (ಸಂದೇಶ) - ೧೯೫೯

ಜೆಖಾವ್ ಪುಸ್ತಕದ ಅನುವಾದ 'ಮದುವಣಗಿತ್ತಿ'ಗೆ ಇಂಡೋ-ಸೋವಿಯತ್ ಪ್ರಶಸ್ತಿ ಲಭಿಸಿತು. ೧೯೬೫ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯಿಂದ ಇವರ ಸಾಹಿತ್ಯ ಸೇವೆಗೆ ಪ್ರಶಸ್ತಿ - ಸನ್ಮಾನ. ೧೯೮೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸನ್ಮಾನಿತರಾದರು.



ಸೀತಮ್ಮ ನಂಜೇಗೌಡ

ಚಿಕ್ಕಮಗಳೂರಿನ ಮೂಡಿಗೆರೆಯಲ್ಲಿ ಜನಿಸಿದ ಸೀತಮ್ಮನವರು ಆ ಪ್ರದೇಶದಲ್ಲಿ ಸುಪರಿಚಯರಾಗಿದ್ದಾರೆ.

ಇವರ ಪ್ರಕಟಿತ ಕೃತಿಗಳು :

೧ ಹಳ್ಳಿಯ ಜೀವನ - ೧೯೭೫
೨ ವಾಸಂತಿ - ೧೯೭೯
೩ ನಾವು ಕಂಡ ಅಮೆರಿಕಾ - ೧೯೮೧

ಈ ಪುಸ್ತಕಗಳು ಇವರು ಜೀವನದಲ್ಲಿ ಕಂಡ ಅನುಭವವನ್ನು ಲೇಖನಿಯಲ್ಲಿ ಹಿಡಿದಿಡಲು ಪ್ರಯತ್ನಿಸುತ್ತವೆ. ಉಪಾಧ್ಯಾಯಿನಿ ವೃತ್ತಿಯಲ್ಲಿದ್ದುಕೊಂಡು ಕನ್ನಡದ ಅಭಿಮಾನ ಹಾಗೂ ಜಾನಪದ ಸಾಹಿತ್ಯದಲ್ಲಿ ಆಸಕ್ತಿಯನ್ನಿಟ್ಟುಕೊಂಡಿದ್ದಾರೆ. ಇತ್ತೀಚೆಗೆ ನಿವೃತ್ತರಾಗಿದ್ದಾರೆ.



ಸುಕನ್ಯಾ ಮಾರುತಿ

ಬಳ್ಳಾರಿ ಜಿಲ್ಲೆಯ ಕೊಟ್ಟೂರು ಸುಕನ್ಯಾರವರ ಜನ್ಮಸ್ಥಳವಾಗಿದೆ. ಕನ್ನಡ ಎಂ.ಎ. ಪದವೀಧರೆಯಾಗಿದ್ದಾರೆ. ಧಾರವಾಡದಲ್ಲಿ ಉಪನ್ಯಾಸಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವರ ಪ್ರಕಟಿತ ಕೃತಿ:

ಪರಿಸರದಲ್ಲಿ (ಕವನ ಸಂಗ್ರಹ)

